


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 16 ಭಾನುವಾರ 2025

ಸಂಪುಟ: 45 | ಸಂಚಿಕೆ: 326 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಡಿಜಿಪಿ ಡಾ.ರಾಮಚಂದ್ರ ರಾವ್‌ಗೆ ಕಡ್ಡಾಯ ರಜೆ!



ಬೆಂಗಳೂರು, ಮಾ.15–ನಟಿ ರನ್ಯಾರಾವ್ ಚಿನ್ನ ಕಳ್ಳ ಸಾಗಾಣಿಕೆ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಈಕೆಯ ಮಲತಂದೆ ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿರುವ ಡಿಜಿಪಿ ಡಾ.ಕೆ.ರಾಮಚಂದ್ರ ರಾವ್ ಅವರನ್ನು ಕಡ್ಡಾಯ ರಜೆ ಮೇಲೆ ಕಳುಹಿಸಲಾಗಿದೆ. ಎಡಿಜಿಪಿ ಶರತ್ ಚಂದ್ರ ಅವರಿಗೆ ಈ ಜವಾಬ್ದಾರಿಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ದುಬೈನಿಂದ 14.5 ಕೆ.ಜಿ. ಚಿನ್ನ ಕಳ್ಳ ಸಾಗಾಣಿಕೆ ವೇಳೆ ನಟಿ ರನ್ಯಾರಾವ್ ಡಿಆರ್‌ಐಗೆ ಸಿಕ್ಕಿಬಿದ್ದಿದ್ದರು. ಈಕೆ ಈ ವರ್ಷದ ಜನವರಿಯಿಂದ ಸಿಕ್ಕಿಬೀಳುವವರೆಗೆ 27 ಬಾರಿ ದುಬೈಗೆ ಪ್ರಯಾಣ ಬೆಳೆಸಿದ್ದರು. ಕೆಲವೊಮ್ಮೆ ಒಂದೇ ದಿನದಲ್ಲಿ ದುಬೈಗೆ ತೆರಳಿ ವಾಪಸ್ಸಾಗಿದ್ದರು ಎಂಬುದು ವಿಚಾರಣೆ ವೇಳೆ ಬಯಲಾಗಿತ್ತು. ತನ್ನ ಮಲತಂದೆ ಡಿಜಿಪಿ ಕೆ.ರಾಮಚಂದ್ರ ರಾವ್ ಅವರ ಅಧಿಕಾರದ ಪ್ರಭಾವ ಬಳಸಿಕೊಂಡು ವಿಮಾನ ನಿಲ್ದಾಣದ ಪ್ರೋಟೋಕಾಲ್ ಸೌಲಭ್ಯ ಬಳಸಿಕೊಂಡು ಯಾವುದೇ ತಪಾಸಣೆಗೆ ಒಳಗಾಗದೇ ಬಚಾವಾಗುತ್ತಿದ್ದಳು ಎಂಬುದು ತನಿಖೆಯಿಂದ ಗೊತ್ತಾಗಿದೆ.

ನಾನವಳಲ್ಲ...ನಾನವಳಲ್ಲ...

ನಾನು ಚಿನ್ನ ಕಳ್ಳ ಸಾಗಾಣೆ ಮಾಡಿಲ್ಲ, ನನ್ನ ಮೇಲೆ ಸುಳ್ಳು ಮೊಕದ್ದಮೆ ದಾಖಲಿಸಲಾಗಿದೆ

ಕಂದಾಯ ಗುಪ್ತಚರ ನಿರ್ದೇಶನಾಲಯದ ಹೆಚ್ಚುವರಿ ಮಹಾ ನಿರ್ದೇಶಕರಿಗೆ ರನ್ಯಾರಾವ್ ಜೈಲಿಂದಲೇ ದೂರು

ತನಿಖೆ ಹೆಸರಲ್ಲಿ ನನ್ನ ಮೇಲೆ ಹಲ್ಲೆ ನಡೆಸಲಾಗಿದೆ; ಖಾಲಿ ಕಾಗದಗಳ ಮೇಲೆ ಸಹಿ ಪಡೆಯಲಾಗಿದೆ

ಬೆಂಗಳೂರು, ಮಾ. 15(ಕೆಎಂಶಿ)– ನಾನು ಚಿನ್ನ ಕಳ್ಳಸಾಗಾಣೆ ಮಾಡಿಲ್ಲ, ನನ್ನ ಮೇಲೆ ಬಲವಂತವಾಗಿ ಸುಳ್ಳು ಮೊಕದ್ದಮೆ ದಾಖಲಿಸಲಾಗಿದೆ ಎಂದು ಚಿತ್ರನಟಿ ರನ್ಯಾರಾವ್ ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಹೆಚ್ಚುವರಿ ಮಹಾನಿರ್ದೇಶಕರಿಗೆ ದೂರು ನೀಡಿದ್ದಾರೆ.

ಈ ಸಂಬಂಧ ನಾಲ್ಕು ಪುಟಗಳ ದೂರನ್ನು ಗುಪ್ತಚರ ಎಸ್‌ಪಿ ಮೂಲಕ ಕೇಂದ್ರ ಅಧಿಕಾರಿಗೆ ಜೈಲಿನಿಂದಲೇ ರವಾನೆ ಮಾಡಿದ್ದಾರೆ. ವಿಮಾನದಲ್ಲೇ ತನ್ನ ಮುಖದ ಮೇಲೆ ಡಿಆರ್‌ಐ ಅಧಿಕಾರಿಗಳು ಹಲ್ಲೆ ನಡೆಸಿದರು. ಅಲ್ಲದೆ, ನ್ಯಾಯಾಧೀಶರ ಮುಂದೆ ಹಿಂಸೆ ನೀಡಿದರೆಂದು ಹೇಳಿಕೆ ಕೊಟ್ಟರೆ ನಿಮ್ಮ ತಂದೆಯ ಹೆಸರನ್ನೂ ಈ ಪ್ರಕರಣದಲ್ಲಿ ಸಿಲುಕಿಸುವುದಾಗಿ ಬೆದರಿಕೆ ಹಾಕಿದ್ದರು. ನಿಮ್ಮ ತಂದೆ ಈ ಪ್ರಕರಣದಲ್ಲಿ ಶಾಮೀಲಾಗಿಲ್ಲ ಎಂಬುದು ತಿಳಿದಿದೆ. ಆದರೂ ಅವರ ಹೆಸರನ್ನು ಪ್ರಕರಣದಲ್ಲಿ ಎಳೆದು ತರುವುದಾಗಿ ಬೆದರಿಕೆ ಹಾಕಿದರು ಎಂದು ದೂರಿನಲ್ಲಿ ತಿಳಿಸಿದ್ದಾರೆ.

ದುಬೈನಿಂದ ನಾನು ಬೆಂಗಳೂರಿಗೆ ಬಂದ ಸಂದರ್ಭದಲ್ಲಿ ಕಂದಾಯ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು ಬಲವಂತವಾಗಿ ಬಂಧಿಸಿ, ಇಲ್ಲ–ಸಲ್ಲದ ಆರೋಪ ಹೊರಿಸಿದ್ದಾರೆ. ನಾನು ಚಿನ್ನವನ್ನೇ ತಂದಿಲ್ಲ, ನಾನು ಅಮಾಯಕಿ, ನನ್ನ ಮೇಲೆ ಆರೋಪ ಮಾಡಲಾಗಿದೆ. ಡಿಆರ್‌ಐ ಅಧಿಕಾರಿಗಳು ನನ್ನ ಮೇಲೆ ಆರೋಪ ಹೊರಿಸಿ ಬಲವಂತವಾಗಿ ಹೇಳಿಕೆ ಪಡೆದುಕೊಂಡು, ತಪ್ಪೊಪ್ಪಿಗೆ ಪತ್ರಕ್ಕೆ ಸಹಿ ಹಾಕಿಸಿಕೊಂಡಿದ್ದಾರೆ ಎಂಬುದು ತಿಳಿದಿಲ್ಲ. ನ್ಯಾಯಾಲಯಕ್ಕೆ ನನ್ನನ್ನು ಹಾಜರುಪಡಿಸುವವರೆಗೂ ಅಧಿಕಾರಿಗಳು ಮಾನಸಿಕವಾಗಿ ಹಿಂಸೆ ಕೊಟ್ಟಿದ್ದಾರೆ. ಅಲ್ಲದೆ, ನನ್ನ ಮುಖ ಸೇರಿದಂತೆ ಹತ್ತಾರು 15 ಬಾರಿ ದೈಹಿಕ ಹಲ್ಲೆ ನಡೆಸಿದ್ದಾರೆ. ನನ್ನ ವಿರುದ್ಧ ವ್ಯವಸ್ಥಿತ ಪಿತೂರಿ ನಡೆದಿದೆ. ನಾನು ನಿರಪರಾಧಿ, ದುಬೈನಿಂದ ಬೆಂಗಳೂರಿಗೆ ಹಿಂತಿರುಗುವವರೆಗೆ ಏನು ನಡೆದಿದೆ ಎಂಬುದೇ ನನಗೆ ತಿಳಿಯದು.

ನನ್ನ ಮೇಲೆ 14 ಕೆ.ಜಿ.ಗೂ ಹೆಚ್ಚು ಚಿನ್ನ ಕಳ್ಳಸಾಗಣೆ ಆರೋಪ ಮಾಡಲಾಗಿದೆ. ದುಬೈ ವಿಮಾನ ನಿಲ್ದಾಣದಲ್ಲೇ ತಪಾಸಣೆಗೆ ಒಳಗಾಗಿದ್ದೇನೆ. ಅಲ್ಲಿ, ಇಲ್ಲದ ಚಿನ್ನ ಇಲ್ಲಿ ■6ನೇ ಪುಟಕ್ಕೆ



ಬಂಧನಕ್ಕೆ ಮುನ್ನ



ಬಂಧನ ನಂತರ ರನ್ಯಾರಾವ್

ರನ್ಯಾರಾವ್ ಚಿನ್ನ ಕಳ್ಳಸಾಗಣೆ ದಂಧೆಗೆ ರಾಜ್ಯ ಪೊಲೀಸ್ ಪ್ರೋಟೋಕಾಲ್ ಅಧಿಕಾರಿ ಬಳಕೆ

ಬೆಂಗಳೂರು, ಮಾ.15– ನಟಿ ರನ್ಯಾ ರಾವ್ ಚಿನ್ನ ಕಳ್ಳಸಾಗಾಣೆ ದಂಧೆಗೆ ಕರ್ನಾಟಕ ಪೊಲೀಸ್ ಪ್ರೋಟೋಕಾಲ್ ಅಧಿಕಾರಿ (ರನ್ಯಾ ರಾವ್ ಮಲತಂದೆ, ಐಪಿಎಸ್ ಅಧಿಕಾರಿ ರಾಮಚಂದ್ರ ರಾವ್) ಗಳನ್ನು ಬಳಸಿಕೊಳ್ಳಲಾಗಿದೆ ಎಂದು ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ನ್ಯಾಯಾಲಯಕ್ಕೆ ತಿಳಿಸಿದೆ.

ರನ್ಯಾರಾವ್ ಜಾಮೀನು ಅರ್ಜಿ ವಿಚಾರಣೆ ವೇಳೆ, ಬಂಧಿತ ನಟಿ ಈ ವರ್ಷದ ಜನವರಿಯಿಂದ 27 ಬಾರಿ ದುಬೈಗೆ ಪ್ರಯಾಣಿಸಿದ್ದಾರೆ ಎಂದು ಡಿಆರ್‌ಐ ಅಧಿಕಾರಿಗಳ ಪರವಾಗಿ ಮಧು ಎನ್. ರಾವ್ ಅವರು ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ತಿಳಿಸಿದರು. ರನ್ಯಾ, ಕರ್ನಾಟಕ ರಾಜ್ಯ ಪೊಲೀಸ್

ಕೋರ್ಟ್‌ಗೆ ಡಿಆರ್‌ಐ ವರದಿ

ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಿಜಿಪಿ ರ್‍ಯಾಂಕ್ ಅಧಿಕಾರಿ ಕೆ. ರಾಮಚಂದ್ರ ರಾವ್ ಅವರ ಮಲಮಗಳು.

ಇಲ್ಲಿಯವರೆಗಿನ ತನಿಖೆಯ ವೇಳೆ, ಚಿನ್ನ ಕಳ್ಳಸಾಗಣೆಯಲ್ಲಿ ಅತ್ಯಾಧುನಿಕ ಭದ್ರತೆಯನ್ನು ಬೈಪಾಸ್ ಮಾಡಲು ರಾಜ್ಯ ಪೊಲೀಸ್ ಪ್ರೋಟೋಕಾಲ್ ಅಧಿಕಾರಿಗಳನ್ನು ಬಳಸಿಕೊಳ್ಳಲಾಗಿದೆ. ಪೊಲೀಸ್ ಅಧಿಕಾರಿ, ಕುಟುಂಬದವರಿಗೆ ಸಹಾಯ ಮಾಡಲು ಹೇಳಿದ್ದರು. ರಾಜ್ಯದ ಪೊಲೀಸ್ ಪ್ರೋಟೋಕಾಲ್ ಸರ್ವಿಸ್ ಸಹಾಯದಿಂದಲೇ ಸ್ಮಗ್ಲಿಂಗ್ ನಡೆದಿದೆ ಎಂಬುದು ನಮ್ಮ ಆರೋಪ. ಇಲ್ಲವಾದರೆ ರನ್ಯಾ ರಾವ್ ಗ್ರೀನ್ ■6ನೇ ಪುಟಕ್ಕೆ

ಮೊಮ್ಮಕ್ಕಳೊಂದಿಗೆ ತಾತ ಜಲಸಮಾಧಿ

● ತಿ.ನರಸೀಪುರದಲ್ಲಿ ದುರಂತ ● ತಲಾ 2 ಲಕ್ಷ ಪರಿಹಾರ ಘೋಷಣೆ

ತಿ.ನರಸೀಪುರ, ಮಾ.15– ಇಬ್ಬರು ಮೊಮ್ಮಕ್ಕಳೊಂದಿಗೆ ತಾತ ಜಲ ಸಮಾಧಿಯಾದ ಘಟನೆ ತಾಲೂಕಿನ ಹಳೇ ತಿರುಮಕೂಡಲು ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದೆ.

ಹಳೇ ತಿರುಮಕೂಡಲು ಗ್ರಾಮದ ನಿವಾಸಿ, ವೃತ್ತಿಯಲ್ಲಿ ಬಾರ್ ಬೆಂಡಿಂಗ್ ಕೆಲಸ ಮಾಡುತ್ತಿದ್ದ ಸಿ.ದೀಪಕ್ ಅವರ ತಂದೆ ಚೌಡಯ್ಯ (65), ಅವರ ಮೊಮ್ಮಕ್ಕಳಾದ ಭರತ್ ಗೌಡ(11) ಮತ್ತು ಧನುಷ್ ಗೌಡ(9) ಜಲಸಮಾಧಿಯಾದ ದುರ್ದೈವಿಗಳಾಗಿದ್ದು, ನೀರಿನಲ್ಲಿ ಮುಳುಗುತ್ತಿದ್ದ ಮೊಮ್ಮಕ್ಕಳ ರಕ್ಷಿಸಲು ಮುಂದಾದ ತಾತನೂ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಭರತ್‌ಗೌಡ ಪಟ್ಟಣದ ಶಾಲೆಯೊಂದರಲ್ಲಿ 5ನೇ ತರಗತಿಯಲ್ಲಿ ಹಾಗೂ ಧನುಷ್ ಗೌಡ 3ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ತಮ್ಮ ಮನೆಯ ಹಸು ಕರು ಹಾಕಿದ್ದ ಹಿನ್ನೆಲೆಯಲ್ಲಿ ಹಸುವಿನ ಗರ್ಭಕೋಶದ ಕಸ ವನ್ನು ನದಿಗೆ ಎಸೆದು ಬರಲು ತಮ್ಮ ತಾತ ಚೌಡಯ್ಯನವರೊಂದಿಗೆ ಮೊಮ್ಮಕ್ಕಳು ನದಿಗೆ ತೆರಳಿದ್ದಾರೆ.

ಪಟ್ಟಣಕ್ಕೆ ನಿರಂತರವಾಗಿ ನೀರು ಪೂರೈಕೆ ಮಾಡುವ ಹಳೇ ಕಾವೇರಿ ಸೇತುವೆ ಪಕ್ಕದ ಜಾಕ್‌ವೆಲ್ ಬಳಿ ಕಸವನ್ನು ಹಾಕಿ, ಸ್ನಾನ ಮಾಡುವ ವೇಳೆ ಇಬ್ಬರೂ ಬಾಲಕರು ನೀರಿನಲ್ಲಿ ಮುಳುಗಿದ್ದಾರೆ. ಮೊಮ್ಮಕ್ಕಳು ಮುಳುಗುತ್ತಿರುವುದನ್ನು ಕಂಡು ಅವರ ರಕ್ಷಿಸಲು ಮುಂದಾದ ಚೌಡಯ್ಯ ತನ್ನ ಇಬ್ಬರು ಮೊಮ್ಮಕ್ಕಳೊಂದಿಗೆ ಮುಳುಗಿದ್ದಾರೆ ಒಂದೇ ಕುಟುಂಬದ ಮೂವರು ಸಾವನ್ನಪ್ಪಿದ್ದು, ಮೃತದೇಹಗಳನ್ನಿಟ್ಟಿದ್ದ ಸಾರ್ವಜನಿಕ ಆಸ್ಪತ್ರೆಯ ಶವಾಗಾರದ ಬಳಿ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು.

ತಲಾ 2 ಲಕ್ಷ ಪರಿಹಾರ: ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಟಿ.ಜೆ.ಸುರೇಶಾಚಾರ್ ಘಟನೆ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಆದೇಶದ ಮೇರೆಗೆ ಮೃತರ ಕುಟುಂಬಕ್ಕೆ ತಲಾ ಎರಡು ಲಕ್ಷದಂತೆ ಒಟ್ಟು 6 ಲಕ್ಷ ರೂ. ಪರಿಹಾರ ಘೋಷಣೆ ಮಾಡಿದರು. ■6ನೇ ಪುಟಕ್ಕೆ



ತಿ.ನರಸೀಪುರ ಪುರಸಭೆ ವ್ಯಾಪ್ತಿಯ ಹಳೇ ತಿರುಮಕೂಡಲು ಬಳಿ ಕಾವೇರಿ ನದಿಯಲ್ಲಿ ಮುಳುಗಿ ಮೃತಪಟ್ಟ ಚೌಡಯ್ಯ, ಭರತ್‌ಗೌಡ ಹಾಗೂ ಧನುಷ್‌ಗೌಡ

ಕೆಪಿಎಸ್‌ಸಿ ಅಧ್ಯಕ್ಷ, ಸದಸ್ಯರ ಆಯ್ಕೆಗೆ ಶೋಧನಾ ಸಮಿತಿ ರಚನೆ

ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ನಿರ್ಧಾರ



ಬೆಂಗಳೂರು, ಮಾ.15– ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು, ಸದಸ್ಯರ ಆಯ್ಕೆ ಹಾಗೂ ಕೆಪಿಎಸ್‌ಸಿಗೆ ಸುಧಾರಣೆ ತರುವ ಕುರಿತು ಶಿಫಾರಸು ಮಾಡಲು ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರನ್ನೊಳಗೊಂಡ ಶೋಧನಾ ಸಮಿತಿ ರಚಿಸಲು ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ. ಅಲ್ಲದೆ, 2ನೇ ಆಡಳಿತ ಸುಧಾರಣಾ ಆಯೋಗದ ವರದಿಯಲ್ಲಿ ಟಿ.ಎಂ.ವಿಜಯಭಾಸ್ಕರ್ ನೀಡಿರುವ ಶಿಫಾರಸಿನಂತೆ ಕೆಪಿಎಸ್‌ಸಿ ಸದಸ್ಯರ ಸಂಖ್ಯೆಯನ್ನು 14 ರಿಂದ 8ಕ್ಕೆ ಇಳಿಸುವ ಕುರಿತು ಪರಿಶೀಲನೆ ನಡೆಸಲೂ ಸಂಪುಟ ನಿರ್ಧರಿಸಿದೆ.

ನೇಮಕಾತಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ, ಅಕ್ರಮ ಹಾಗೂ ಸ್ವಜನಪಕ್ಷಪಾತದ ಆರೋಪ ಎದುರಿಸುತ್ತಿರುವ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಕಡಿವಾಣ ಹಾಕಲು ಕಳೆದ ಸಚಿವ ಸಂಪುಟ ಸಭೆಯಲ್ಲೇ ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಕಾಯ್ದೆ–1959ಕ್ಕೆ ತಿದ್ದುಪಡಿ ತರಲು ತೀರ್ಮಾನಿಸಲಾಗಿತ್ತು. ಈವರೆಗೆ ಕೆಪಿಎಸ್‌ಸಿ ಕುರಿತ ಯಾವುದೇ ನಿಯಮಾವಳಿ ರೂಪಿಸಲು ಸರ್ಕಾರ ಕೆಪಿಎಸ್‌ಸಿ ಜತೆ ಸಮಾಲೋಚನೆ ಮಾಡಬೇಕು ಎಂಬ ನಿಯಮವಿತ್ತು. ಇದನ್ನು ತೆಗೆದು ಹಾಕಲು ತೀರ್ಮಾನಿಸಿ ಕೆಪಿಎಸ್‌ಸಿಗೆ ನಿಯಮಾವಳಿ ರೂಪಿಸುವುದು ಅಥವಾ ತಿದ್ದುಪಡಿ ತರಲು ಕೆಪಿಎಸ್ಸಿಗೆ ಜತೆ ಸಮಾಲೋಚನೆ ಅಗತ್ಯವಿಲ್ಲ ಎಂದು ತಿದ್ದುಪಡಿ ಮಾಡಲಾಗಿದೆ. ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಹೋಟಾ ಸಮಿತಿ ಶಿಫಾರಸುಗಳನ್ನು ■6ನೇ ಪುಟಕ್ಕೆ

ಮಾರ್ಚ್ 22ರಿಂದ ಐಪಿಎಲ್ ಹಂಗಾಮ



ಸಂಪೂರ್ಣ ವಿವರ ■ಪುಟ–9

ಮೈಸೂರು ಮಿತ್ರ ಭಾನುವಾರ 16 ಮಾರ್ಚ್ 2025

ಮಾ.20ರಿಂದ ಎರಡು ವಾರಗಳ ಕಾಲ ಉಚಿತ ಸಿಇಟಿ ಪರೀಕ್ಷಾ ತರಬೇತಿ

ಗ್ರಾಮೀಣ ವಿದ್ಯಾರ್ಥಿಗಳಿಗೆ ಉಚಿತ ಬಸ್ ವ್ಯವಸ್ಥೆ

ಮೈಸೂರು, ಮಾ.15(ಜಿಎ)–ತಾಂಡವಪುರದಲ್ಲಿರುವ ಎಂಐಟಿ ಕಾಲೇಜಿನಲ್ಲಿ ಮಾ.20ರಿಂದ ಎರಡು ವಾರಗಳ ಉಚಿತ ಸಿಇಟಿ ಪರೀಕ್ಷಾ ತರಬೇತಿ ಆಯೋಜಿಸಲಾಗಿದೆ ಎಂದು ಸಿಇಟಿ ಸಂಯೋಜಕ ಪ್ರೊ.ಎನ್.ಪ್ರದೀಪ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ತಾಲೂಕು ಹಾಗೂ ಸುತ್ತಮುತ್ತಲ ಪ್ರದೇಶಗಳ ಪ್ರತಿಭಾನ್ವಿತ ಅಭ್ಯರ್ಥಿಗಳ ತಾಂತ್ರಿಕ ಭವಿಷ್ಯಕ್ಕೆ ಅನುಕೂಲವಾಗಲೆಂದು ಸತತ ಎಂಟು ವರ್ಷಗಳಿಂದ ಕಾಲೇಜಿನಲ್ಲಿ ಉಚಿತ ಸಿಇಟಿ ತರಬೇತಿ ಆಯೋಜಿಸಲಾಗುತ್ತಿದ್ದು, ಅದರಂತೆ ಈ ಬಾರಿ ಮಾ. 20ರಿಂದ ಆರಂಭವಾಗುತ್ತಿದೆ. ಮೈಸೂರು, ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ, ಸರಗೂರು, ಹೆಚ್.ಡಿ.ಕೋಟೆ, ಟಿ.ನರಸೀಪುರ, ಪಾಂಡವಪುರ, ಮಳವಳ್ಳಿ, ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ಕೆ.ಆರ್. ನಗರ ಮತ್ತು ಹುಣಸೂರು ತಾಲೂಕುಗಳಿಂದ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಸಿಇಟಿ ಮಾರ್ಗದರ್ಶಕರಾದ ಪ್ರೊ.ಮೊಹಮ್ಮದ್ ಸಲಾಮತ್ ಮಾತನಾಡಿ, ಈ ಅವಕಾಶ ಬಳಸಿಕೊಂಡು ಅರ್ಹ ಅಭ್ಯರ್ಥಿಗಳು ಸರ್ಕಾರಿ ಕೋಟಾ ಅಡಿಯಲ್ಲಿ ಪ್ರವೇಶಾತಿ ಪಡೆದು ತಮ್ಮ ಎಂಜಿನಿಯರಿಂಗ್ ಕನಸನ್ನು ನನಸು ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ. 8310854887, 9980832371 ಅನ್ನು ಸಂಪರ್ಕಿಸಿ ಎಂದು ತಿಳಿಸಿದರು.

ಏ.11ರಿಂದ ಪ್ರತಿಭಾ ಪಲ್ಲವ ಬೇಸಿಗೆ ಶಿಬಿರ

ಮೈಸೂರು, ಮಾ.15(ಜಿಎ)–ಕನಸು ರಂಗ ತಂಡ ಹಾಗೂ ದೇಚಿ ಕ್ರಿಯೇಷನ್ಸ್ ಸಂಯುಕ್ತಾಶ್ರಯದಲ್ಲಿ ಏ.11ರಿಂದ ಮೇ 9ರವರೆಗೆ ಗೋಕುಲಂ 3ನೇ ಹಂತದ ಸಾಂಸ್ಕೃತಿಕ ಭವನದಲ್ಲಿ ಮಕ್ಕಳಿಗಾಗಿ ಪ್ರತಿಭಾ ಪಲ್ಲವ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಈ ವಿಷಯ ತಿಳಿಸಿ, ಶಿಬಿರದಲ್ಲಿ ರಂಗಭೂಮಿ ಪರಿಚಯ, ನಟನೆ, ಸಂಗೀತ ಸೇರಿದಂತೆ 15ಕ್ಕೂ ಹೆಚ್ಚಿನ ವಿವಿಧ ರೀತಿಯ ಚಟುವಟಿಯಲ್ಲಿ ತೊಡಗಿಸಲಾಗುವುದು. ದೂ. 91132 87730, 99029 87805 ಸಂಪರ್ಕಿಸಿ ಎಂದರು.

ವಿವಿಧ ಕ್ಷೇತ್ರಗಳ ಸಾಧಕ ಮಹಿಳೆಯರ ಕೊಡುಗೆ ದೊಡ್ಡದು

ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅಭಿಮತ


ಮೈಸೂರಿನ ಕಿಂಗ್ಸ್ ಕೋರ್ಟ್ ಹೋಟೆಲ್‌ನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಆಯೋಜಿಸಿದ್ದ ಅಂತರರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಧಕಿಯರನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸನ್ಮಾನಿಸಿದರು.

ಮೈಸೂರು, ಮಾ.15(ಬಿಎಲ್‌ಯು)–ಕುಟುಂಬ ನಿರ್ವಹಣೆ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವ ಮಹಿಳೆಯರ ಕೊಡುಗೆ ದೊಡ್ಡದು ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಅಭಿಪ್ರಾಯಪಟ್ಟರು.

ಮೈಸೂರು ಕಿಂಗ್ಸ್ ಕೋರ್ಟ್ ಹೋಟೆಲ್‌ನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಧಕಿಯರನ್ನು ಸನ್ಮಾನಿಸಿ ಮಾತನಾಡಿದ ಅವರು, ಹಲವು ಒತ್ತಡಗಳ ನಡುವೆ ಮಹಿಳೆ ತನ್ನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾಳೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಮಕ್ಕಳ ಪರಿಪಾಲನೆಯಲ್ಲಿ ಮಹಿಳೆಯ ಪಾತ್ರ ದೊಡ್ಡದಿದೆ. ಅದರಲ್ಲೂ ಉದ್ಯೋಗಸ್ಥ ಮಹಿಳೆ ಹೊರಗೆ ಕೆಲಸ ಮಾಡಿ, ಮನೆಯಲ್ಲೂ ತನ್ನ ಜವಾಬ್ದಾರಿಯನ್ನು ಚೆನ್ನಾಗಿ ನಿರ್ವಹಿಸುತ್ತಾಳೆ. ಕುಟುಂಬಕ್ಕೆ ಬರುವ ಆದಾಯದಿಂದ ಇತಿಮಿತಿಯಲ್ಲಿ ಖರ್ಚು ಮಾಡಿ ಸಂಸಾರ ಸರಿದೂಗಿಸಿಕೊಂಡು ಹೋಗುತ್ತಾಳೆ. ಇಂತಹ ಸಂದರ್ಭದಲ್ಲಿ ತನಗೆ ಎದುರಾಗುವ ಸಂಕಷ್ಟವನ್ನು ಯಾರಿಗೂ ತೋರ್ಪಡಿಸಿಕೊಳ್ಳುವುದಿಲ್ಲ ಎಂದು ರಾಜೀವ್ ಹೇಳಿದರು.

ಮಹಿಳೆಯರು ಕೆಲಸ ಮಾಡದ ಕ್ಷೇತ್ರವೇ ಇಲ್ಲ, ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕುವುದರಿಂದ ಹಿಡಿದು ಸೇನೆಯಲ್ಲಿ ಕೆಲಸ ಮಾಡುವ ತನಕ ಮಹಿಳೆಯರ ಹೆಜ್ಜೆ ಗುರುತು ಪ್ರತಿಯೊಂದು ಕ್ಷೇತ್ರದಲ್ಲಿ ಕಂಡು ಬರುತ್ತಿದೆ. ಕಡು ಬಡತನದಲ್ಲೂ ಸವಾಲುಗಳನ್ನು ಸಮರ್ಥವಾಗಿ ಎದುರಿಸಿದ ಬಹಳಷ್ಟು ಮಹಿಳೆಯರ ಸಾಧನೆ ದೊಡ್ಡದಿದೆ ಎಂದು ರಾಜೀವ್ ಹೇಳಿದರು.

ಇದೇ ವೇಳೆ ಮಾತನಾಡಿದ ವಾಣಿಜ್ಯ ತೆರಿಗೆ ಜಂಟಿ ಆಯುಕ್ತೆ ಎಸ್.ತೇಜಸ್ವಿನಿ, ಮನೆ ಹಾಗೂ ಉದ್ಯೋಗ ಸ್ಥಳದಲ್ಲಿ ಮಹಿಳೆಗೆ ಹಲವು ಸವಾಲು ಎದುರಾದಾಗ ಎದೆಗುಂದದೆ ಅದನ್ನು ಸಮರ್ಥವಾಗಿ ಎದುರಿಸುತ್ತಾಳೆ. ಕುಟುಂಬದ ಒತ್ತಡ, ಉದ್ಯೋಗದ ಒತ್ತಡದಲ್ಲಿದ್ದರೂ ವಿಚಲಿತಳಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಮಹಿಳಾ ದಿನಾಚರಣೆ ಅಂಗವಾಗಿ ಕೃಷಿ ಕ್ಷೇತ್ರದಿಂದ ಎಂ.ಸಿ.ಹೇಮಲತಾ, ಸಹಕಾರ ಮತ್ತು ಸಾಮಾಜಿಕ ಕ್ಷೇತ್ರದಿಂದ ಮಂಜುಳಾ, ಆರೋಗ್ಯ ಮತ್ತು ಸಾಮಾಜಿಕ ಕ್ಷೇತ್ರದಿಂದ ಮಾಸ್ತಮ್ಮ, ಕಲಾ ಕ್ಷೇತ್ರದಿಂದ ಕೃಪ ಫಡ್ಕೆ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಪ್ರಾಂತೀಯ ಅಧಿಕಾರಿ ಗುರುಪ್ರಸಾದ್ ಬಂಗೇರ, ನಿರ್ದೇಶಕರಾದ ಭಾರತಿ ಜಿ.ಭಟ್, ಶೈಲಜಾ ತಪಲಿ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಾ.23ರಂದು ನೇತ್ರ ಉಚಿತ ತಪಾಸಣಾ ಶಿಬಿರ

ಮೈಸೂರು, ಮಾ.15(ಜಿಎ)– ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ ಮಾ.23ರಂದು ಬೆಳಗ್ಗೆ 7.30ರಿಂದ ಮಧ್ಯಾಹ್ನ 1.30 ರವರೆಗೆ ನಗರದ ಜಗನ್ಮೋಹನ ಅರಮನೆ ಆವರಣದಲ್ಲಿ ನೇತ್ರ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಅಧ್ಯಕ್ಷ ಮೈಸೂರು ಜಯರಾಂ ಈ ವಿಷಯ ತಿಳಿಸಿ, ಶಿಬಿರದಲ್ಲಿ ಕಣ್ಣಿನ ಪೊರೆ, ಗ್ಲಾಕೋಮಾ, ನೀರು ಸೋರುವಿಕೆ, ವಾರೆಗಣ್ಣು, ಕಣ್ಣಿನಲ್ಲಿ ಗೀಚು ಬರುವುದು, ಹತ್ತಿರ ಮತ್ತು ದೂರದೃಷ್ಟಿ ದೋಷ, ಕಣ್ಣಿನಲ್ಲಿ ಬಿರುಕು, ರಾತ್ರಿ ಕುರುಡುತನ ಮೊದಲಾದವನ್ನು ತಪಾಸಣೆ ನಡೆಸಿ, ವೈದ್ಯರು ಸಲಹೆ ನೀಡಲಿದ್ದಾರೆ. ನಗರದ ಸಾರ್ವಜನಿಕರು ಪ್ರಯೋಜನ ಪಡೆಯಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಸುರೇಶ್, ವೆಂಕಟೇಶ್ ಇದ್ದರು.

ಮೂರು ಪುಸ್ತಕಗಳಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪ್ರದಾನ

ಎಲ್ಲ ವಯೋಮಾನದವರ ಸೆಳೆದಿಡುವ ಶಕ್ತಿ ನಾಟಕಕ್ಕಿದೆ; ಹಿರಿಯ ಕವಿಯತ್ರಿ ಪ್ರೊ.ಚ.ಸರ್ವಮಂಗಳ ಅಭಿಮತ


ಕರ್ನಾಟಕ ನಾಟಕ ಅಕಾಡೆಮಿಯಿಂದ ರಂಗಭೂಮಿ, ನಾಟಕಗಳಿಗೆ ಸಂಬಂಧಿಸಿದ ಕೃತಿಗಳಿಗೆ ವಾರ್ಷಿಕ ಪುಸ್ತಕ ಬಹುಮಾನಗಳನ್ನು ಮೂವರು ಪ್ರಸಿದ್ಧ ಪುಸ್ತಕ ಕರ್ತೃಗಳಿಗೆ ಶನಿವಾರ ಪ್ರದಾನ ಮಾಡಲಾಯಿತು.

ಮೈಸೂರು, ಮಾ.15(ಎಸ್‌ಪಿಎನ್)–ಕರ್ನಾಟಕ ನಾಟಕ ಅಕಾಡೆಮಿಯಿಂದ ರಂಗಭೂಮಿ, ನಾಟಕಗಳಿಗೆ ಸಂಬಂಧಿಸಿದ ಕೃತಿಗಳಿಗೆ ಪ್ರತಿ ವರ್ಷ ಕೊಡಮಾಡುವ ವಾರ್ಷಿಕ ಪುಸ್ತಕ ಬಹುಮಾನಗಳನ್ನು ಮೂವರು ಪ್ರಸಿದ್ಧ ಪುಸ್ತಕ ಕರ್ತೃಗಳಿಗೆ ಶನಿವಾರ ಪ್ರದಾನ ಮಾಡಲಾಯಿತು.

ಮೈಸೂರು ರಂಗಾಯಣ ಆವರಣದ ಭೂಮಿಗೀತಾದಲ್ಲಿ 2021ನೇ ಸಾಲಿಗೆ ಹಿರಿಯ ಸಾಹಿತಿ ಡಾ.ಬಸವರಾಜ ಸಬರದ ರಚಿತ 'ರಂಗ ಮಾಧ್ಯಮ', 2022ನೇ ಸಾಲಿಗೆ ಡಾ.ಟಿ.ವಿ.ವೆಂಕಟೇಶಮೂರ್ತಿ ರಚಿತ 'ಕನ್ನಡ ನಾಟಕಗಳು ರಾತ್ರಿ ರೂಪಕಗಳು' ಹಾಗೂ 2023ನೇ ಸಾಲಿಗೆ ಹಿರಿಯ ಕಲಾವಿದೆ ರಾಮೇಶ್ವರಿ ವರ್ಮಾ ರಚಿತ 'ಬಿಟ್ಟೆನೆಂದರು ಬಿಡದು ಈ ಮಾಯೆ' ಕೃತಿಗೆ ಕರ್ನಾಟಕ ನಾಟಕ ಅಕಾಡೆಮಿಯಿಂದ ಕೊಡ ಮಾಡುವ ವಾರ್ಷಿಕ ಪುಸ್ತಕ ಬಹುಮಾನಗಳನ್ನು ಆಯಾಯ ಕರ್ತೃಗಳಿಗೆ ನೀಡಿ ಗೌರವಿಸಲಾಯಿತು.


ಪ್ರಶಸ್ತಿ ವಿತರಿಸಿ ಮಾತನಾಡಿದ ಹಿರಿಯ ಕವಯತ್ರಿ ಪ್ರೊ.ಚ.ಸರ್ವಮಂಗಳ, ಅಪಮಾನ, ಅನುಮಾನಗಳನ್ನು ಹೊರತುಪಡಿಸಿ ಇರುವ ಸ್ಥಿತಿಯ ಅನುಭವವೇ ರಂಗಭೂಮಿ ಶಿಕ್ಷಣ. ನಾಟಕಗಳು ಅಂತಹ ಅನುಭವ ನೀಡುತ್ತವೆ. ಎಲ್ಲ ವಯೋಮಾನದವರನ್ನು ಒಂದೆಡೆ ಸೆಳೆದಿಡುವ ಶಕ್ತಿ ನಾಟಕಕ್ಕಿದೆ. ಕೋಣೆಯೊಳಗೆ ಮಾಡುವ ನಾಟಕಗಳಿಗಿಂತ ಬಯಲಿನಲ್ಲಿ ಮಾಡುವ ನಾಟಕಗಳು ಹೆಚ್ಚು ಪ್ರಭಾವ ಬೀರುತ್ತವೆ ಎಂದರು.

ಬಯಲು ನಾಟಕಗಳನ್ನು ನೋಡಲು ಮಕ್ಕಳನ್ನು ಪ್ರೋತ್ಸಾಹಿಸಬೇಕು. ಅಲ್ಲಿ ಮಕ್ಕಳ ಮನಸ್ಸು ಬಯ ಲಾಗುತ್ತದೆ. ನಾಟಕವನ್ನು ವಿಮರ್ಶೆ ಮಾಡುವುದು ಬಹಳ ಕಷ್ಟದ ಕೆಲಸ. ಅದನ್ನು ಕೃತಿಯಾಗಿ, ರಂಗ ಕೃತಿಯಾಗಿ ಎರಡು ಭಿನ್ನ ನೋಟದಲ್ಲಿ ನೋಡಕೊಳ್ಳ ಬೇಕು. ಪ್ರಶಸ್ತಿ ಪಡೆದ ಮೂರು ಕೃತಿಗಳು ವಿಶೇಷವಾಗಿವೆ. 'ರಂಗ ಮಾಧ್ಯಮ' ಕೃತಿ ನಾಟಕಗಳಿಗೆ ಒಂದು ಶಿಸ್ತಿನ ಚೌಕಟ್ಟನ್ನು ನೀಡಿದರೆ, 'ಕನ್ನಡ ನಾಟಕ ಗಳು ರಾತ್ರಿ ರೂಪಕಗಳು' ಕೃತಿಯಲ್ಲಿ ರಾತ್ರಿಯಲ್ಲಿ ಒಳ್ಳೆಯದು, ಕೆಟ್ಟದು ಹೇಗೆ ರೂಪುಗೊಳ್ಳುತ್ತದೆ ಎಂಬುದನ್ನು ಹಲವು ನಾಟಕಗಳ ವಿಮರ್ಶೆಯೊಂದಿಗೆ ಮಾಹಿತಿ ನೀಡುತ್ತದೆ. 'ಬಿಟ್ಟೇನೆಂದರೂ ಬಿಡದು ಈ ಮಾಯೆ' ಕೃತಿಯು ನಾಟಕವು ಹೇಗೆ ನಮ್ಮ ಬದುಕನ್ನು ಆವರಿಸುತ್ತದೆ. ನಟನೆ ಮಾಡುವವರ ಬದುಕನ್ನು ಸಮಾಜದ ಕಣ್ಣೆದುರು ನಿಲ್ಲಿಸುತ್ತದೆ. ಹಾಗಾಗಿ ಈ ಮೂರು ಕೃತಿಗಳನ್ನು ಎಲ್ಲರೂ ಓದಬೇಕು ಎಂದು ಮನವಿ ಮಾಡಿದರು.

ದಿ.ನ.ರತ್ನ ನಿರ್ದೇಶನದ ನಾಟಕಗಳಲ್ಲಿ ಉತ್ಪ್ರೇಕ್ಷೆ ಮಾತುಗಳನ್ನು ಎಂದಿಗೂ ಇಷ್ಟು ಪಡುತ್ತಿರಲಿಲ್ಲ. ಮೈಸೂರಿನ ಸರಸ್ವತಿಪುರಂ ಮಧ್ಯದಲ್ಲಿರುವ ತೆಂಗಿನ ತೋಪು (ಸಮತೆಂತೋ) ತಂಡ 1967ರಲ್ಲಿ ಸ್ಥಾಪಿಸಲಾಯಿತು. ಕಾಲಕ್ರಮೇಣ ಈ ಹವ್ಯಾಸಿ ತಂಡ ಶಾಶ್ವತವಾಗಿ ಉಳಿಯಿತು. ನ.ರತ್ನ, ರಂಗಭೂಮಿ ಯಲ್ಲಿ ಹವ್ಯಾಸಿ ತಂಡದ ಶಾಶ್ವತ ನಿಧಿಯನ್ನು ಬಿಟ್ಟು ಹೋಗಿದ್ದಾರೆ. ಅಲ್ಲದೆ, ಅವರು ರಚಿಸಿರುವ 'ಅಯಾನ್ ಶಾಂತಿ ಕುಟೀರೆ ನಾಟಕದಲ್ಲಿ 5 ವರ್ಷದಿಂದ 90 ವರ್ಷದವರೂ ಪಾತ್ರನಿರ್ವಹಣೆ ಮಾಡಿದ್ದು, ಇಂತಹ ಅದ್ಭುತ ಗಳನ್ನು ರಂಗಭೂಮಿಯಲ್ಲಿ ಕಾಣಲು ಸಾಧ್ಯ ಎಂದರು.

ಸಿನಿಮಾ ಬದುಕು ಥಳುಕು–ಬಳುಕಿನ ಮೇಕಪ್ ಬದುಕು. ಆದರೆ, ರಂಗಭೂಮಿ ಬದುಕು ವರ್ಣಮಯ ಜಗತ್ತಿನ 'ಬಣ್ಣದ ಬದುಕು' ಇಂತಹ ನೋಟಗಳನ್ನು ರಂಗಭೂಮಿಯಲ್ಲಿ ಕಾಣಬಹುದು. ಒಂದು ಬಾರಿ ನಾಟಕದ ಹುಚ್ಚು ಹಿಡಿದರೆ, ಆಗ ಎಂತಹುದೇ ಸಂದರ್ಭವಿದ್ದರೂ ಆ ವ್ಯಕ್ತಿ ನಾಟಕಗಳಲ್ಲಿ ಪಾತ್ರ ನಿರ್ವಹಿಸದೇಇರಲಾರರು. ಹಾಗಾಗಿ ನಾಟಕ, ನಾವು ಹೇಗಿದ್ದೇವೋ ಆಗಿಯೇ ಸ್ವೀಕರಿಸುವ ನೈಜ ಬದುಕಿನ ಚಿತ್ರಣ ಎಂದು ಬಣ್ಣಿಸಿದರು. ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ಡಾ.ನಾಗೇಶ್ ವಿ. ಬೆಟ್ಟಕೋಟೆ ಮಾತನಾಡಿ, ಇತ್ತೀಚೆಗೆ ಯಾವುದೇ ಕಲಾವಿದ, ನಿರ್ದೇಶಕನನ್ನು ರಾಜಕೀಯ ಉದ್ದೇಶದಿಂದ ಗುರುತಿಸುವ ಕೆಲಸವಾಗುತ್ತಿದೆ. ಈ ವ್ಯವಸ್ಥೆ ಬದಲಾಗಬೇಕು. ರಂಗ ಚಟುವಟಿಕೆಗೆ ಸಂಬಂಧಿಸಿದ ಅಕಾಡೆಮಿಗಳು ರಾಜಕೀಯದ ಹೊರತಾಗಿ ಕಾರ್ಯ ನಿರ್ವಹಿಸಬೇಕು. ಆಗೊಂದು ವೇಳೆ ಕಲಾವಿದರು ತಮ್ಮ ಗೊತ್ತಿಲ್ಲದೆ, ರಾಜಕೀಯ ಪಕ್ಷಗಳೊಂದಿಗೆ ಗುರುತಿಸಿಕೊಂಡಿದ್ದರೆ, ಅಂತಹ ವ್ಯವಸ್ಥೆ ಹೊರಬರಲು ಪ್ರಯತ್ನಿಸಬೇಕು. ಅಂತೆಯೇ ಮುಂದಿನ ದಿನಗಳಲ್ಲಿ ಅಕಾಡೆಮಿಯಿಂದ ರಂಗಭೂಮಿ, ನಾಟಕಕ್ಕೆ ಸಂಬಂಧಿಸಿದಂತೆ ವಾರ್ಷಿಕವಾಗಿ ಉತ್ತಮ ಕೃತಿ, ವಿಮರ್ಶೆ, ಸಂಶೋಧನೆ ಹೆಸರಿನಲ್ಲಿ 3 ಪ್ರಶಸ್ತಿ ನೀಡುವಂತೆ ಆಯೋಜಕರಲ್ಲಿ ಮನವಿ ಮಾಡಿದರು. ವೇದಿಕೆಯಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ.ಕೆ.ವಿ. ನಾಗರಾಜಮೂರ್ತಿ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಅಕಾಡೆಮಿ ರಿಜಿಸ್ಟ್ರಾರ್ ನಿರ್ಮಲಾ ಮಠಪತಿ, ಸದಸ್ಯ ಸಂಚಾಲಕಿ ಎಂ.ಎ.ಜಾಹಿದಾ, ಅಕಾಡೆಮಿ ಸದಸ್ಯ ರವೀಂದ್ರ ನಾಥ ಸಿರಿವರ ಸೇರಿದಂತೆ ಇತರರಿದ್ದರು.


ವಿದ್ಯುತ್ ಕಾಮಗಾರಿಗೆ ಗುದ್ದಲಿಪೂಜೆ...


ತಿ.ನರಸೀಪುರ ತಾಲೂಕಿನ ಟಿ.ಬೆಟ್ಟಹಳ್ಳಿ ಗ್ರಾಮದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವತಿಯಿಂದ ಮಾದರಿ ಗ್ರಾಮ ಯೋಜನೆಯಡಿ ವಿದ್ಯುತ್ ಕಾಮಗಾರಿಗಳಿಗೆ ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಸಿಇಒ ಎಸ್.ಯುಕೇಶ್ ಕುಮಾರ್ ಸೇರಿದಂತೆ ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಔದ್ಯೋಗಿಕ, ಯುವ ಸಬಲೀಕರಣ ಕಾರ್ಯಾಗಾರ

ಮೈಸೂರು, ಮಾ.14– ಮೈಸೂರು ವಿವಿ ವತಿಯಿಂದ 'ಮಾನಸ ಯುವ ಸಂವರ್ಧನೆ–2025' (ಔದ್ಯೋಗಿಕ ಮತ್ತು ಯುವ ಸಬಲೀಕರಣ ಕಾರ್ಯಾಗಾರ)ವನ್ನು ಮಾ.18 ಮತ್ತು 19ರಂದು ಮಾನಸಗಂಗೋತ್ರಿಯ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮಾರ್ಚ್ 18ರಂದು ಬೆಳಗ್ಗೆ 10 ಗಂಟೆಗೆ ಕಾರ್ಯಕ್ರಮವನ್ನು ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿ ಡಾ.ಕುಮಾರ ಉದ್ಘಾಟಣೆ ಮಾಡಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ.

ನಿಧನ



ಎನ್.ನಂಜುಂಡಪ್ಪ

ಮೈಸೂರು, ಮಾ. 15– ಮೈಸೂರು ಬೋಗಾದಿ ರೂಪಾನಗರ ನಿವಾಸಿ ಎನ್.ನಂಜುಂಡಪ್ಪ (94) ಅವರು ಇಂದು ಬೆಳಗ್ಗೆ ನಿಧನರಾದರು. ಮೃತರು ಪುತ್ರ, ಇಬ್ಬರು ಪುತ್ರಿಯರು, ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಭಾನುವಾರ) ಬೆಳಗ್ಗೆ 10 ಗಂಟೆಗೆ ರೂಪಾನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಸುಲ್ಭಾ ಸುರೇಶ್



ಮೈಸೂರು ನಜರ್‌ಬಾದ್‌ನ ಬ್ಯಾಂಡ್ ಬಂಗಲೆ ರಸ್ತೆ, ನಂ.783ರ ನಿವಾಸಿ ದಿವಂಗತ ಜಿ.ಎ.ಸುರೇಶ್‌ಕುಮಾರ್ ಅವರ ಪತ್ನಿ ಸುಲ್ಭಾ ಸುರೇಶ್ (78) ಶನಿವಾರ ನಿಧನರಾದರು.

ಮೃತರು ಮೂವರು ಪುತ್ರರು (ಸುಜಿತ್, ಸುಮೀತ್ ಮತ್ತು ಸುಶಾಂತ್), ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸದಾಶಿವಯ್ಯ

ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ನಿವೃತ್ತ ಸೂಪರಿಂಟೆಂಡೆಂಟ್ ಸದಾಶಿವಯ್ಯ ಮಾರ್ಚ್ 13ರಂದು ನಿಧನರಾದರು. ಮೃತರ ಅಂತ್ಯಕ್ರಿಯೆ ಅವರ ಸ್ವಗ್ರಾಮ ಜಟಕಾದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.03.2025 ಭಾನುವಾರ, ಮಳೆ ನಕ್ಷತ್ರ: ಪೂರ್ವಭಾದ್ರಾ 04.03.2025ರಿಂದ 16.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಹಸ್ತ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸಂಯಾಟೀಕ ರೋಗದ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ :** ಮೈಸೂರು ನಗರ ಹಳೇ ಸಂತೇಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ ಅವಭೃತ ಸ್ನಾನ, ರಾತ್ರಿ ಪುಷ್ಪ ಪಲ್ಲಕ್ಕಿ ಉತ್ಸವ, ಒಳಾಂಗಣದಲ್ಲಿ ಧ್ವಜ ಅವರೋಹಣ, ಸ್ಥಳ: ದೇವಸ್ಥಾನದ ಪ್ರಾಂಗಣ, ಹಳೇ ಸಂತೇಪೇಟೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಅರ್ಬನ್ ಹಾತ್, ಜವಳಿ ಸಚಿವಾಲಯದ ಅಭಿವೃದ್ಧಿ ಆಯುಕ್ತರು, ತ್ರಿಪುರ ಸರ್ಕಾರದ ಕೈಮಗ್ಗ ಕರಕುಶಲ ಮತ್ತು ರೇಷ್ಮೆ ನಿರ್ದೇಶನಾಲಯ :** ಗಾಂಧಿ ಶಿಲ್ಪ ಬಜಾರ್ ಮೇಳ, ಕರಕುಶಲ–ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರಸ್ತೆ, ಬೆಳಗ್ಗೆ 10 ರಿಂದ.

■ **ಲವ್ಲಿ ವಧು ವರರ ಮಾಹಿತಿ ಕೇಂದ್ರ :** ಒಕ್ಕಲಿಗ ವಧು–ವರರ ಸಮಾವೇಶ, ಸ್ಥಳ: ಲೇಖನ ಪಾರ್ಟಿ ಹಾಲ್, ಗಗನಚುಂಬಿ ಜೋಡಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ರಿಂದ.

■ **ಕ್ಲಿಯರ್‌ಮೆಡಿ ರೇಡಿಯೆಂಟ್ ಹಾಸ್ಪಿಟಲ್ :** ಉಚಿತ ಮೂತ್ರಪಿಂಡ ಆರೈಕೆ ಚಿಕಿತ್ಸಾಲಯ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 10 ರಿಂದ.

■ **ಕರ್ನಾಟಕ ಸರ್ಕಾರದ ನಿವೃತ್ತ ನೌಕರರ ಗೆಳೆಯರ ಬಳಗ:** ಸರ್ಕಾರದ ಅಪರ ಕಾರ್ಯದರ್ಶಿ ಹಾಗೂ ಮುಖ್ಯ ಇಂಜಿನಿಯರ್ ಆಗಿದ್ದು, ನಿವೃತ್ತಿ ಹೊಂದಿದ ಸಿ.ಕೆ.ಮಲ್ಲಪ್ಪ ಅವರಿಗೆ ಅಭಿನಂದನಾ ಸಮಾರಂಭ, ಸ್ಥಳ : ಕರ್ನಾಟಕ ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಿಳಾ ಘಟಕ ಮತ್ತು ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ :** ಚುಟುಕು ರತ್ನ ಡಾ. ಎಂ. ಅಕಬರ ಅಲಿ ಅವರ ಜನ್ಮ ಶತಮಾನೋತ್ಸವ ಸವಿನೆನಪಿನಲ್ಲಿ ಚುಟುಕು ಕವಿಗೋಷ್ಠಿ, ಉದ್ಘಾಟನೆ : ಶಾಸಕ ತನ್ವೀರ್ ಸೇಠ್, ಅಧ್ಯಕ್ಷತೆ : ಚುಟುಕು ಯುಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಮುಖ್ಯ ಅತಿಥಿಗಳು : ಚುಟುಕು ರತ್ನ ಡಾ. ಸಿಪಿಕೆ, ಹಿರಿಯ ಪತ್ರಕರ್ತ ಚಿ.ಜ. ರಾಜೀವ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ. ಎಂ. ಅಕಬರ ಅಲಿ ಅವರ ಪುತ್ರ ಅಹಮದ್ ಮುಲ್ಲ, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚುಟುಕು ಸಿರಿ ಡಾ. ರತ್ನ ಹಾಲಪ್ಪಗೌಡ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ, ಬೆಳಗ್ಗೆ 10.30ಕ್ಕೆ.

■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಸಾನ್ನಿಧ್ಯ : ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ, ಉದ್ಘಾಟನೆ : ಪೊಲೀಸ್ ತರಬೇತಿ ಶಾಲೆ ಪ್ರಿನ್ಸಿಪಾಲ್ ಶ್ರೀಮತಿ ಎಂ.ಎಸ್.ಗೀತ, ಮುಖ್ಯ ಅತಿಥಿಗಳು : ಮೈಸೂರು ಮೆಡಿಕಲ್ ಕಾಲೇಜು ಪ್ರಾಂಶುಪಾಲರಾದ ಡಾ.ಕೆ.ಆರ್.ದಾಕ್ಷಾಯಿಣಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ಶ್ರೀಮತಿ ಸಿ.ದೇವಿಕ, ಜೆಎಸ್‌ಎಸ್ ಕಾನೂನು ಕಾಲೇಜು ಪ್ರಿನ್ಸಿಪಾಲ್ ಡಾ.ವಾಣಿಶ್ರೀ, ಡಾ.ಎಂ.ಆರ್.ಸವಿತಾ, ಡಾ.ಶ್ವೇತ ಮಡಪ್ಪಾಡಿ, ಸ್ಥಳ: ಜ್ಞಾನಪ್ರಕಾಶ ಭವನ, ಯಾದವಗಿರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–101, ತಿಂಗಳ ಸಾಧಕರು ದೇವಾಲಯಗಳ ವಾಸ್ತು ತಜ್ಞ ಎಂ.ಎನ್. ಪ್ರಭಾಕರ್, ಮುಖ್ಯ ಅತಿಥಿಗಳು : ವಿಶ್ರಾಂತ ಇತಿಹಾಸ ಉಪನ್ಯಾಸಕ ಪ್ರೊ. ಲಾ.ನಾ. ಸ್ವಾಮಿ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು : ಗಮಕಿ ಶ್ರೀಮತಿ ಜಿ.ಎನ್. ಪದ್ಮ, ಶ್ರೀಮತಿ ಡಾ. ಉಷಾರಾಣಿ, ಪವನ್ ಮೌರ್ಯ ಚಕ್ರವರ್ತಿ, ಡಾ. ಎಸ್. ನಾಗರಾಜಪ್ಪ, ಡಾ. ಎಸ್.ಎನ್. ಶಿವರುದ್ರಸ್ವಾಮಿ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಸಖಿ ಫೌಂಡೇಷನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ :** ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸಖಿ ಸಂಭ್ರಮ, ಸ್ಫೂರ್ತಿ ಸಖಿ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರು : ಅನಿತಾ ರೀಟಾ, ಶ್ರೀಮತಿ ಅರುಣ್ ಕುಮಾರ್, ಬಿ.ಆರ್. ನಾಗರತ್ನ, ಮುಖ್ಯ ಅತಿಥಿಗಳು : ಡಾ. ಎಸ್.ಪಿ. ಯೋಗಣ್ಣ, ಡಾ.ವಿ. ರಂಗನಾಥ್, ಡಾ. ರಘುರಾಂ ವಾಜಪೇಯಿ, ಉಪಸ್ಥಿತರು : ಟ್ರಸ್ಟ್ ಸಂಸ್ಥಾಪನಾ ಕಾರ್ಯದರ್ಶಿ ಶ್ರೀಮತಿ ಗಾಯತ್ರಿ ಸುಂದರೇಶ್, ಸ್ಥಳ: ಋತ್ವಿಕ್ ವೇದಿಕೆ, ಜಯಲಕ್ಷ್ಮಿ ಕಾಲೇಜು ಆವರಣ, ರಾಮಕೃಷ್ಣನಗರ, ಬೆಳಗ್ಗೆ 11.45ಕ್ಕೆ

■ **ಗಾನ ನಂದನ :** ಗಾನಯಾನ, ಸ್ಟಾರ್ ಸಿಂಗರ್ಸ್ ತಂಡದಿಂದ ಸಂಗೀತ ಸಂಜೆ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಡಾ. ನಾಗರಾಜ ವಿ. ಬೈರಿ ಅವರಿಗೆ ಕಲಾ ಪೋಷಕ ರತ್ನ ಪ್ರಶಸ್ತಿ ಪ್ರದಾನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್:** ವೇಣು ವಿದ್ವಾನ್ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಎಲ್.ವಿ.ಮುಕುಂದ್ ಅವರಿಂದ ಕೊಳಲು ವಾದನ, ವಿದ್ವಾನ್ ವೈಭವ್ ರಮಣಿ–ಪಿಟೀಲು, ವಿದ್ವಾನ್ ಹೆಚ್.ಎಲ್.ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಎಂ.ಆರ್.ಮಂಜುನಾಥ್–ಘಟಂ, ಸ್ಥಳ: ಶ್ರೀ ವಿದ್ಯಾಭಾರತಿ ಪ್ರಾರ್ಥನಾ ಮಂದಿರ, ಶ್ರೀ ಚಂದ್ರಮೌಳೀಶ್ವರ ದೇವಸ್ಥಾನ, ವಿ.ವಿ.ಮೊಹಲ್ಲಾ, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ರಂಗಾಯಣ :** ರಂಗಾಯಣದ ಹಿರಿಯ ಕಲಾವಿದರಿಂದ ಮಿಸ್ಟರ್ ಬೋಗೀಸ್ ನಾಟಕ ಪ್ರದರ್ಶನ, ನಿರ್ದೇಶನ : ಹೆಚ್.ಕೆ. ದ್ವಾರಕಾನಾಥ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ನಟನಾ ರಂಗ ಶಾಲೆ :** ಥೇಮಾ ಥಿಯೇಟರ್ ಕಲಾವಿದರಿಂದ ಎಲ್‌ಎಸ್‌ಡಿ ಕನ್ನಡ ನಾಟಕ ಪ್ರದರ್ಶನ, ರಚನೆ : ಡಾ. ಎಸ್.ವಿ. ಕಶ್ಯಪ್, ನಿರ್ದೇಶನ : ಡಾ. ಎಸ್.ವಿ. ಸುಷ್ಮಾ, ಸ್ಥಳ: ನಟನಾ ರಂಗ ಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ರಂಗವಲ್ಲಿ :** ರಂಗವಲ್ಲಿ ಕಲಾವಿದರಿಂದ ಪ್ರಮೇಶಿ ಪ್ರೇಮ ಪ್ರಸಂಗ ನಗೆ ನಾಟಕ ಪ್ರದರ್ಶನ, ರಚನೆ: ಶ್ರೀನಿವಾಸ ಪ್ರಭು, ನಿರ್ದೇಶನ : ರವಿಪ್ರಸಾದ್, ಸ್ಥಳ: ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ

■ **ಗಂಧದ ಗುಡಿ ಫೌಂಡೇಷನ್ :** ಕ್ವೀನ್ ಚಾಮುಂಡಿ ಹಿಲ್ ಡ್ರೈವ್, ಮುಖ್ಯ ಅತಿಥಿಗಳು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಚಲನಚಿತ್ರ ನಟ ಮಂಡ್ಯ ರಮೇಶ್, ಫೌಂಡೇಷನ್ ಗೌರವಾಧ್ಯಕ್ಷ ನಾಗೇಂದ್ರ ಪ್ರಸಾದ್, ರಾಜ್ಯಾಧ್ಯಕ್ಷ ಆರ್ಯನ್ ಗಂಧದ ಗುಡಿ, ಆರ್.ಜೆ. ದುಷ್ಯಂತ್, ಪ್ರದೀಪ್, ಸ್ಥಳ: ಚಾಮುಂಡಿಬೆಟ್ಟ, ಬೆಳಗ್ಗೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಹೆಚ್.ಎನ್. ಮಂಜುರಾಜ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಯಂತಿ. ವಿ. ಭಟ್, ಡಿ. ಪುರುಷೋತ್ತಮ್, ವ್ಯಾಖ್ಯಾನ– ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ –ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕರುನಾಡ ಕಲ್ಪವೃಕ್ಷ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು, 9.00 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ– ಮಕ್ಕಳ ಮೂತ್ರಪಿಂಡಗಳ ಆರೈಕೆ ಕುರಿತು ಮೈಸೂರಿನ ನೆಫ್ರೋ ಯುರಾಲಜಿ ಸಂಸ್ಥೆಯ ನೆಫ್ರಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಶಶಿಕಿರಣ್ ಕೆ.ಬಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH -TRISH and Balty boy, ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಹಕ್ಕಿಗೂಡು, ಕಥೆ ಹೇಳುತ್ತಾರೆ–ಹೆಚ್. ಎಸ್. ಶಿವರಾಂ, ರಜೆಯ ಸದುಪಯೋಗದ ಮಾಹಿತಿ, ಸಮೂಹಗಾಯನ, ಪ್ರಸ್ತುತಿ : ಎಂ. ಎಸ್. ಭಾರತಿ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, ಮಾವಿನಹಣ್ಣು ಕುರಿತು ಮಾಹಿತಿ ಚಂದ್ರಮ್ಮ ಅವರಿಂದ ಕಥೆಗಾರ್ತಿ ವೈದೇಹಿ ಅವರ ಬಗ್ಗೆ ಮಾತನಾಡುತ್ತಾರೆ ಎಂ. ಶಶಿಕಲಾ, ಶಿವನನ್ನು ಕುರಿತ ಹಾಡುಗಳು–ಬೆಂಗಳೂರಿನ ಯಲಹಂಕದ ಸ್ನೇಹಮಯಿ ಮಾತೃಮಂಡಳಿ ಸದಸ್ಯರು, 12.35 ದೇವರನಾಮ – ಪುಷ್ಪಾ. ವಿ.ಶಂಕರ್, 12.45 ಜನಪದ ಸಂಗೀತ –ಟಿ. ನರಸೀಪುರ ತಾಲ್ಲೂಕು ಬನ್ನೂರು ಹೋಬಳಿ ಮಾದಗಳ್ಳಿ ಗ್ರಾಮದ ಪಾರ್ವತಮ್ಮ ಮತ್ತು ಸಂಗಡಿಗರಿಂದ ಅಜ್ಜಳ್ಳಿ ಮಾರಮ್ಮನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಮಣ್ಣು ಆರೋಗ್ಯ ಕಾರ್ಡ್ ಯೋಜನೆ ಕುರಿತು ಮಾಹಿತಿ ನೀಡುತ್ತಾರೆ–ಬಿ. ಎಫ್. ಹುಲ್ಲೂರ್, 1.20 ಭಾವಗೀತೆಗಳು– ಎ.ಜೆ.ದಿವ್ಯ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ–ಭೂ ತಾಯಿಯ ಮಕ್ಕಳು, 3.00 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ವೀರವರ್ಮ ಕಾಳಗ, ಪ್ರಸ್ತುತಿ: ಬೆಳ್ತಂಗಡಿ ತಾಲೂಕು ವೇಣೂರಿನ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಸಂಘದ ಕಲಾವಿದರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್.ಲೋಕೇಶ್ವರಿ, 8.00 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ: ಅಬ್ದುಲ್ ರಶೀದ್, 9.15 ರಂಗಗೀತೆಗಳು–ಬಿ.ಎಸ್.ಸ್ವಾಮಿ ಗೌಡ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಶ್ರೀಮತಿ ರೂಬಿ ಮಲ್ಲಿಕ್ ಗೋಸ್ವಾಮಿ–ದ್ರುಪದ್, ಧಮರ್

ಭರತನಾಟ್ಯದಲ್ಲಿ ಶ್ರೀರಾಮನ ಸೀತೆಯ ಕನವರಿಕೆ ಅನಾವರಣ

ಮೈಸೂರು ಬಿವಿಬಿಯಲ್ಲಿ ನೃತ್ಯ ಸಂಗೀತ ಅಕಾಡೆಮಿಯಿಂದ ಭರತನಾಟ್ಯ ಪ್ರದರ್ಶನ



ಮೈಸೂರಿನ ಬಿವಿಬಿಯಲ್ಲಿ ಶನಿವಾರ ಭರತನಾಟ್ಯ ಪ್ರದರ್ಶನ ನಡೆಯಿತು.

ಮೈಸೂರು,ಮಾ.15(ಪಿಎಂ)– ಸೀತೆಯಿಂದ ದೂರನಾದ ಶ್ರೀರಾಮನಲ್ಲಿ ಉಂಟಾದ ವಿರಹ ವೇದನೆಯ ಸನ್ನಿವೇಶವು ಭರತನಾಟ್ಯದಲ್ಲಿ ಅನಾರವಣಗೊಂಡಿತು. ಹೀಗೆ ಅಭಿವ್ಯಕ್ತಗೊಂಡ ಭಾವಭಂಗಿಯ ದೃಶ್ಯಕಾವ್ಯ ಕಂಡು ಪ್ರೇಕ್ಷಕರು ಮನಸೋತು ಚಪ್ಪಾಳೆಯ ಮಳೆ ಸುರಿಸಿದರು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದ (ಬಿವಿಬಿ) ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಬಿವಿಬಿ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಭರತನಾಟ್ಯ ಕಾರ್ಯಕ್ರಮದಲ್ಲಿ ಬೆಂಗಳೂರಿನ ನೃತ್ಯ ಸಂಗೀತ ಅಕಾಡೆಮಿಯ ಭರತನಾಟ್ಯ ಕಲಾವಿದೆಯರು ಹೀಗೆ ಪ್ರೇಕ್ಷಕರ ಎದುರು ಶ್ರೀರಾಮನ ಕನವರಿಕೆಯನ್ನು ಅನಾವರಣಗೊಳಿಸಿದರು.

ವಿದ್ವಾನ್ ಡಿ.ಎಸ್.ಪ್ರಸನ್ನ ಕುಮಾರ್ ವಿರಚಿತ ವರ್ಣವಾದ 'ಕಾಣದೇ ಹೇಗಿರಲಿ, ಕಾಂತೆ ಸೀತೆಯ...' ಹಾಡಿಗೆ ರಿಯಾ, ವಾಗ್ದೇವಿ, ತನ್ಮಯ ಹಾಗೂ ಸ್ವಾತಿ, ಮನಮೋಹಕವಾಗಿ ಹೆಜ್ಜೆ ಹಾಕಿದರು. ಆ ಮೂಲಕ ರಾವಣನಿಂದ ಅಪಹರಣಕ್ಕೆ ಒಳಗಾದ ಸೀತೆಯ ಕನವರಿಕೆಯಲ್ಲಿ ಮುಳುಗಿದ್ದ ಶ್ರೀರಾಮನ ಸಂಕಟದ ಸನ್ನಿವೇಶ ಸೃಷ್ಟಿಸಿದರು. ಈ ಕಲಾವಿದೆಯರ ಮನೋಜ್ಞ ನೃತ್ಯ ಪ್ರದರ್ಶನಕ್ಕೆ ಪ್ರೇಕ್ಷಕರು ಮನಸೋತು ಅಭಿಮಾನದ ಚಪ್ಪಾಳೆ ನೀಡಿದರು.

ರಾಗ ಮಾಲಿಕೆ ರಾಗ ಹಾಗೂ ಆದಿ ತಾಳ ಹೊಂದಿರುವ ಈ ಗೀತೆಗೆ ವಿದ್ವಾನ್ ಬಾಲಸುಬ್ರಹ್ಮಣ್ಯಂ ಶರ್ಮ ಸಂಗೀತ ಸಂಯೋಜನೆ ಮಾಡಿದ್ದು, ಡಾ.ಶುಭರಾಣಿ ಬೋಳಾರ್ ಅವರ ನೃತ್ಯ ಸಂಯೋಜನೆಯಂತೆ ಕಲಾವಿದೆಯರು ತಮ್ಮ ನಾಟ್ಯ ಕಲಾಕೌಶಲ್ಯ ಸಾದರಪಡಿಸಿದರು.

ಎರಡನೇ ಭಾಗದ ವರ್ಣದಲ್ಲಿ ರಾಮಭಕ್ತ ಹನುಮಂತನು ಅತ್ಯಂತ ಭಕ್ತಿಯಿಂದ ಶ್ರೀರಾಮನ ಮುದ್ರೆ ಉಂಗುರವನ್ನು ಜಾನಕಿಗೆ ಕೊಟ್ಟು, ಅದರ ಗುರುತಾಗಿ ಚೂಡಾಮಣಿಯನ್ನು ರಾಮನಿಗೆ ತಂದುಕೊಡುವ ದೃಶ್ಯಾವಳಿ ಪ್ರಸ್ತುತಪಡಿಸಲಾಯಿತು.

ಆ ಮೂಲಕ ರಾಮನ ಪ್ರಶಂಸೆಗೆ ಹನುಮಂತನು ಒಳಗಾಗುವ ಸನ್ನಿವೇಶ ಸೇರಿದಂತೆ ಸುದೀರ್ಘವಾಗಿ ನಾಟ್ಯದಲ್ಲಿ ಶ್ರೀರಾಮನ ವಿರಹ ವೇದನೆ ಮೂಡಿಬಂದಿತು.

ಇದಲ್ಲದೆ, ನಾಟ ರಾಗ ಮತ್ತು ಆದಿ ತಾಳದ ಗೀತೆಯೊಂದಿಗೆ ಪುಷ್ಪಾಂಚಲಿ ನೃತ್ಯದೊಂದಿಗೆ ಪ್ರಾರಂಭಗೊಂಡ ಭರತನಾಟ್ಯವು ಬಳಿಕ ಗಣೇಶ ಸ್ತುತಿಯೊಂದಿಗೆ ಸಭಿಕರಲ್ಲಿ ಭಕ್ತಿಭಾವ ಮೂಡಿಸಿತು. ಅಲ್ಲದೆ, ಅಭಂಗ್ ಹಾಗೂ ತಿಲ್ಲಾನ್ ನೃತ್ಯ ಪ್ರಕಾರಗಳು ಪ್ರದರ್ಶನಗೊಂಡು ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡಿದವು.

ನೃತ್ಯ ಸಂಯೋಜಕರು ಹಾಗೂ ಭರತನಾಟ್ಯ ಕಲಾವಿದೆಯರ ಗುರುಗಳೂ ಆದ ಡಾ.ಶುಭರಾಣಿ ಬೋಳಾರ್ ಉಪಸ್ಥಿತರಿದ್ದು, ತಮ್ಮ ಶಿಷ್ಯರ ನೃತ್ಯ ಪ್ರದರ್ಶನಕ್ಕೆ ಅಗತ್ಯ ಮಾರ್ಗದರ್ಶನ ನೀಡಿದರು. ಕವಿತ ಮತ್ತು ಅಕ್ಷಯ ಭರತನಾಟ್ಯಕ್ಕೆ ಅಗತ್ಯವಾದ ಗಾಯನ ಸಾದರಪಡಿಸಿದರೆ, ಪಕ್ಕವಾದ್ಯದಲ್ಲಿ ವಿದ್ವಾನ್ ಎಂ.ಕಿಶೋರ್ (ಮೃದಂಗ), ಕೆ.ಎಸ್.ಗಣೇಶ್ (ಕೊಳಲು) ಸಹಕಾರ ನೀಡಿದರು.

ಇದಕ್ಕೂ ಮುನ್ನ ಡಾ.ಶುಭರಾಣಿ ಬೋಳಾರ್ ಕಾರ್ಯಕ್ರಮ ಉದ್ಘಾಟಿಸಿದರು. ಬಿವಿಬಿ ಮೈಸೂರು ಕೇಂದ್ರದ ಉಪಾಧ್ಯಕ್ಷ ಡಾ.ಸಿ.ನಾಗಣ್ಣ, ಗೌರವ ಖಜಾಂಚಿ ಎ.ಟಿ.ಭಾಷ್ಯಂ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಆಡಳಿತಾಧಿಕಾರಿ ಎಸ್.ಆರ್. ರವಿಕುಮಾರ್, ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಲೇಖಾ ನಾಯರ್ ಮತ್ತಿತರರು ಹಾಜರಿದ್ದರು.




ಬಿವಿಬಿಯಲ್ಲಿ ಶನಿವಾರ ಭರತನಾಟ್ಯ ಕಾರ್ಯಕ್ರಮವನ್ನು ಡಾ.ಶುಭರಾಣಿ ಬೋಳಾರ್ ಉದ್ಘಾಟಿಸಿದರು.

ಹಿಂದಿ ವಿರೋಧಿಸುವವರು ತಮಿಳು ಚಿತ್ರ ಹಿಂದಿಗೆ ಡಬ್ ಆಗುವುದ ವಿರೋಧಿಸುತ್ತಿಲ್ಲ!

ತಮಿಳ್ನಾಡು ಸಿಎಂ ಸ್ಟಾಲಿನ್‌ಗೆ ಕುಟುಕಿದ ಪವನ್ ಕಲ್ಯಾಣ್

ಹೊಸದಿಲ್ಲಿ: ವಾಣಿಜ್ಯ ಲಾಭಕ್ಕಾಗಿ ತಮಿಳು ಚಿತ್ರಗಳು ಹಿಂದಿಗೆ ಡಬ್ ಆಗಲು ಅವಕಾಶ ನೀಡುವ ತಮಿಳುನಾಡು ರಾಜಕಾರಣಿಗಳು, ಹಿಂದಿ ಹೇರಿಕೆಯನ್ನು ಮಾತ್ರ ಏಕೆ ವಿರೋಧಿಸುತ್ತಿದ್ದಾರೆ ಎಂದು ನಟ, ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಪ್ರಶ್ನಿಸಿದ್ದಾರೆ. ಆ ಮೂಲಕ ಭಾಷಾ ನೀತಿ ವಿವಾದದ ಬೆಂಕಿಗೆ ಮತ್ತಷ್ಟು ತುಪ್ಪ ಸುರಿದಿದ್ದಾರೆ.



ಕೇಂದ್ರ ಸರಕಾರದ ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಹಿಂದಿ ಹೇರಿಕೆಯನ್ನು ವಿರೋಧಿಸುತ್ತಾ ಬರುತ್ತಿರುವ ತಮಿಳುನಾಡಿನ ಕುರಿತು ಚರ್ಚೆಗಳು ಭುಗಿಲೆದ್ದಿರುವಾಗಲೇ ಪವನ್ ಕಲ್ಯಾಣ್‌ರಿಂದ ಈ ಹೇಳಿಕೆ ಹೊರ ಬಿದ್ದಿದೆ. ಈ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಡಿಎಂಕೆ ನಾಯಕರು, ವ್ಯಾವಹಾರಿಕ ನಿರ್ಧಾರದೊಂದಿಗೆ ಭಾಷಾ ನೀತಿಯನ್ನು ಸಮೀಕರಿಸುವುದು ದೀರ್ಘಕಾಲದಿಂದ ತಮಿಳುನಾಡು ತಳೆದಿರುವ ಭಾಷಾ ನಿಲುವನ್ನು ನಿರ್ಲಕ್ಷಿಸುವ ತೆಳು ಸರಳೀಕರಣವಾದವಾಗಿದೆ ಎಂದು ಒತ್ತಿ ಹೇಳಿದ್ದಾರೆ.

ಇದಕ್ಕೂ ಮುನ್ನ, ಎನ್‌ಡಿಎ ಮೈತ್ರಿಕೂಟದ ಅಂಗ ಪಕ್ಷವಾದ ಜನಸೇನಾ ಸಂಸ್ಥಾಪಕ ಹಾಗೂ ಪ್ರಧಾನಿ ನರೇಂದ್ರ ಮೋದಿಯವರ ಬೆಂಬಲಿಗರಾದ ಪವನ್ ಕಲ್ಯಾಣ್, ಹಿಂದಿ ವಿರುದ್ಧ ಪ್ರತಿರೋಧದ ನಿಲುವು ತಳೆದಿರುವ ತಮಿಳುನಾಡು ರಾಜಕಾರಣಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು. ತಮಿಳು ಚಿತ್ರಗಳನ್ನು ರಾಷ್ಟ್ರೀಯ ಮಟ್ಟದ ಪ್ರೇಕ್ಷಕರಿಗೆ ತಲುಪಿಸಲು ಹಿಂದಿಗೆ ನಿರಂತರವಾಗಿ ಡಬ್ ಮಾಡುತ್ತಿರುವಾಗ, ತಮಿಳುನಾಡು ನಾಯಕರೇಕೆ ಹಿಂದಿ ವಿರುದ್ಧ ಪ್ರತಿಭಟಿಸುತ್ತಿದ್ದಾರೆ ಎಂದು ಪ್ರಶ್ನಿಸಿದ್ದರು.

ಪವನ್ ಕಲ್ಯಾಣ್‌ರ ಈ ಹೇಳಿಕೆಗೆ ಪ್ರತಿಕ್ರಿಯಿಸಿರುವ ಡಿಎಂಕೆ, ತಮಿಳುನಾಡಿನಲ್ಲಿ ಈಗಾಗಲೇ ಹಿಂದಿ ಪ್ರಚಾರ ಸಭೆಗಳಿದ್ದು, ಅವು ಹಿಂದಿ ಕಲಿಕೆಯಲ್ಲಿ ಆಸಕ್ತಿ ಇರುವವರಿಗೆ ಸ್ವಯಂಪ್ರೇರಿತವಾಗಿ ಹಿಂದಿ ಬೋಧಿಸುತ್ತಿವೆ ಎಂದು ತನ್ನ ಭಾಷಾ ನೀತಿ ನಿಲುವನ್ನು ಸಮರ್ಥಿಸಿಕೊಂಡಿದೆ. 'ಒಂದು ವೇಳೆ ಜನರು ಹಿಂದಿ ಕಲಿಯಲು ಬಯಸಿದರೆ ಅದಕ್ಕೆ ಸ್ವಾಗತವಿದೆ. ಆದರೆ, ಕೇಂದ್ರ ಸರಕಾರವು ಹಿಂದಿ ಕಲಿಕೆಯನ್ನು ರಾಷ್ಟ್ರೀಯ ಶಿಕ್ಷಣ ನೀತಿ ಅಥವಾ ಪಿಎಂ–ಶ್ರೀ ಶಾಲೆಗಳಂಥ ನೀತಿಗಳ ಮೂಲಕ ಕಡ್ಡಾಯಗೊಳಿಸಲು ಮುಂದಾದಾಗ ಸಮಸ್ಯೆ ಉದ್ಭವಿಸುತ್ತದೆ' ಎಂದು ಡಿಎಂಕೆ ನಾಯಕ ಹಫೀಝುಲ್ಲಾ ಹೇಳಿದ್ದಾರೆ. ಹಫೀಝುಲ್ಲಾರ ಹೇಳಿಕೆಯನ್ನು ಪುನರುಚ್ಚರಿಸಿರುವ ಹಿರಿಯ ಡಿಎಂಕೆ ನಾಯಕ ಟಿ.ಕೆ.ಎಸ್. ಇಳಂಗೋವನ್, ಇದು ಎಂದಿಗೂ ಭಾಷೆಯ ಕುರಿತ ತಮಿಳುನಾಡಿನ ನಿಲುವಾಗಿದೆ ಎಂದೂ ಸ್ಪಷ್ಟಪಡಿಸಿದ್ದಾರೆ. ಆದರೆ, ಪವನ್ ಕಲ್ಯಾಣ್ ರ ಹೇಳಿಕೆಯನ್ನು ಸಮರ್ಥಿಸಿರುವ ಬಿಜೆಪಿ, ಹಿಂದಿಯನ್ನು ರಾಷ್ಟ್ರೀಯ ಭಾಷೆಯನ್ನಾಗಿ ದಕ್ಷಿಣದ ರಾಜ್ಯಗಳಲ್ಲಿ ವ್ಯಾಪಕವಾಗಿ ಪ್ರಚಾರ ಮಾಡಬೇಕಿದೆ ಎಂದು ಕರೆ ನೀಡಿದೆ.

ಎಸ್‌ಬಿಐ ಪಿಂಚಣಿದಾರರ ಸಂಘದಿಂದ ಸ್ವಚ್ಛತಾ ಶ್ರಮದಾನ



ಎಸ್‌ಬಿಐ ಪಿಂಚಣಿದಾರರ ಸಂಘದ ಮೈಸೂರು ಘಟಕದ ಸದಸ್ಯರು ಶನಿವಾರ ಬೆಳಗ್ಗೆ ಮೈಸೂರಿನ ಸರಸ್ವತಿಪುರಂನ ತಮ್ಮ ಆಡಳಿತ ಕಚೇರಿ ಆವರಣದಲ್ಲಿ ಸ್ವಚ್ಛತಾ ಶ್ರಮದಾನ ನಡೆಸಿದರು.

ಮೈಸೂರು,ಮಾ.15(ಪಿಎಂ)– ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಪಿಂಚಣಿದಾರರ ಸಂಘದ ಮೈಸೂರು ಘಟಕದ ಸದಸ್ಯರು ಶನಿವಾರ ಬೆಳಗ್ಗೆ ಮೈಸೂರಿನ ಸರಸ್ವತಿಪುರಂನ ತಮ್ಮ ಆಡಳಿತ ಕಚೇರಿ ಆವರಣದಲ್ಲಿ ಸ್ವಚ್ಛತಾ ಶ್ರಮದಾನ ನಡೆಸಿದರು. ಸದರಿ ಕಚೇರಿ ಆವರಣವೂ ಸೇರಿದಂತೆ ಇಲ್ಲಿಗೆ ಸಮೀಪದ ಸಾರ್ವಜನಿಕ ರಸ್ತೆಯಲ್ಲಿಯೂ ಪ್ಲಾಸ್ಟಿಕ್ ಸೇರಿದಂತೆ ವಿವಿಧ ರೀತಿ ಕಸವನ್ನು ಸಂಗ್ರಹಿಸಿ ಸ್ವಚ್ಛಗೊಳಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಪಿಂಚಣಿದಾರರ ಸಂಘದ ಅಧ್ಯಕ್ಷ ಆನಂದಮೂರ್ತಿ ಮತ್ತು ಕಾರ್ಯದರ್ಶಿ ರಂಗನಾಥ್, ಈ ಬಾರಿಯ ಸ್ವಚ್ಛ ಸರ್ವೇಕ್ಷಣ್‌ನಲ್ಲಿ ಮೈಸೂರು ನಗರವು ದೇಶದ ಸ್ವಚ್ಛ ನಗರವಾಗಿ ಮತ್ತೊಮ್ಮೆ ಹೊರಹೊಮ್ಮಬೇಕಿದೆ. ಈ ನಿಟ್ಟಿನಲ್ಲಿ ನಾಗರಿಕರಲ್ಲಿ ಜಾಗೃತಿ ಮೂಡಿಸಬೇಕಿದ್ದು, ಅದಕ್ಕೆ ಸೂಕ್ತ ಮಾರ್ಗವೆಂದರೆ ಕೇವಲ ಭಾಷಣ ಮಾತ್ರವಲ್ಲ, ಅದಕ್ಕಿಂತಲೂ ಮುಖ್ಯವಾಗಿ ನಮ್ಮಂತಹವರು ಸ್ವತಃ ಸ್ವಚ್ಛತಾ ಕಾರ್ಯದಲ್ಲಿ ನಿರತರಾಗುವುದಾಗಿದೆ ಎಂದು ಹೇಳಿದರು.

ಬಳಿಕ ಮಾತನಾಡಿದ ಮೈಸೂರು ಮಹಾನಗರ ಪಾಲಿಕೆ ಸಹಾಯಕ ಆಯುಕ್ತ ಮಹೇಶ್ ಜಿಗಣಿ, ಪರಿಸರ ಇಂಜಿನಿಯರ್ ಶ್ರೀದೇವಿ ಮತ್ತು ಇನ್ಸ್‌ಪೆಕ್ಟರ್ ಪ್ರಕಾಶ್ ಮಾತನಾಡಿ, ಎಸ್‌ಬಿಐ ಪಿಂಚಣಿದಾರರಿಗೆ ಧನ್ಯವಾದ ಹೇಳಿದರಲ್ಲದೆ, ಎಸ್‌ಬಿಐ ಅತ್ಯಂತ ಖ್ಯಾತಿ ಹೊಂದಿರುವ ಬ್ಯಾಂಕ್ ಆಗಿದ್ದು, ಅಂತಹ ಸಂಸ್ಥೆಯ ಪಿಂಚಣಿದಾರರು ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಿರುವುದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಹೇಳಿದರು.

ಕಾಡಾನೆ ದಾಳಿಗೆ ಮಹಿಳೆ ಸಾವು; ಈಶ್ವರ ಖಂಡ್ರೆ ತುರ್ತು ಸಭೆ

ಬೇಲೂರಿನಲ್ಲಿ 3 ಕಾಡಾನೆ ಸೆರೆಗೆ ಸೂಚನೆ

ಬೆಂಗಳೂರು, ಮಾ.15– ಬೇಲೂರು ತಾಲೂಕಿನ ಬಿಕ್ಕೋಡು, ಅರೆಹಳ್ಳಿ ಸುತ್ತಮುತ್ತ ಜನರಿಗೆ ಉಪಟಳ ನೀಡುತ್ತಿರುವ 3 ಪುಂಡಾನೆ ಗುರುತಿಸಿದ್ದು, ಈ ಆನೆಗಳನ್ನು ಸೆರೆ ಹಿಡಿಯಲು ಮತ್ತು ಕೂಡಲೇ ಇದೇ ಪ್ರದೇಶದಲ್ಲಿ ಆನೆ ಕಾರ್ಯಪಡೆಯ ಕಚೇರಿ ಸ್ಥಾಪಿಸಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ದರ್ಜೆಯ ಅಧಿಕಾರಿಯನ್ನು ನಿಯೋಜಿಸುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.





ಬೇಲೂರು ತಾಲೂಕು ಕೋಗೋಡಿನ ತೋಟದಲ್ಲಿ ನಿನ್ನೆ ಮಹಿಳೆಯೊಬ್ಬರು ಆನೆ ದಾಳಿಯಿಂದ ಮೃತಪಟ್ಟ ಹಿನ್ನೆಲೆಯಲ್ಲಿ ವಿಕಾಸಸೌಧದ ತಮ್ಮ ಕಚೇರಿಯಲ್ಲಿಂದು ಅರಣ್ಯಾಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿದ ಸಚಿವರು, ಹಾಸನ ವಲಯಕ್ಕೆ 2 ಥರ್ಮಲ್ ಕ್ಯಾಮರಾ ಸಹಿತ ಡ್ರೋನ್ ಖರೀದಿಸಿ ರಾತ್ರಿಯ ವೇಳೆ ಕೂಡ ಆನೆಗಳ ಸಂಚಾರದ ಬಗ್ಗೆ ನಿಗಾ ಇಟ್ಟು, ಸ್ಥಳೀಯರಿಗೆ ಸಕಾಲದಲ್ಲಿ ಮಾಹಿತಿ ನೀಡಲು ಸೂಚಿಸಿದರು.

ಆನೆಗಳ ಸಮಸ್ಯೆ ಹೆಚ್ಚಿರುವ ಪ್ರದೇಶದಲ್ಲಿ ತುರ್ತು ಸ್ಪಂದನೆಗಳಾಗಿ 2 ಹೆಚ್ಚುವರಿ ಜೀಪುಗಳು ಮತ್ತು ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿ, ಆನೆಗಳ ಸಂಚಾರದ ಮಾಹಿತಿ ಬಂದ ಕೂಡಲೇ ಸ್ಪಂದಿಸುವಂತೆ ಈಶ್ವರ ಖಂಡ್ರೆ ಸೂಚಿಸಿದರು.

ತೋಟದ ಸಿಬ್ಬಂದಿಗೆ ತರಬೇತಿ: ಬೇಲೂರು ಭಾಗದ ಜನರಿಗೆ, ತೋಟದ ಕಾರ್ಮಿಕರಿಗೆ ಆನೆಗಳ ಸ್ವಭಾವ, ಆನೆ ಬಂದಾಗ ಏನೆಲ್ಲಾ ಮುಂಜಾಗರೂಕತಾ ಕ್ರಮ ವಹಿಸಬೇಕು, ಹೇಗೆ ನಡೆದುಕೊಳ್ಳಬೇಕು, ಸಂಜೆ ಮತ್ತು ಬೆಳಗಿನ ವೇಳೆ ಓಡಾಡುವಾಗ ಕೈಗೊಳ್ಳಬೇಕಾದ ಎಚ್ಚರಿಕೆ ಇತ್ಯಾದಿಗಳ ಬಗ್ಗೆ ಜಾಗೃತಿ ಮೂಡಿಸಲು ತೋಟದ ಮಾಲೀಕರ ಸಹಕಾರ ಪಡೆದು ಜಾಗೃತಿ ಮೂಡಿಸಲು ಮತ್ತು ಗ್ರಾಮಮಟ್ಟದಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಲೂ ಆದೇಶ ನೀಡಿದರು.

ಇಟಿಎಫ್ ಸಿಬ್ಬಂದಿಗೆ ಅಗತ್ಯ ಸೌಲಭ್ಯ: ಆನೆ ಕಾರ್ಯಪಡೆ ಮತ್ತು ಎಡಿಸಿ ಹೊರಗುತ್ತಿಗೆ ಸಿಬ್ಬಂದಿಗೆ ತಿಂಗಳು ತಿಂಗಳು ವೇತನ, ಆನೆ ಕಾರ್ಯಪಡೆಯ ಸಿಬ್ಬಂದಿಗೆ ಆಹಾರಭತ್ಯೆ, ಸಮವಸ್ತ್ರ, ಶೂ, ಜಾಕೆಟ್ ಹಾಗೂ ವಿಮಾ ಸೌಲಭ್ಯ ನೀಡುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವಂತೆ ಮತ್ತು ಮೊಬೈಲ್ ಸಿಗ್ನಲ್ ದೊರಕದ ಕಡೆಗಳಲ್ಲಿ ಆನೆ ಕಾರ್ಯಪಡೆ ಸಿಬ್ಬಂದಿಗೆ ವಾಕಿ ಟಾಕಿ ನೀಡುವಂತೆಯೂ ಈಶ್ವರ ಖಂಡ್ರೆ ಸೂಚಿಸಿದರು.

ಸಭೆಯಲ್ಲಿ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವ್ಯಜೀವಿ ಪರಿಪಾಲಕರಾದ ಸುಭಾಷ್ ಮಾಲ್ಖಡೆ ಮತ್ತು ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಹಸಿರು ನಮ್ಮ ಉಸಿರು

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಗಂಡಸರು ಸತ್ತರೆ ಅವರಿಗೆ ಸ್ವರ್ಗದಲ್ಲಿ ಅಪ್ಸರೆ ಸಿಗುತ್ತಾರಂತೆ. ಮತ್ತೆ ಹೆಂಗಸರು ಸತ್ತರೆ?
ಗಂಡ : (ಗೇಲಿಯಿಂದ) ಅವರಿಗೆ ಮಂಗ ಸಿಗುತ್ತೆ...
ಹೆಂಡತಿ : (ಬೇಜಾರಿಂದ) ಛೇ, ಎಂತಹ ದುರದೃಷ್ಟ ನಮ್ಮದು... ನಿಮಗೆ ಇಲ್ಲೂ ಅಪ್ಸರೆ... ಅಲ್ಲೂ ಅಪ್ಸರೆ... ನಮಗೆ ಭೂಲೋಕದಲ್ಲಿಯೂ ಮಂಗ... ಸ್ವರ್ಗದಲ್ಲಿಯೂ ಮಂಗ...

ಮೈಸೂರು ಮಿತ್ರ

ಭಾನುವಾರ, 16 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಜೀವನ ಅನ್ನೋದು ಸೋಲು ಗೆಲುವಿನ ಆಟ, ಗೆದ್ದವನಿಗೆ ಸೋಲಬಾರದೆಂಬ ಭಯ ಇದ್ದರೆ, ಸೋತವನಿಗೆ ಗೆಲ್ಲಲೇಬೇಕೆಂಬ ಛಲವಿರುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರಯತ್ನಕ್ಕೆ ಪರಮೇಶ್ವರನೂ ಸಹಾಯ ಮಾಡುವನು.

ನಿಮ್ಮ ಪತ್ರಗಳು

ನ್ಯೂ ಸಯ್ಯಾಜಿರಾವ್ ರಸ್ತೆಯ ರಸ್ತೆ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಿ



ಮಾನ್ಯರೆ,

ಪಾದಚಾರಿ ಮಾರ್ಗದ ಜೊತೆಗೆ ರಸ್ತೆಗಳನ್ನು ಬೀದಿ ಬದಿ ವ್ಯಾಪಾರಿಗಳು ಅತಿಕ್ರಮಿಸುತ್ತಿರುವ ಬಗ್ಗೆ ಮಹಾ ನಗರಪಾಲಿಕೆ ಅಧಿಕಾರಿಗಳು ಮತ್ತು ಸಂಚಾರ ಪೊಲೀಸರ ಗಮನಕ್ಕೆ ತರಲು ಬಯಸುತ್ತೇನೆ.

ರಸ್ತೆ ಬದಿ ವ್ಯಾಪಾರಿಗಳು ಮಹಾನಗರಪಾಲಿಕೆ ಅಧಿಕಾರಿಗಳು ಮತ್ತು ಸಂಚಾರ ಪೊಲೀಸರಿಗೆ ಮಾಮೂಲಿ ನೀಡುತ್ತಾರೆ ಎಂಬ ವದಂತಿ ಇದೆ. ಸಂಚಾರ ಪೊಲೀಸರು ವಾಹನ ಸವಾರರ ತಪಾಸಣೆಯಲ್ಲಿ ನಿರತರಾಗಿದ್ದಾರೆ. ಇದರಿಂದ ಅವರಿಗೆ ಭಾರಿ ಲಾಭವಿದೆ ಎಂದು ನಾನು ಭಾವಿಸುತ್ತೇನೆ. ನ್ಯೂ ಸಯ್ಯಾಜಿರಾವ್ ರಸ್ತೆಯು ವಾಹನ ಸವಾರರಿಗೆ ನರಕವಾಗಿದೆ. ಏಕೆಂದರೆ ಕಾರುಗಳು ಮತ್ತು ಆಟೋಗಳು ರಸ್ತೆಗಳಾದ್ಯಂತ ಅಡ್ಡಾದಿಡ್ಡಿಯಾಗಿ ನಿಲ್ಲಿಸಿರುತ್ತಾರೆ. ಅಲ್ಲದೆ, ಈಗ ನಿಧಾನವಾಗಿ ರಸ್ತೆ ಬದಿ ವ್ಯಾಪಾರಿಗಳು, ಮಾರಾಟಗಾರರು ಮುಖ್ಯ ರಸ್ತೆಗೆ ಬರುತ್ತಿದ್ದಾರೆ. ದಯವಿಟ್ಟು ಈ ಸಮಸ್ಯೆಯನ್ನು ಬಗೆಹರಿಸಿ ಸುಗಮ ವಾಹನ ಸಂಚಾರ ಮತ್ತು ಪಾದಚಾರಿಗಳ ಸುಲಲಿತ ಓಡಾಟಕ್ಕೆ ಅನುವು ಮಾಡಿಕೊಡಬೇಕೆಂದು ಈ ಮೂಲಕ ಮನವಿ.

– ಹಿರಿಯ ನಾಗರಿಕರು, ಮೈಸೂರು.

ಕೆಂಚಲಗೂಡು ರಸ್ತೆ ದುರಸ್ತಿಗೊಳಿಸಿ

ಮಾನ್ಯರೆ,

ಮೈಸೂರು ತಾಲೂಕು ಜಯಪುರ ಹೋಬಳಿ ಹೆಚ್ ಡಿ.ಕೋಟೆ ರಸ್ತೆಯ ಕೆಂಚಲಗೂಡು ಗೇಟ್‌ನಿಂದ ಮೈಸೂರಿಗೆ ಮಾರಮ್ಮನವರ ದೇವಸ್ಥಾನದ ಪಕ್ಕದಲ್ಲಿ ಹೋಗಿ ಬರಲು ಸುಮಾರು ಐದು ಕಿಲೋ ಮೀಟರ್ ಉದ್ದದ ರಸ್ತೆ ಇದೆ. ದಿನಂಪ್ರತಿ ಸಾವಿರಾರು ಜನರು ಈ ರಸ್ತೆಯಲ್ಲಿ ಪ್ರಯಾಣ ಮಾಡುತ್ತಾರೆ. ಆದರೆ, ಇತ್ತೀಚೆಗೆ ವಾಹನಗಳಲ್ಲಿ ಪ್ರಯಾಣ ಮಾಡಲಾಗದಷ್ಟು ರಸ್ತೆ ಗುಂಡಿಗಳಾಗಿ ಹಾಳಾಗಿರುತ್ತದೆ. ಈ ರಸ್ತೆಯಲ್ಲಿ ಪ್ರಯಾಸಪಟ್ಟು ಹಗಲಲ್ಲಿ ಮಾತ್ರ ಪ್ರಯಾಣಿಸಬಹುದಾಗಿದೆ. ಅಂದರೆ ಸಂಜೆಯ ನಂತರ ಪ್ರಯಾಣಿಸಲು ಆಗದು. ಈ ರಸ್ತೆ ಸುಮಾರು ಒಂದೂವರೆ ಕಿಲೋ ಮೀಟರ್ ತೀರಾ ಹಾಳಾಗಿದ್ದು, ದುರಸ್ತಿಯಾಗಬೇಕಾಗಿದೆ. ಕೆಲ ದಿನಗಳ ಹಿಂದೆ ಸುಮಾರು 150 ಮೀಟರಿನಷ್ಟು ತೇಪೆ ಹಾಕಲಾಗಿದೆ. ಈಗಲಾದರೂ ಪೂರ್ಣ ದುರಸ್ತಿ ಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ.

–ಕೆ.ಪಿ.ನಂಜುಂಡ ಸ್ವಾಮಿ, ಕೆಹೆಚ್‌ಬಿ ಬಡಾವಣೆ, ಕೆಂಚಲಗೂಡು.

ಅನಾಹುತಕ್ಕೆ ಆಹ್ವಾನ ನೀಡುತ್ತಿರುವ ಕಬ್ಬಿಣದ ಸರಳುಗಳು



ಮಾನ್ಯರೇ,

ಮೈಸೂರು ನಗರದ ಕೆಲವು ರಸ್ತೆಗಳ ಡಿವೈಡರ್‌ಗಳಲ್ಲಿ ಕಳಪೆ ಕಾಮಗಾರಿಯ ಕಾರಣದಿಂದಲೋ ಇಲ್ಲ ಬೇರೆ ಯಾವುದೋ ಕಾರಣಕ್ಕೆ ಸಿಮೆಂಟ್ ಗಾರೆ ಕಿತ್ತುಹೋಗಿದ್ದು, ಕಬ್ಬಿಣದ ಸರಳುಗಳು ಹೊರಗೆ ಬಂದಿವೆ. ಇವು ಪಾದಚಾರಿಗಳು ರಸ್ತೆ ದಾಟುವಾಗ ಕಾಲುಗಳಿಗೆ ಸಿಕ್ಕಿಕೊಂಡು ಅವರ ಪ್ರಾಣಕ್ಕೆ ಅಪಾಯ ತರುವ ಸಾಧ್ಯತೆಗಳಿವೆ. ಜನರು ಯಾವುದೋ ಆತುರದಲ್ಲಿ ರಸ್ತೆ ದಾಟುವಾಗ ಅಕಸ್ಮಾತ್ ಕಾಲಿಗೆ ಸರಳು ಸಿಕ್ಕಿ ಹಾಕಿಕೊಂಡು ಬಿದ್ದರೆ ವಾಹನಗಳು ಅವರ ಮೇಲೆ ಹರಿದು ಸಾಯುವ ಎಲ್ಲಾ ಸಾಧ್ಯತೆಗಳಿವೆ. ಆದುದರಿಂದ ಸಂಬಂಧಪಟ್ಟವರು ಅಗತ್ಯ ಕ್ರಮ ತೆಗೆದುಕೊಂಡು ಜನರ ಪ್ರಾಣ ಉಳಿಸಲಿ!

–ರಾಜಶೇಖರ ಮೂರ್ತಿ, ಬೆಳಗನಹಳ್ಳಿ, ಹೆಚ್.ಡಿ. ತಾಲೂಕು

ಒಳಚರಂಡಿ ದುರಸ್ತಿಗೊಳಿಸಿ



ಮಾನ್ಯರೆ,

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿರುವ ದೈಹಿಕ ಶಿಕ್ಷಣ ಸಂಸ್ಥೆ ಮತ್ತು ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯದ ಶೌಚಾಲಯದ ಒಳಚರಂಡಿಯ ಪೈಪ್ ಒಡೆದು ಹಲವಾರು ದಿನಗಳಿಂದ ಕಲುಷಿತ ನೀರೆಲ್ಲವು ರಸ್ತೆಯಲ್ಲಿ ಹರಿಯುತ್ತಿರುವುದರಿಂದ ಅಲ್ಲಿನ ಸುತ್ತಮುತ್ತಲಿನ ವಾತಾವರಣವೇ ಗಬ್ಬು ನಾರುತ್ತಿದೆ. ಇದರಿಂದಾಗಿ ವಿದ್ಯಾರ್ಥಿ ನಿಲಯದ ಹೆಣ್ಣು ಮಕ್ಕಳು, ವಾಯುವಿಹಾರಿಗಳು ಮತ್ತು ಕ್ರಿಕೆಟ್ ತರಬೇತಿಗೆ ಬರುವ ಮಕ್ಕಳು ಮೂಗು ಮುಚ್ಚಿಕೊಂಡು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ, ಸಂಬಂಧಪಟ್ಟವರು ಇನ್ನಾದರು ಎಚ್ಚೆತ್ತು ಒಳಚರಂಡಿ ದುರಸ್ತಿಗೊಳಿಸಿ ಅಲ್ಲಿನ ಶುಚಿತ್ವವನ್ನು ಕಾಪಾಡಬೇಕಿದೆ.

– ಬಿ. ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಬದಲಾಗುತ್ತಿರುವ ಜೀವನ ಮೌಲ್ಯಗಳು

ಭಾರತೀಯತೆ, ಭಾರತ ಸಂಸ್ಕೃತಿ, ಭಾರತದ ಮೌಲ್ಯಗಳು ಇತ್ಯಾದಿ ಭಾರತಕ್ಕೇ ಸಂಬಂಧಿಸಿದ ಅಥವಾ ಭಾರತಕ್ಕೇ ವಿಶಿಷ್ಟವಾದ ಕೆಲವು ಆಚಾರ–ವಿಚಾರಗಳು, ಮೌಲ್ಯಗಳು, ನೀತಿ ಸಂಹಿತೆಗಳನ್ನು ಕುರಿತ ಮಾತುಗಳನ್ನು ಕೇಳುತ್ತಲಿರುತ್ತೇವೆ. ಬಹುಶಃ ಆ ಮಾತುಗಳನ್ನು ಆಡುವಾಗ, ಆಗಿಹೋದ ಅಥವಾ ನಾವು ಬಾಲ್ಯದಲ್ಲಿ ಕೇಳಿದ ಭಾರತದ ಪುರಾಣ–ಇತಿಹಾಸಗಳಿಂದ ಮೂಡಿದ ಒಂದು ಚಿತ್ರ ನಮ್ಮ ಮನಸ್ಸಿನಲ್ಲಿ ಮೂಡಿರಲಿಕ್ಕೆ ಸಾಕು. ಅದು ಸತ್ಯ ಹರಿಶ್ಚಂದ್ರನದಾಗಿರಬಹುದು, ಧ್ರುವ ಮಹಾರಾಜನದಿರಬಹುದು, ಕೃಷ್ಣದೇವರಾಯನದಾಗಿರಬಹುದು ಅಥವಾ ಪೃಥ್ವಿರಾಜ್ ಚೌಹಾನನದಿರಬಹುದು. ನಿಜ, ಅವರುಗಳು ಪಾಲಿಸಿಕೊಂಡು ಬಂದಂತಹ ಅತ್ಯುನ್ನತ ವಿಚಾರಗಳು, ಜೀವನ ಮೌಲ್ಯಗಳು ಖಂಡಿತಾ ಸರ್ವಕಾಲಕ್ಕೂ ಆದರ್ಶನೀಯವೇ ಹೌದು. ಕಾಲವು ಉರುಳಿದಂತೆ ಒಂದು ದೇಶದ ಸಂಸ್ಕೃತಿಯು ಕಂಡೂ ಕಾಣದಂತೆ ಬದಲಾಗುವುದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅರಿಯಬಹುದು. ಜನಜೀವನದಲ್ಲಿ ಕಾಲಕಾಲಕ್ಕೆ ಉಂಟಾಗುವ ಮಾರ್ಪಾಡುಗಳು, ವಿಜ್ಞಾನದ ಸಂಶೋಧನೆಯಿಂದ ಸಿಗುವ ಸೌಲಭ್ಯಗಳು, ಬದುಕಿನ ಎಲ್ಲ ಸ್ತರಗಳಲ್ಲೂ ಸದಾ ಆಗುವ–ಆಗುತ್ತಿರುವ ಬದಲಾವಣೆಗಳಿಗೆ ಹೊಂದಿಕೊಳ್ಳುತ್ತಾ ಹೋದಂತೆ ನಮ್ಮ ಬದುಕೂ ಬದಲಾಗಿರುವುದು ಅರ್ಥವಾಗುತ್ತದೆ.

ನಮ್ಮ ಬಾಲ್ಯದಲ್ಲಿ ಭಾರತಕ್ಕೆ ಕಾಲಿಟ್ಟ ದೂರದರ್ಶನವನ್ನೇ ತೆಗೆದುಕೊಳ್ಳಿ. ಅಂದು ಅದು ಜಗತ್ತಿನ ಅತ್ಯಂತ ದೊಡ್ಡ ವಿಸ್ಮಯ ಎಂಬಂತೆ ಕಂಡಿತ್ತು. ಅದುವರೆಗೂ ರೇಡಿಯೋ ಒಂದೇ ಅಚ್ಚರಿಯ ವಸ್ತುವಾಗಿತ್ತು. ಈಗ ಮಾತನಾಡುವವರೂ ಪರದೆಯ ಮೇಲೆ ಕಾಣಿಸುತ್ತಾರಂತೆ? ಎಂಬುದೇ ಅತ್ಯದ್ಭುತವಾದ ಸಂಗತಿ ಎನಿಸಿತ್ತು. ಯಕ್ಷಗಾನ, ದೊಡ್ಡಾಟ, ಬಯಲಾಟ, ಸಂಗೀತ, ನೃತ್ಯ, ಹರಿಕತೆಗಳನ್ನು ಆನಂದಿಸುತ್ತಿದ್ದ ಮನಸುಗಳಿಗೆ ಚಲನಚಿತ್ರ ಲಗ್ಗೆ ಇಟ್ಟಾಗ ಏನೆನಿಸಿರಬೇಡ ಯೋಚಿಸಿ! ಪೇಜರ್‌ಗಳನ್ನು ಬಳಸುತ್ತಿದ್ದ ಕೈಗಳಿಗೆ ಮೊಬೈಲ್ ಫೋನ್ ರೂಢಿಯಾಯಿತು. ನಡೆಯುತ್ತಲೇ ಬದುಕು ಸವೆಸುತ್ತಿದ್ದ ಕಾಲುಗಳಿಗೆ ಚಕ್ರಗಳುಳ್ಳ ವಾಹನಗಳ ಆಗಮನವಾಗಿ, ಕಾಲುಗಳ ಬಳಕೆಯು ಸೀಮಿತವಾಯಿತು. ಚಪ್ಪಲಿಯನ್ನೇ ಕಾಣದಿದ್ದ ಪಾದಗಳಿಗೆ ನೂರಾರು ರೀತಿಯ ಪಾದರಕ್ಷೆಗಳ ಸಾಲುಸಾಲೇ ಬಂದಿತು. ಹೀಗೆ ಅಡುಗೆಮನೆ, ಪಡಸಾಲೆ, ನೀರುಮನೆ, ಅಂಗಳ, ದೇವರ ಕೋಣೆ ಎಲ್ಲೆಲ್ಲೂ ಬದಲಾವಣೆಯನ್ನು ಗಮನಿಸಿದಾಗ, ಸದ್ದಿಲ್ಲದೆ ಅವು ಹೇಗೆ ನಮ್ಮ ಬದುಕನ್ನು ಬದಲಿಸಿವೆ ಎಂಬುದು ಅರ್ಥವಾಗುತ್ತದೆ. ಮುಂಜಾನೆ ಎದ್ದು ಹೊಸಿಲು ಸಾರಿಸಿ, ಮನೆ ಮುಂದೆ ರಂಗೋಲಿ ಹಾಕುತ್ತಿದ್ದ ಕೈಗಳಿಗೆ ರಂಗೋಲಿಯ ಸ್ಟಿಕರ್ ಬಂದು ವಿಶ್ರಾಂತಿ ಎನ್ನಬೇಕೋ, ವಿಧವಿಧ ರಂಗೋಲಿ ಕಲಿಯುವ ಹುಮ್ಮಸ್ಸೂ ಹೋಯಿತೆನ್ನಬೇಕೋ?

ಹಬ್ಬಗಳು ಬಂತೆಂದರೆ ಮನೆಯಲ್ಲೆಲ್ಲ ಸಂಭ್ರಮ. ಎಲ್ಲರೂ ಅದರಲ್ಲಿ ಪಾಲ್ಗೊಳ್ಳುತ್ತಿದ್ದರು. ತೋರಣ ಕಟ್ಟುವುದು, ತರಕಾರಿ ಹೆಚ್ಚುವುದು, ದೇವರ ಪೂಜೆಗೆ ಅಣಿ ಮಾಡುವುದು ಒಂದೇ ಎರಡೇ? ಮನೆಯ ನೆಲದ ಅಂಚಿನ ಉದ್ದಕ್ಕೂ ಕಲಸಿದ ಅಕ್ಕಿಹಿಟ್ಟಿನ ರಂಗೋಲಿಯು ಕೆಮ್ಮಣ್ಣಿನ ಬಾರ್ಡರಿನೊಡನೆ ನಸುನಗುತ್ತಿತ್ತು. ಹಿರಿ ಅಕ್ಕಂದಿರು ಕಿರಿಯ ತಮ್ಮ–ತಂಗಿಯರ ಅಭ್ಯಂಜನದ ವ್ಯವಸ್ಥೆ ನೋಡಿಕೊಂಡರೆ, ಅಮ್ಮ, ಮತ್ತೆ ಹಿರಿಯ ಹೆಂಗಸರು ಅಡುಗೆ ಮನೆಯ ಕೆಲಸಗಳಲ್ಲಿ ನಿರತರಾಗಿ ಮನೆ ತುಂಬ ಘಂ ಎನ್ನುವ ಹೋಳಿಗೆ–ಪಾಯಸದ ತಯಾರಿಯಲ್ಲಿ ತೊಡಗಿರುತ್ತಿದ್ದರು. (ಅಂಗಡಿಯಿಂದ ಹೋಳಿಗೆ ತಂದುಬಿಡುವುದು–ಕನಸಿನಲ್ಲೂ ಬಾರದ ವಿಷಯ!) ಇದು ನಮ್ಮ ಮನೆಗಳಲ್ಲಿ ಕಂಡುಬರುತ್ತಿದ್ದ ದೃಶ್ಯ. ಒರಳನ್ನು ಮಿಕ್ಸರ್ ಆಕ್ರಮಿಸಲಿ, ಈಳಿಗೆ ಮಣೆಯ ಜಾಗದಲ್ಲಿ ನಾನಾ ರೀತಿಯ ಕಟರ್‌ಗಳು ಬರಲಿ. ಆದರೆ ಹಬ್ಬದ ಸಂಭ್ರಮಕ್ಕೆ ಕೊರತೆ ಆಗದಿರಲಿ. ಬಂಧು–ಬಳಗ ಎಲ್ಲ ಸೇರಿ ಸಂಭ್ರಮಿಸುವ, ಒಟ್ಟಾಗಿ ಬದುಕಿ–ಬದುಕಲು ಅನು ಮಾಡಿಕೊಡುವ ಮನಸ್ಸು ಬದಲಾಗದಿರಲಿ. ಹೆಣ್ಣೂ ದುಡಿಯುವ ಈ ಸಂದರ್ಭದಲ್ಲಿ ಹಿಂದಿನಂತೆ ಪಾಂಗಿತವಾಗಿ ಎಲ್ಲವನ್ನೂ ಮಾಡಲಾಗದಿದ್ದರೂ ಮೂಲೋದ್ದೇಶಕ್ಕೆ ಕೊರತೆ ಆಗದಿರಲಿ.



> "ಇದು ಸ್ಪರ್ಧಾತ್ಮಕ ದಿನಗಳು ಹೌದು. ಆದರೆ ಅದರ ಹೆಸರಿನಲ್ಲಿ ಮಕ್ಕಳ ಸಂತೋಷ, ಸ್ವಾತಂತ್ರ್ಯ, ಬಾಲ್ಯ ಎಲ್ಲವನ್ನೂ ಕಸಿಯುವುದು ಅದೆಷ್ಟರ ಮಟ್ಟಿಗೆ ಸರಿ? ನನ್ನ ಮಗುವೇ ಮೊದಲು ಬರಬೇಕೆಂಬ ಹುಚ್ಚು ಓಟದ ಹಿಂದೆ ಬಿದ್ದರೆ, ಅವರಿಗೆ ಭಾರತೀಯತೆ, ಸಂಸ್ಕೃತಿ, ನೀತಿ, ಸರಳತೆ–ಸಜ್ಜನಿಕೆ, ಸೌಹಾರ್ದ, ಪ್ರೀತಿ–ವಿಶ್ವಾಸ, ಒಳಿತು–ಕೆಡುಕುಗಳ ಬಗ್ಗೆ ತಿಳಿ ಹೇಳುವವರಾರು?

ಬೇಸಿಗೆ ಬಂತೆಂದರೆ ಶಾಲೆ ಕಾಲೇಜುಗಳಿಗೆ ಬಿಡುವು. ಆಗ ಅಜ್ಜಿಯ ಮನೆಗೋ ಮಾವನ ಮನೆಗೋ ಮಕ್ಕಳು ಹೋಗುವುದು ತೀರಾ ಸಾಮಾನ್ಯವಾಗಿತ್ತು. ಅಲ್ಲಿನ ಸಾಹಸದ ಅನುಭವಗಳು ಬದುಕಿನ ಉದ್ದಕ್ಕೂ ನೆನಪಿನ ಬುತ್ತಿಯಲ್ಲಿ ಬೆಚ್ಚಗೆ ಕುಳಿತಿರುವ ವಿಷಯಗಳಾಗಿರುತ್ತಿತ್ತು. ಆದರೆ ಈಗ ? ಅಂದಿನಂತೆ ಮನೆ ಮನೆಯಲ್ಲಿ ಏಳೆಂಟು ಮಕ್ಕಳೂ ಇರುವುದಿಲ್ಲ. ಇರುವ ಒಂದು ಅಥವಾ ಎರಡಕ್ಕೆ ರಜೆಯಲ್ಲಿ ಬೇಸಿಗೆ ಶಿಬಿರಗಳು, ಕಂಪ್ಯೂಟರ್, ವೇದಿಕ್ ಮ್ಯಾತ್ಸ್ ಇತ್ಯಾದಿ ಕ್ಲಾಸುಗಳಿಗೆ ಹಾಕಿದರೆ ಮುಗಿಯಿತು. ಅವು ತಮ್ಮ ನೆಂಟರು ಇಷ್ಟರು ಯಾರೆಂಬುದನ್ನು ಅರಿಯಲು ಅವಕಾಶವೂ ಇರುವುದಿಲ್ಲ. ಅದು ಯಾರಿಗೂ ಬೇಕಾದ ವಿಷಯವೂ ಅಲ್ಲ. (ಕೀರುತಿಗೊಬ್ಬ ಮಗ, ಆರತಿಗೊಬ್ಬ ಮಗಳು) ಇದನ್ನು ಪಾಲಿಸಬೇಕಾಗಿದ್ದು ಹಿಂದೂಗಳು ಮಾತ್ರ ಎಂಬುದು ಭಾರತದಲ್ಲಿ ಹಿಂದೂಗಳ ಸಂಖ್ಯೆ ಇಳಿಮುಖವಾಗಲು ರೂಪಿಸಿದ ಷಡ್ಯಂತ್ರ ಎಂದೇ ನನ್ನ ಗುಮಾನಿ). ಈಗ ಇರುವ ಒಂದೋ ಎರಡೋ ಮಕ್ಕಳ ಕಡೆಗೆ, ಅಂದರೆ ಅವುಗಳ ಸಂಪೂರ್ಣ ಬೆಳವಣಿಗೆ ಅನ್ನಿ, ಸಮಯ ನಿರ್ವಹಣೆ ಅನ್ನಿ, ಅದನ್ನು ಮಾನಿಟರ್ ಮಾಡುವುದು ಅದರ ತಂದೆ–ತಾಯಂದಿರು. ಅದರಲ್ಲಿ ಹೊರಗೆ ಅವು ಸ್ವಚ್ಛಂದವಾಗಿ ಗೆಳೆಯರೊಡನೆ ಆಡುವ ಸಮಯವು ಸೇರಿರುವುದೇ ಇಲ್ಲ. ಸ್ಪರ್ಧೆ–ಸ್ಪರ್ಧೆ. ಇತರರಿಗಿಂತ ಹೆಚ್ಚು ಅಂಕ ಗಳಿಸಬೇಕು ಎಂಬುದೊಂದೇ ಗುರಿ. ಮಕ್ಕಳೂ ಅನಿವಾರ್ಯವಾಗಿ ಒತ್ತಡಕ್ಕೆ ಸಿಲುಕಬೇಕಾದ ಪರಿಸ್ಥಿತಿ. ನನ್ನ ಬಾಲ್ಯದ ಒಂದು ಸನ್ನಿವೇಶ ನೆನಪಾಗುತ್ತದೆ. ಒಮ್ಮೆ ತಂದೆಯವರೊಡನೆ ಹೀಗೇ ನಡೆದುಕೊಂಡು ರಸ್ತೆಯಲ್ಲಿ ಹೋಗುತ್ತಿದ್ದಾಗ, ಎದುರಿಗೆ ಸಿಕ್ಕ ಅವರ ಗೆಳೆಯರೊಬ್ಬರು ನನ್ನನ್ನು ನೋಡಿ ಓ ಮಗಳೋ, ಏನು ಓದುತ್ತಿದ್ದಾಳೆ ಎಂದರು. ನಮ್ಮ ತಂದೆ ಎಸ್ಸೆಲ್ಸೀನೋ ಪಿಯುಸೀನೋ ಓದುತ್ತಿದ್ದಾಳೆ ಎಂದರು. ನಾನು ಮೆಲ್ಲಗೆ ಅಣ್ಣಾ, ನಾನು ಮೊದಲ ವರ್ಷದ ಬಿ.ಎ. ಆನರ್ಸ್ ಓದುತ್ತಿದ್ದೇನೆ ಎಂದೆ! 454 ಮಕ್ಕಳು ಏನು ಓದುತ್ತಿದ್ದಾರೆ ಎಂಬುದರ ಬಗ್ಗೆಯೂ ತಲೆಕೆಡಿಸಿಕೊಳ್ಳದ ತಂದೆ–ತಾಯಿಗಳು, ಸಾಮಾನ್ಯವಾಗಿ ಅವರ ಓದಿನ ವಿಚಾರಣೆಯನ್ನು ಹಿರಿಯ ಮಕ್ಕಳ ಮೇಲೆ ಹೊರೆಸಿ, ನೆಮ್ಮದಿಯಾಗಿರುತ್ತಿದ್ದರು. ಶಾಲೆಯಿಂದ ಬಂದೊಡನೆ ಹೊರಗೆ ಆಟಕ್ಕೆ ಓಡುತ್ತಿದ್ದ ನಮಗೆ ಓದು ಒಂದು ಹೊರೆ ಎಂದು ಎಂದೂ ಅನಿಸಿರಲಿಲ್ಲ. ಯಾವಾಗಲೂ ಓದು, ಓದು ಎಂದು ಕಿರಿಕಿರಿ ಮಾಡುವ ಹಿರಿಯರೂ ಇರಲಿಲ್ಲ. ಕಲಿಕೆಯು ನಮಗೆ ಸಂತಸದ ವಿಷಯ. 496 ಈಗಿನ ಮಕ್ಕಳು ಒತ್ತಡದಿಂದ ಬಳಲುವುದನ್ನು ನೋಡಿದಾಗ ಬಹಳ ಖೇದವೆನಿಸುತ್ತದೆ. ಇದು ಸ್ಪರ್ಧಾತ್ಮಕ ದಿನಗಳು ಹೌದು. ಆದರೆ ಅದರ ಹೆಸರಿನಲ್ಲಿ ಮಕ್ಕಳ ಸಂತೋಷ, ಸ್ವಾತಂತ್ರ್ಯ, ಬಾಲ್ಯ ಎಲ್ಲವನ್ನೂ ಕಸಿಯುವುದು ಅದೆಷ್ಟರ ಮಟ್ಟಿಗೆ ಸರಿ? ನನ್ನ ಮಗುವೇ ಮೊದಲು ಬರಬೇಕೆಂಬ ಹುಚ್ಚು ಓಟದ ಹಿಂದೆ ಬಿದ್ದರೆ, ಅವರಿಗೆ ಭಾರತೀಯತೆ, ಸಂಸ್ಕೃತಿ, ನೀತಿ, ಸರಳತೆ–ಸಜ್ಜನಿಕೆ, ಸೌಹಾರ್ದ, ಪ್ರೀತಿ–ವಿಶ್ವಾಸ, ಒಳಿತು–ಕೆಡುಕುಗಳ ಬಗ್ಗೆ ತಿಳಿ ಹೇಳುವವರಾರು? ಅದರ ಬಗ್ಗೆ ತಿಳಿ ಹೇಳದ ತಂದೆ–ತಾಯಿಗಳು ಮಕ್ಕಳನ್ನು ದೂರಬಹುದೇ? ತಾಳ್ಮೆಯಿಂದ ಯೋಚಿಸಿ, ನಿಮ್ಮ ಮಗು ಓದಿನಲ್ಲಷ್ಟೇ ಅಲ್ಲದೆ ಉತ್ತಮ ಮನುಷ್ಯನಾಗುವುದೂ ಬಹಳ ಮುಖ್ಯ ಎಂಬುದನ್ನು ಅರಿತು, ಹೆಜ್ಜೆ ಇಟ್ಟಾಗ ಎಲ್ಲರ ಮನವೂ ನಿರಾಳ ಅಲ್ಲವೇ?

ವಾರಭವಿಷ್ಯ



16.03.2025 ರಿಂದ 22.03.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮೀನ, ಚಂದ್ರ–ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಕುಜ–ಮಿಥುನ, ಬುಧ–ಮೀನ, ಗುರು–ವೃಷಭ, ಶುಕ್ರ–ಮೀನ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ನಂಬಿಕೆಯೇ ದೇವರು, ಮಾಡುವ ಕೆಲಸದಲ್ಲಿ ಶ್ರದ್ಧೆಯಿಂದ ಮುಂದುವರೆಯಿರಿ. ಗುರುಬಲವಿದೆ. ನಿರಾಸೆಯಾಗದು. ವ್ಯಾಪಾರ, ವ್ಯವಹಾರಗಳಲ್ಲಿ ಹೊಸ ಚೇತರಿಕೆ ಕಂಡು ಬರುವುದು. ವಾರದ ಪೂರ್ವಾರ್ಧದಲ್ಲಿ ಕಾರ್ಯಕುಶಲತೆ ಹಾಗೂ ಪ್ರಯತ್ನ ಕಾರ್ಯಗಳು ಯಶಸ್ವಿಯಾಗುವುದು. ವಿವಾಹಾಕಾಂಕ್ಷಿಗಳಿಗೆ ಸೂಕ್ತ ಸಂಬಂಧಗಳು ಕೂಡಿ ಬರಲಿದೆ. ಮುಖ್ಯ ಕೆಲಸಗಳಿಗೆ ಅನುಭವಿಗಳ ಸಲಹೆಯ ಅಗತ್ಯವಿದೆ. ರಾಹು ಕಾರಣ ದುಡುಕಿನಿಂದ ವರ್ತಿಸಿ ಸ್ನೇಹ ಕೆಡುವುದು. ಶ್ರೀ ಗಣಪತಿ ಸ್ತುತಿ. ಶುಭ ಸಂಖ್ಯೆ–5

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಈ ವಾರದಲ್ಲಿ ಶುಭಾಶುಭ ಫಲಗಳು ಸಮನಾಗಿ ನಡೆಯುವುದು. ಕೈಗೆ ಬಂದ ಹಣ ಕಷ್ಟ ಕಾಲಕ್ಕೆ ಉಳಿಸಿಕೊಳ್ಳಿ. ಯಾರೋ ಮಾಡಿದ ತಪ್ಪಿಗೆ ನೀವು ಬಲಿಪಶು ಆಗುವಿರಿ. ಕುಟುಂಬದಲ್ಲಿ ಸಾಮರಸ್ಯದ ಕೊರತೆ ಕಾಡುವುದು. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟಲಿದೆ. ವಾರಾಂತ್ಯಕ್ಕೆ ಶುಭ ಸಮಾಚಾರದ ಓಲೆ ಬಂದು ಪುಳಕಿತರಾಗುವಿರಿ. ಆರೋಗ್ಯವೂ ಸುಧಾರಿಸುವುದು. ಶ್ರೀ ದೇವಿ ದರ್ಶನ. ಶುಭ ಸಂಖ್ಯೆ–4

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಿಳಂಬಗೊಂಡಿದ್ದ ಸರ್ಕಾರಿ ಕೆಲಸ ಕಾರ್ಯಗಳು ಅಧಿಕಾರಿಗಳ ಸಹಕಾರದಿಂದ ಪೂರ್ಣಗೊಳ್ಳುವುದು. ಸ್ತ್ರೀಯರಿಗೆ ಇಷ್ಟ ಕಾರ್ಯ ಸಿದ್ಧಿ. ಸ್ವಧರ್ಮಾಚರಣೆಯಿಂದ ಮನಸ್ಸಿನ ವ್ಯಾಕುಲತೆ ನಿವಾರಣೆ ಆಗುವುದು. ರತ್ನ ವ್ಯಾಪಾರಿಗಳಿಗೆ ಅಧಿಕ ಧನಲಾಭ. ಗೋವು, ಅಶ್ವ, ಗಜ ಲಾಭವಾಗುವುದು. ಮೃಷ್ಟಾನ್ನ ಭೋಜನ. ಕೇತು ಗ್ರಹ ಅಶುಭವಿದ್ದು, ಚಿತ್ತ ಚಾಂಚಲ್ಯ, ಸ್ತ್ರೀ ಮೂಲಕ ಭಯ, ಪ್ರಯಾಣಗಳಲ್ಲಿ ತೊಂದರೆ. ಶ್ರೀ ಸತ್ಯನಾರಾಯಣ ಪೂಜೆ. ಶುಭ ಸಂಖ್ಯೆ–9

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ವಾರದ ಆದಿಗೆ ಕೀರ್ತಿ ವೃದ್ಧಿ, ಪ್ರಭಾವಶಾಲಿಗಳೆನಿಸಿ ಸಾಮಾಜಿಕವಾಗಿ ಪ್ರಕಾಶಿಸುವಿರಿ. ಶತ್ರುಗಳ ಮೇಲೆ ವಿಜಯವನ್ನು ಸಾಧಿಸುವಿರಿ. ಲೇವಾದೇವಿ ಸಂಸ್ಥೆಯವರಿಗೆ ಆದಾಯದಲ್ಲಿ ಹೆಚ್ಚಳ. ಲೆಕ್ಕ ಪರಿಶೋಧಕರಿಗೆ ಹೊಸ ಕಕ್ಷಿದಾರರು ದೊರಕುವರು. ನಿವೇಶನ, ಮನೆ ಕ್ರಯ–ವಿಕ್ರಯಗಳಲ್ಲಿ ಉಂಟಾಗಿದ್ದ ಅಡಚಣೆಗಳು ನಿವಾರಣೆ ಆಗುವುದು. ಹಲವರಿಗೆ ಆಸ್ಪತ್ರೆಯಿಂದ ಡಿಸ್‌ಚಾರ್ಜ್. ಶ್ರೀ ಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ–1

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಬಹು ನಿರೀಕ್ಷಿತ ಕೆಲಸಗಳು ಸಫಲತೆಯ ಹಾದಿಯಲ್ಲಿ ಸಾಗುವುದು. ವ್ಯಾಪಾರದಲ್ಲಿ ಪ್ರಗತಿ, ಮನೆಯಲ್ಲಿ ದೇವತಾ ಕಾರ್ಯಗಳು ಜರುಗಲಿದೆ. ಷೇರು ವ್ಯವಹಾರಗಳನ್ನು ಅತೀ ಎಚ್ಚರಿಕೆಯಿಂದ ಮಾಡಿ ನೆರೆಹೊರೆಯಲ್ಲಿ ವಿರೋಧ ಕಟ್ಟಿಕೊಳ್ಳಬೇಡಿ. ಮಕ್ಕಳ ವಿದ್ಯಾಭ್ಯಾಸದ ಖರ್ಚು ಹೊರೆಯಾಗಲಿದೆ. ಸರ್ಕಾರಿ ಉದ್ಯೋಗಿಗಳಿಗೆ ಕೆಲಸದ ಒತ್ತಡ ವಿಪರೀತ ಇರಲಿದೆ. ದೂರ ಪ್ರಯಾಣಗಳನ್ನು ತ್ಯಜಿಸಿ. ಶ್ರೀ ಸೂರ್ಯ ಸ್ತುತಿ. ಶುಭ ಸಂಖ್ಯೆ–8

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದಾರಂಭಕ್ಕೆ ಚಂದ್ರಮನ ಆಗಮನದಿಂದ ಹರ್ಷ ಭರಿತರಾಗಿರುತ್ತೀರಿ. ಕೋರ್ಟು, ಕಚೇರಿ ವಿಷಯಗಳಲ್ಲಿ ಧನಾತ್ಮಕ ಫಲವನ್ನು ನಿರೀಕ್ಷಿಸಬಹುದು. ವನಿತಾ ಮಣಿಯರು ಅಲಂಕಾರಿಕ ವಸ್ತುಗಳಿಗೆ ಹೇರಳ ಧನ ವ್ಯಯ ಮಾಡುವರು. ಗುರು ಕೃಪೆಯಿಂದ ವ್ಯಾಪಾರ, ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ಆಹಾರ–ಪಾನೀಯಗಳಲ್ಲಿ ಸಂಯಮವಿರಲಿ. ಶ್ರೀ ವೆಂಕಟೇಶ್ವರಸ್ವಾಮಿ ಆರಾಧನೆ. ಶುಭ ಸಂಖ್ಯೆ–9

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಖಾಸಗಿ ಉದ್ಯಮ ನಡೆಸುವವರಿಗೆ ಹೆಚ್ಚಿನ ಕೆಲಸಗಳು ದೊರೆತು ವರಮಾನದಲ್ಲಿ ಹೆಚ್ಚಳ. ಚಂದ್ರ ಬಲದ ಕಾರಣ ಯತ್ನ ಕಾರ್ಯಗಳು ಯಶಸ್ವಿಯಾಗಲಿದೆ. ಸ್ತ್ರೀ ಮುಖೇನ ನಿಮ್ಮ ಅಭಿವೃದ್ಧಿಗೆ ಪೂರಕವಾದ ವಾತಾವರಣ ನಿರ್ಮಾಣವಾಗುವುದು. ರಾಜಕೀಯ ರಂಗದವರಿಗೆ ವಿರೋಧಿಗಳ ಉಪಟಳದಿಂದ ಹಿನ್ನಡೆ. ಮನೆಯ ಆಳು–ಕಾಳುಗಳ ಮೇಲೆ ಗಮನವಿಡಿ. ಆರೋಗ್ಯದ ಕಡೆಯೂ ಗಮನವಿಡಿ. ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–1

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು
ವಾರದ ಆದಿಗೆ ಕೈಗೆತ್ತಿಕೊಂಡ ಕೆಲಸಗಳಲ್ಲಿ ಉಂಟಾಗಿದ್ದ ಅಡಚಣೆಗಳು ನಿವಾರಣೆ ಆಗುತ್ತದೆ. ಪ್ರತಿಷ್ಠಿತ ವ್ಯಕ್ತಿಗಳ ಪರಿಚಯ ನಿಮ್ಮ ಮುಂದಿನ ಭವಿಷ್ಯದ ದಿನಗಳಲ್ಲಿ ಹೆಚ್ಚಿನ ಅನುಕೂಲವನ್ನು ಉಂಟುಮಾಡುತ್ತದೆ. ಬೃಹತ್ ಉದ್ಯಮಿದಾರರಿಗೆ ಗಣನೀಯ ಆರ್ಡರ್‌ಗಳು ದೊರೆಯುತ್ತದೆ. ಹೊಸ ಆಸ್ತಿ ಕೊಳ್ಳಲು ಪೂರ್ವಭಾವಿ ತಯಾರಿಗಳನ್ನು ಮಾಡಿಕೊಳ್ಳಬಹುದಾಗಿದೆ. ವಾರಾಂತ್ಯಕ್ಕೆ ಧರ್ಮಕ್ಷೇತ್ರ ಸಂದರ್ಶನ. ಶ್ರೀ ನೃಸಿಂಹ ದೇವರ ಅರ್ಚನೆ. ಶುಭ ಸಂಖ್ಯೆ–7

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದ ಆದಿಗೆ ಆಪ್ತೇಷ್ಟರ ಮಿಲನ. ಅತಿಥಿ ಅಭ್ಯಾಗತರ ಆಗಮನ. ನೂತನ ವಸ್ತ್ರಾಭರಣ ಖರೀದಿ ಹಬ್ಬದ ಪ್ರಯುಕ್ತ ಅಧಿಕ ಖರ್ಚುಗಳು. ಕೃಷಿಕರಿಗೆ ಉತ್ತಮ ಫಸಲು ಹಾಗೂ ಬೆಲೆ ದೊರಕುವುದು. ವಾರ ಮಧ್ಯೆ ಸಾಧು–ಸಜ್ಜನರ ಸಮಾಗಮ. ಧಾನ–ಧರ್ಮ ಬುದ್ಧಿ ಮನೆಯ ಹೊರಗೆ ಸಮಸ್ಯೆ ಎದುರಾದರೂ ಹಿರಿಯರ ಮಧ್ಯಸ್ಥಿಕೆಯಿಂದ ಪರಿಹಾರವಾಗುವುದು. ಮುಂಜಾನೆಯ ವಾಯುವಿಹಾರಕ್ಕೆ ತೆರಳಿದಾಗ ಮಾಂಗಲ್ಯ ಸರ ತೆಗೆದು ಇಡಿ. ಶ್ರೀ ರಾಹು–ಕೇಗು ಮಂತ್ರ ಜಪಿಸಿ. ಶುಭ ಸಂಖ್ಯೆ–3

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ದವಸ–ಧಾನ್ಯ–ವ್ಯಾಪಾರಿಗಳಿಗೆ ಹಬ್ಬದ ಪ್ರಯುಕ್ತ ಬಂಪರ್ ವ್ಯಾಪಾರ. ನೂತನ ಆಭರಣ ಖರೀದಿಯಿಂದ ಶ್ರೀಮತಿಗೆ ಸಂತೋಷ. ವಿಶಿಷ್ಟ ಪ್ರತಿಭೆಯುಳ್ಳ ವ್ಯಕ್ತಿಗಳ ಭೇಟಿಯಿಂದ ನಿಮ್ಮ ಮುಂದಿನ ಯೋಜನೆಗಳಿಗೆ ಸೋಪಾನವಾಗುವುದು. ಮನೆಯಲ್ಲಿ ಆಧ್ಯಾತ್ಮಿಕ ಚಟುವಟಿಕೆಗಳು ನಡೆಯುವುದು. ವಾರಾಂತ್ಯಕ್ಕೆ ಖರ್ಚು–ವೆಚ್ಚಗಳು ಮಿತಿ ಮೀರುವುದು. ಸಟ್ಟಾ ಜೂಜುಗಳಿಂದ ಏನೂ ಪ್ರಯೋಜನವಾಗದು. ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ–8

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಸಪ್ತಾಹದ ಆದಿಗೆ ಮನಸ್ಸಿಗೆ ಉಲ್ಲಾಸ. ಸುತ್ತಲಿನ ಜನರ ಹಾಗೂ ಬಂಧು–ಮಿತ್ರರ ಜೊತೆಗೆ ಉತ್ತಮ ಬಾಂಧವ್ಯ. ಚಿಂತಿಸಿದ ಕಾರ್ಯವು ಫಲಿಸುವುದು. ಆಳು ದೊರೆಗಳ ಭೇಟಿಯಿಂದ ಭಾಗ್ಯ ವೃದ್ಧಿ. ಮಾನಸಿಕ ಧೈರ್ಯ. ಜನ್ಮ ಶನಿದೇವನ ಕಾರಣ ಶಾರೀರಿಕ ಬಲಹೀನತೆ, ಮನಃಕ್ಲೇಷಗಳು, ದುರ್ಮಾರ್ಗಿಗಳ ಸಹವಾಸದಿಂದ ಕಷ್ಟವನ್ನು ತಂದುಕೊಳ್ಳುವಿರಿ. ಅಂದರ್–ಬಾಹರ್ ನವ ವರುಷದ ಸಂತೋಷವನ್ನು ಹಾಳುಗೆಡುವುದು. ಶ್ರೀ ನಾರಾಯಣನಾಮ ಸ್ಮರಣೆ ಶುಭ ಸಂಖ್ಯೆ–2

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದಾರಂಭಕ್ಕೆ ಮಾನಸಿಕ ದೃಢತೆ, ನೆಚ್ಚಿನ ಗೆಳೆಯ–ಗೆಳತಿಯರ ಭೇಟಿ, ಸಂತೋಷ ಕೂಟಗಳು ನಡೆಯುವುದು. ಯುಗಾದಿಯ ದಿನದಂದೇ ಕಲಿಯುಗ ದಂಡಾಧಿಕಾರಿಯಾದ ಶನಿದೇವ ನಿಮ್ಮ ರಾಶಿಗೆ ಪ್ರವೇಶ ಮಾಡಲಿದ್ದಾರೆ. ಯಾವುದೇ ಮಹತ್ತರ ವಿಚಾರಗಳನ್ನು ದೀರ್ಘವಾಗಿ ವಿಮರ್ಶೆ ಮಾಡಿ ಮುಂದುವರೆಯಿರಿ. ವಾಹನ ಚಲಾಯಿಸುವುದು ಮೋಜಿಗಾಗಿ ಅಲ್ಲ ಎಂಬ ಅರಿವಿರಲಿ. ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–3

ಪದ್ಮ ಪ್ರಶಸ್ತಿಗೆ ಜುಲೈ 31ರವರೆಗೆ ನಾಮ ನಿರ್ದೇಶನಕ್ಕೆ ಅವಕಾಶ

ನವದೆಹಲಿ: 2026ರ ಪದ್ಮ ಪ್ರಶಸ್ತಿಗಳಿಗೆ ಜುಲೈ 31ವರೆಗೆ ಆನ್‌ಲೈನ್ ಮೂಲಕ ನಾಮನಿರ್ದೇಶನ ಮತ್ತು ಶಿಫಾರಸು ಮಾಡಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಸಾರ್ವಜನಿಕರು ನಾಮ ನಿರ್ದೇಶನ ಮತ್ತು ಶಿಫಾರಸುಗಳನ್ನು ರಾಷ್ಟ್ರೀಯ ಪುರಸ್ಕಾರ್ ಪೋರ್ಟಲ್ (https://awards.gov.in) ಮೂಲಕ ಸಲ್ಲಿಸಬಹುದು. ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಾದ ಪದ್ಮ ವಿಭೂಷಣ, ಪದ್ಮ ಭೂಷಣ ಮತ್ತು ಪದ್ಮಶ್ರೀಗೆ ಆಯ್ಕೆಯಾದವರ ಹೆಸರುಗಳನ್ನು ಗಣರಾಜ್ಯೋತ್ಸವದ ಮುನ್ನಾ ದಿನದಂದು ಘೋಷಿಸಲಾಗುತ್ತದೆ.

ಕಲೆ, ಸಾಹಿತ್ಯ ಮತ್ತು ಶಿಕ್ಷಣ, ಕ್ರೀಡೆ, ವೈದ್ಯಕೀಯ, ಸಮಾಜ ಸೇವೆ, ವಿಜ್ಞಾನ ಮತ್ತು ಎಂಜಿನಿಯರಿಂಗ್, ಸಾರ್ವಜನಿಕ ವ್ಯವಹಾರಗಳು, ನಾಗರಿಕ ಸೇವೆ, ವ್ಯಾಪಾರ ಮತ್ತು ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ವಿಶಿಷ್ಟ ಮತ್ತು ಅಸಾಧಾರಣ ಸಾಧನೆ ಮತ್ತು ಸೇವೆಗಾಗಿ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಜನಾಂಗ, ವೃತ್ತಿ, ಸ್ಥಾನ ಅಥವಾ ಲಿಂಗ ಭೇದವಿಲ್ಲದೆ ಎಲ್ಲ ನಾಗರಿಕರು ನಾಮನಿರ್ದೇಶನ ಮಾಡಬಹುದು ಅಥವಾ ಯಾವುದೇ ವ್ಯಕ್ತಿಯ ಹೆಸರನ್ನು ಶಿಫಾರಸು ಮಾಡಬಹುದು. ಆದರೆ, ಅಗತ್ಯವಿರುವ ಎಲ್ಲ ವಿವರಗಳಿರಬೇಕು.

ವೈದ್ಯರು, ವಿಜ್ಞಾನಿಗಳನ್ನು ಹೊರತುಪಡಿಸಿ, ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಸೇರಿದಂತೆ ಸರ್ಕಾರಿ ನೌಕರರು ಪದ್ಮ ಪ್ರಶಸ್ತಿಗಳಿಗೆ ಅರ್ಹರಲ್ಲ.

ತೆಲಂಗಾಣದಲ್ಲಿ 64 ಮಾವೋವಾದಿಗಳು ಪೊಲೀಸರಿಗೆ ಶರಣು

ಹೈದರಾಬಾದ್: ತೆಲಂಗಾಣದ ಭದ್ರಾದ್ರಿ ಕೊಠಗುಡಂ ಜಿಲ್ಲೆಯಲ್ಲಿ ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಯ ಒಟ್ಟು 64 ಸದಸ್ಯರು ಶನಿವಾರ ಜಿಲ್ಲಾ ಪೊಲೀಸರ ಮುಂದೆ ಶರಣಾಗಿದ್ದಾರೆ.

ಶರಣಾದ 64 ಸದಸ್ಯರು ಸೇರಿದಂತೆ ಕಳೆದ ಎರಡೂವರೆ ತಿಂಗಳಿನಲ್ಲಿ ಒಟ್ಟು 122 ಮಾವೋವಾದಿಗಳು ಶರಣಾಗಿದ್ದಾರೆ ಎಂದು ಭದ್ರಾದ್ರಿ ಕೊಠಗುಡಂ ಪೊಲೀಸ್ ವರಿಷ್ಠಾಧಿಕಾರಿ ಬಿ.ರೋಹಿತ್ ರಾಜು ತಿಳಿಸಿದ್ದಾರೆ. ಮಾವೋವಾದಿಗಳು ಶರಣಾಗಲು ಮತ್ತು ಸಾಮಾನ್ಯ ಜೀವನ ನಡೆಸಲು ಬಯಸುವ ಮಾವೋವಾದಿಗಳು ತಮ್ಮ ಹತ್ತಿರದ ಪೊಲೀಸ್ ಠಾಣೆ ಅಥವಾ ಜಿಲ್ಲಾ ಅಧಿಕಾರಿಗಳನ್ನು ತಮ್ಮ ಕುಟುಂಬ ಸದಸ್ಯರ ಮೂಲಕ ಅಥವಾ ನೇರವಾಗಿ ಸಂಪರ್ಕಿಸುವಂತೆ ಪೊಲೀಸರು ಮನವಿ ಮಾಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಬಿವಿಬಿ ಶಾಲೆಯಲ್ಲಿ ಸರಸ್ವತಿ ಪೂಜೆ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಆಶೀರ್ವಚನ...



ಮೈಸೂರು ವಿಜಯನಗರ ಮೊದಲ ಹಂತದಲ್ಲಿರುವ ಭಾರತೀಯ ವಿದ್ಯಾ ಭವನ (ಬಿವಿಬಿ) ಶಾಲೆಯಲ್ಲಿ ಸರಸ್ವತಿ ಪೂಜೆ ಹಾಗೂ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಆಶೀರ್ವಚನ ಕಾರ್ಯಕ್ರಮವನ್ನು ಶನಿವಾರ ಏರ್ಪಡಿಸಲಾಗಿತ್ತು. ಈ ವೇಳೆ ಭವಿಷ್ಯದ ಶೈಕ್ಷಣಿಕ ಪ್ರಗತಿ ಉತ್ತಮದಾಯಕವಾಗಿರಲಿ ಎಂದು ಹಾರೈಸಿ ಬೀಳ್ಕೊಡುಗೆ ನೀಡಲಾಯಿತು. ಚಿತ್ರದಲ್ಲಿ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷರಾದ ಡಾ. ಕೆ.ಬಿ.ಗಣಪತಿ ಹಾಗೂ ಇತರರನ್ನು ಕಾಣಬಹುದು.

ಅಭಿನಂದನೆ...



ಮೈಸೂರಿನ ಇಂದಿರಾಗಾಂಧಿ ಕಾಂಗ್ರೆಸ್ ಭವನಕ್ಕೆ ಭೇಟಿ ನೀಡಿದ ಸುಪ್ರೀಂಕೋರ್ಟಿನ ನ್ಯಾಯವಾದಿ, ರಾಜ್ಯಸಭಾ ಸದಸ್ಯ, ಎಐಸಿಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಮನು ಸಿಂಗ್ವಿ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರ ಹಿಂದುಳಿದ ವರ್ಗದ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎನ್.ಆರ್.ನಾಗೇಶ್, ಮುಖಂಡರಾದ ಭೈರಪ್ಪ, ಮಲ್ಲೇಶ್, ಚಂದ್ರು ವಿಶ್ವಕರ್ಮ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

ಸಾರ್ವಜನಿಕ ಸೇವಾ, ಸರಕು ವಾಹನಗಳ ಪ್ಯಾನಿಕ್ ಬಟನ್‌ಗೆ ಏಕರೂಪದ ದರ ನಿಗದಿ

ಮೈಸೂರು, ಮಾ.15(ಬಿಎಲ್‌ಯು)– ಸಾರ್ವಜನಿಕ ಸೇವಾ ಹಾಗೂ ಸರಕು ಸಾಗಾಣಿಕೆ ವಾಹನಗಳಿಗೆ ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್ (ವಿಎಲ್‌ಟಿಡಿ) ಹಾಗೂ ಎಮರ್ಜೆನ್ಸಿ ಪ್ಯಾನಿಕ್ ಬಟನ್ ಅಳವಡಿಕೆಗೆ ಸರ್ಕಾರ ಏಕ ದರ ನಿಗದಿ ಮಾಡಿದೆ. ಇದರಿಂದ ಮನ ಬಂದಂತೆ ದರ ನಿಗದಿ ಮಾಡುವ ಖಾಸಗಿ ಕಂಪನಿಗಳಿಗೆ ಸರ್ಕಾರ ಕಡಿವಾಣ ಹಾಕಿದೆ.

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆದ ನಿರ್ಭಯಾ ಹತ್ಯೆ ತರುವಾಯ ಟ್ಯಾಕ್ಸಿ ಸೇರಿದಂತೆ ಇತರೆ ಸಾರ್ವಜನಿಕ ಸೇವಾ ವಾಹನಗಳಲ್ಲಿ ಪ್ರಯಾಣಿಸುವ ಮಹಿಳೆಯರು ಹಾಗೂ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಕೇಂದ್ರ ಸರ್ಕಾರ ನಿರ್ಭಯಾ ಯೋಜನೆಯನ್ನು ಜಾರಿಗೊಳಿಸಿದೆ.

ಪ್ರತಿಯೊಂದು ಸಾರ್ವಜನಿಕ ಸೇವಾ ವಾಹನಗಳು ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್ ಹಾಗೂ ಎಮರ್ಜೆನ್ಸಿ ಪ್ಯಾನಿಕ್ ಬಟನ್ ಅಳವಡಿಸಬೇಕೆಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ

ದುಬಾರಿ ಬೆಲೆ ನಿಗದಿ ಮಾಡಿದ್ದ ಏಜೆನ್ಸಿಗಳಿಗೆ ಕಡಿವಾಣ



ಸಚಿವಾಲಯ ಆದೇಶ ನೀಡಿತ್ತು.

ಸಾರ್ವಜನಿಕ ಸೇವಾ ವಾಹನಗಳು ಮಾತ್ರವಲ್ಲದೆ ಸರಕು ಸಾಗಾಣಿಕೆ ವಾಹನಗಳು ಕೂಡ ಇದನ್ನು ಅಳವಡಿಸಿಕೊಳ್ಳಬೇಕೆಂದು ಸರ್ಕಾರ ಕಡ್ಡಾಯ ಮಾಡಿದೆ. ಸಾರ್ವಜನಿಕ ಸೇವಾ ಹಾಗೂ ಸರಕು ಸಾಗಾಣಿಕೆ ವಾಹನಗಳಿಗೆ ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್ ಅಳವಡಿಸಿಕೊಳ್ಳದಿದ್ದರೆ ಎಫ್‌ಸಿ ಮಾಡುವುದಿಲ್ಲ ಎಂದು ಸರ್ಕಾರ ತಿಳಿಸಿತ್ತು. ಪರಿಸ್ಥಿತಿ ಲಾಭ ಪಡೆದ ಕಂಪನಿ ಏಜೆನ್ಸಿಗಳು ದುಬಾರಿ ಬೆಲೆಗೆ ಡಿವೈಸ್‌ಗಳನ್ನು ಮಾರಾಟ ಮಾಡುತ್ತಿತ್ತು. ಅಲ್ಲದೆ ಒಂದೊಂದು ಕಂಪನಿಯ ಡಿವೈಸ್ ಒಂದೊಂದು ರೀತಿಯಲ್ಲಿ ಇತ್ತು.

ಪ್ಯಾನಿಕ್ ಬಟನ್ ಇಲ್ಲದಿದ್ದರೆ ಎಫ್‌ಸಿ ನೀಡಲ್ಲ

“ಸರ್ಕಾರ ನಿಗದಿ ಮಾಡಿದ ದರದಲ್ಲಿ ಏಜೆನ್ಸಿಗಳು ಡಿವೈಸ್‌ಗಳನ್ನು ಮಾರಾಟ ಮಾಡಬೇಕು. ಇವುಗಳ ಬೆಲೆ ಎಷ್ಟೆಂದು ಆರ್‌ಟಿಒ ಕಚೇರಿ ಫಲಕದಲ್ಲಿ ಹಾಕಲಾಗಿದೆ. ಡಿವೈಸ್ ಇಲ್ಲದ ವಾಹನಗಳಿಗೆ ಎಫ್‌ಸಿ ನೀಡುವುದಿಲ್ಲ. ಎಫ್‌ಸಿ ನೀಡುವ ಸಂದರ್ಭದಲ್ಲಿ ಕಂಪ್ಯೂಟರ್‌ನಲ್ಲಿ ಡಿವೈಸ್ ಸಂಖ್ಯೆ ದಾಖಲಿಸಬೇಕು. ಇಲ್ಲದಿದ್ದರೆ ಕಂಪ್ಯೂಟರ್‌ನಲ್ಲಿನ ಇತರೆ ಪ್ರಕ್ರಿಯೆಗಳು ಚಾಲನೆಗೊಳ್ಳುವುದಿಲ್ಲ. **–ದೇವಿಕಾ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಮೈಸೂರು.**

ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್ (ವಿಎಲ್‌ಟಿಡಿ) ಹಾಗೂ ಎಮರ್ಜೆನ್ಸಿ ಪ್ಯಾನಿಕ್ ಬಟನ್‌ಗೆ ದುಬಾರಿ ದರ ನಿಗದಿ ಮಾಡಲಾಗಿದೆ. ಇದಲ್ಲದೆ ನೆಟ್‌ವರ್ಕ್ ಕನೆಕ್ಟಿವಿಟಿಗೆ ಪ್ರತ್ಯೇಕವಾಗಿ ಹಣ ನೀಡಬೇಕಿದೆ ಎಂದು ವಾಹನ ಮಾಲೀಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

ಈ ಹಿನ್ನೆಲೆ ಡಿವೈಸ್ ಅಳವಡಿಸುವ ಏಜೆನ್ಸಿಗಳ ಜೊತೆ ಸಂಧಾನ ಮಾತುಕತೆ ನಡೆಸಿ ವಾಹನ ಚಾಲಕರಿಗೆ ದುಬಾರಿ ಆಗದಂತೆ ಏಕ ದರ ನಿಗದಿಗೊಳಿಸಲಾಗಿದೆ ಎಂದು ಸರ್ಕಾರ ಹೇಳಿದೆ.

ಜಿಎಸ್‌ಟಿ ಮತ್ತು ಇತರೆ ತೆರಿಗೆ ಒಳಗೊಂಡಂತೆ ವಿಎಲ್‌ಟಿಡಿಗೆ 5,424 ರೂ.ಗೆ, ಎಮರ್ಜೆನ್ಸಿ ಪ್ಯಾನಿಕ್ ಬಟನ್‌ಗೆ 325 ರೂ. ಹಾಗೂ 1 ವರ್ಷ ಅವಧಿಯ ನೆಟ್‌ವರ್ಕ್ ಕನೆಕ್ಟಿವಿಟಿ ಮತ್ತು ನಿರ್ವಹಣೆಗಾಗಿ 1,800 ರೂ. ನಿಗದಿ ಮಾಡಲಾಗಿದೆ. ಡಿವೈಸ್ ಅಳವಡಿಸುವ 12 ಕಂಪನಿಗಳು ಏಕ ದರದಲ್ಲಿ ಮಾರಾಟ ಮಾಡಬೇಕು ಎಂದು ಸರ್ಕಾರ ಕಟ್ಟಾಜ್ಞೆ ಮಾಡಿದೆ.

ಅಂತರರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಮೈಸೂರಿನ ಡಾ.ಮೋಹನ್ ಕೃಷ್ಣ

ಮೈಸೂರು, ಮಾ.15(ಎಂಕೆ)– ಮೈಸೂರು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಅಸೋಸಿಯೇಟ್ ಪ್ರೊ.ಎಸ್.ಎ.ಮೋಹನ್ ಕೃಷ್ಣ, ಏ.16 ರಂದು ಮಲೇಷ್ಯಾದಲ್ಲಿ



ನಡೆಯುವ 'ದ್ರವ ಯಂತ್ರಶಾಸ್ತ್ರ ಮತ್ತು ಉಷ್ಣ ವಿಜ್ಞಾನಗಳು–2025ರ 9ನೇ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ತಾಂತ್ರಿಕ ಪ್ರಬಂಧವನ್ನು ಮಂಡಿಸಲಿದ್ದಾರೆ. 'ವ್ಯಾಪಕವಾದ ಗಿಫೋರ್ಡ್–ಮೆಕ್‌ಮಹಾನ್ ಕ್ರಯೋ ಕೂಲರ್ ಬಳಸಿ ವಾಣಿಜ್ಯ ಹೀಲಿಯಂ ದ್ರವೀಕರಣ ವ್ಯವಸ್ಥೆಯಲ್ಲಿ ಪ್ರಾಯೋಗಿಕ ತನಿಖೆ ಮತ್ತು ಉಷ್ಣ ವಿಶ್ಲೇಷಣೆ' ಕುರಿತು ಪ್ರಬಂಧ ಮಂಡಿಸಲಿದ್ದಾರೆ. ಈ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಮಲೇಷ್ಯಾದ ಕಾಜಾಂಗ್‌ನ ಸೆಮಲಕ್ ಇಲ್ಮು ಸಂಶೋಧನೆ ಮತ್ತು ಸಮಾಲೋಚನೆ ಆಯೋಜಿಸುತ್ತಿದೆ. ಇದಕ್ಕೂ ಮೊದಲು, ಅವರು ವಿವಿಧ ರಾಷ್ಟ್ರಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಹಾಸನ ಮಿತ್ರ

ಮಹಿಳೆಯರ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಿಐಟಿಯು ಪ್ರತಿಭಟನೆ



ಹಾಸನ: ಮಹಿಳೆಯರ ನ್ಯಾಯಯುತ ಹಕ್ಕುಗಳಿಗಾಗಿ ಮಂಡಿಸಿರುವ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ನಗರದ ಹೇಮಾವತಿ ಪ್ರತಿಮೆ ಮುಂಭಾಗದಿಂದ ಹೊರಟ ಪ್ರತಿಭಟನಾ ಮೆರವಣಿಗೆಯು ಎನ್.ಆರ್. ವೃತ್ತದಿಂದ ಬಿ.ಎಂ.ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಸೇರಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ ಮಾತನಾಡಿ, ಮಹಿಳೆಯರ ಹಕ್ಕುಗಳ ಮೇಲಿನ ದಾಳಿಗಳು ಹೆಚ್ಚುತ್ತಿವೆ. ತಾರತಮ್ಯ ಅಧಿಕವಾಗುತ್ತಿದೆ. ಸಾಮಾನ್ಯ ಜನರು ಅದರಲ್ಲೂ ದುಡಿಯುವ ಮಹಿಳೆಯರ ಮೇಲೆ ಅಗತ್ಯ ವಸ್ತುಗಳ ಬೆಲೆಯೇರಿಕೆಯ ಗದಾಪ್ರಹಾರ ಆಗುತ್ತಿದೆ. ಇದು ಎಲ್ಲಾ ಜನರ ಬದುಕಿನ ಮೇಲೂ ಪರಿಣಾಮ ಬೀರುತ್ತಿದೆ ಎಂದರು.

ಕೃಷಿ ಬಿಕ್ಕಟ್ಟು ತೀವ್ರವಾಗಿರುವುದರಿಂದ ಕೆಲಸ ಅರಸಿ ವಲಸೆ ಹೋಗುವವರ ಪ್ರಮಾಣ ಜಾಸ್ತಿಯಾಗಿದೆ. ಅದರ ಪರಿಣಾಮವಾಗಿ, ಅನಿವಾರ್ಯವಾಗಿ ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿಯೇ ಉಳಿಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಬಹು ಸಂಖ್ಯೆಯಲ್ಲಿ ಸರ್ಕಾರಿ ಯೋಜನಾ ಕಾರ್ಮಿಕರಲ್ಲಿ ಮಹಿಳೆಯರೇ ಹೆಚ್ಚಿರುವ ಅಸಂಘಟಿತ ಯೋಜನಾ ಕಾರ್ಮಿಕರು, ಕೃಷಿ, ಗುತ್ತಿಗೆ–ಹೊರಗುತ್ತಿಗೆ, ಖಾಸಗಿ ನರ್ಸಿಂಗ್ ಹೋಂ, ಖಾಸಗಿ ಶಿಕ್ಷಣ ಸಂಸ್ಥೆಗಳು, ಸಣ್ಣ ಕಾರ್ಖಾನೆಗಳು ಮುಂತಾದೆಡೆ ಕೆಲಸ ಮಾಡುವ ಮಹಿಳೆಯರಿಗೆ ಹೆರಿಗೆ ಭತ್ಯೆ ಸೌಲಭ್ಯ ಕನಸಾಗಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಸಾಹಿತಿ ರೂಪ ಹಾಸನ್, ಅಂಗನವಾಡಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುಳಾ, ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಸೌಮ್ಯ, ಅಕ್ಷರ ದಾಸೋಹ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷೆ ಮೀನಾಕ್ಷಿ, ಜಿಲ್ಲಾ ಖಜಾಂಚಿ ಶೈಲಜ, ಅರವಿಂದ್ ಇತರರು ಉಪಸ್ಥಿತರಿದ್ದರು.

ಸಂಭ್ರಮದ ಹೋಳಿ ಹಬ್ಬ ಆಚರಣೆ

ಹಾಸನ: ಪ್ರತಿನಿತ್ಯ ಶಾಲೆಗೆ ಹೋಗುವ ಮಕ್ಕಳು ಸಲ್ಪ ಸಮಯ ಹೋಳಿ ಆಚರಣೆಗೆ ಮೀಸಲಿಟ್ಟು ನಗರದ ಅರಳೇ ಪೇಟೆ ರಸ್ತೆ, ಎಂ.ಹೆಚ್.ಹಾಲ್ ಎದುರು ಖಾಲಿ ಜಾಗವೊಂದರಲ್ಲಿ ವಿವಿಧ ಬಣ್ಣ ಹಾಗೂ ಬಣ್ಣದ ನೀರನ್ನು ಒಬ್ಬರಿಗೊಬ್ಬರು ಎರಚಾಡಿ ಸಂಭ್ರಮಿಸಿ ದರು. ನಗರದ ಸಾಲಗಾಮೆ ರಸ್ತೆ ಬಳಿ ಇರುವ ಹೆಸರಾದಂತಹ ಸ್ಕಾಲರ್ಸ್ ಶಾಲೆಯ ವಿದ್ಯಾರ್ಥಿಗಳಾದ ಪ್ರೀತಂ, ಯಶವಂತ್, ಶಕ್ತಿ ಶ್ರೀನಿವಾಸ್, ರಿತೇಶ್, ತರುಣ್, ಮಿಥುನ್, ಆರ್. ಪ್ರೀತಮ್ ಇತರರು ಬಣ್ಣವನ್ನು ಒಬ್ಬರಿಗೊಬ್ಬರು ಎರಚಾಡಿದರು. ಮಕ್ಕಳಿಗೆ ಪರೀಕ್ಷೆ ಹತ್ತಿರ ಇರುವುದರಿಂದ ಹೋಳಿ ಆಟದ ಸಂಭ್ರಮ ಸಲ್ಪ ಕಡಿಮೆಯೇ ಇತ್ತು. ಆದರೂ ಕೆಲ ಮಕ್ಕಳು ತಮ್ಮ ಸಂತೋಷಕ್ಕೆ ಯಾವ ಕೊರತೆ ಆಗದಂತೆ ಸಂಭ್ರಮಿಸಿದರು.

ಏ.10ರಿಂದ ಪುಟಾಣಿ ಪರ್‌ಪಂಚ ಬೇಸಿಗೆ ಶಿಬಿರ ಆರಂಭ

ಮೈಸೂರು, ಮಾ.15– ಮೈಸೂರಿನ ಶ್ರೀಗುರು ಕಲಾ ಶಾಲೆ ವತಿಯಿಂದ ಏ.10 ರಿಂದ ಮೇ 1ರವರೆಗೆ ಪುಟಾಣಿ ಪರ್‌ಪಂಚ ಮಕ್ಕಳ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಕುವೆಂಪುನಗರದ ವಾಸವಿ ವಿದ್ಯಾನಿಕೇತನದಲ್ಲಿ ಏರ್ಪಡಿಸಿರುವ ಶಿಬಿರದಲ್ಲಿ ನಾಟಕ, ರಂಗಾಟಗಳು, ಚಿತ್ರಕಲೆ, ಸಾಧಕರೊಂದಿಗೆ ಸಂವಾದ, ಪ್ರಕೃತಿ ವೀಕ್ಷಣೆ, ಕರಕುಶಲ ವಿನ್ಯಾಸ ಸೇರಿದಂತೆ ವಿವಿಧ ರೀತಿಯ ಕಲಾ ಪ್ರಕಾರಗಳ ತರಬೇತಿ ನೀಡಲಾಗುತ್ತದೆ. 4 ವರ್ಷದಿಂದ 14 ವರ್ಷದ ಮಕ್ಕಳು ಶಿಬಿರದಲ್ಲಿ ಪಾಲ್ಗೊಳ್ಳಲು ಅವಕಾಶವಿದ್ದು, ಹೆಚ್ಚಿನ ಮಾಹಿತಿಗಾಗಿ 9980794690 ಸಂಪರ್ಕಿಸಬಹುದು.

ದೇವಗಳ್ಳಿ ಹಾಲಿನ ಡೈರಿ ಆಡಳಿತ ಮಂಡಳಿಗೆ ಅಧ್ಯಕ್ಷರಾಗಿ ರಾಜಶೇಖರಮೂರ್ತಿ, ಉಪಾಧ್ಯಕ್ಷರಾಗಿ ಸಿ.ವೆಂಕಟೇಶ್ ಆಯ್ಕೆ

ಮೈಸೂರು, ಮಾ.15– ಮೈಸೂರು ತಾಲೂಕು ಜಯಪುರ ಹೋಬಳಿ ದೇವಗಳ್ಳಿ ಹಾಲಿನ ಡೇರಿ ಆಡಳಿತ ಮಂಡಳಿಗೆ ನೂತನ ಅಧ್ಯಕ್ಷ, ಉಪಾಧ್ಯಕ್ಷರಾಗಿ ಶಾಸಕ ಜಿ.ಟಿ.ದೇವೇಗೌಡರ ಬೆಂಬಲಿಗರು ಆಯ್ಕೆಯಾಗಿದ್ದಾರೆ. ಅಧ್ಯಕ್ಷರಾಗಿ ರಾಜಶೇಖರಮೂರ್ತಿ, ಉಪಾಧ್ಯಕ್ಷರಾಗಿ ಸಿ.ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾದರು.

ಇತ್ತೀಚೆಗೆ ದೇವಗಳ್ಳಿ ಹಾಲಿನ ಡೇರಿ ಆಡಳಿತ ಮಂಡಳಿಗೆ ಒಟ್ಟು 12 ನಿರ್ದೇಶಕ ಸ್ಥಾನಗಳ ಪೈಕಿ 10 ಸ್ಥಾನಗಳಿಗೆ ಚುನಾವಣೆ ನಡೆದಿತ್ತು ಸಿ.ವೆಂಕಟೇಶ್, ಸಂತೋಷ್ ಕುಮಾರ್, ಪ್ರಭು, ಮಹದೇವಸ್ವಾಮಿ,



ನೂತನ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ನಿರ್ದೇಶಕರನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಅಭಿನಂದಿಸಿದರು

ಡಿ.ವಿ.ಲಿಂಗರಾಜು, ಮರಿಚಯ್ಯ, ನಾಗರತ್ನ, ಗೌರಮ್ಮ, ರಾಜಶೇಖರ ಮೂರ್ತಿ, ಸಿದ್ದಯ್ಯ ಸೇರಿದಂತೆ ಹತ್ತು ಮಂದಿ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಚುನಾವಣಾಧಿಕಾರಿಯಾಗಿ ಜಿ.ಪ್ರೇಮಾ ಕಾರ್ಯನಿರ್ವಹಿಸಿದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ನಿರ್ದೇಶಕರರನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಅಭಿನಂದಿಸಿದರು. ಗೋಪಾಲಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಬಿ.ಕೆ. ಬಸವೇಗೌಡ, ಮುಖಂಡರಾದ ಮಹದೇವಸ್ವಾಮಿ, ಪುಟ್ಟಣ್ಣ, ಬಿ.ಮೂರ್ತಿ, ಡೇರಿ ಕಾರ್ಯದರ್ಶಿ ಶಿವಣ್ಣ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಶಾಸಕರಿಂದ ವಿಶೇಷಚೇತನರಿಗೆ ತ್ರಿಚಕ್ರ ವಾಹನ ವಿತರಣೆ



ಮೈಸೂರಿನ ಜಲದರ್ಶಿನಿ ಅತಿಥಿಗೃಹ ಆವರಣದ ತಮ್ಮ ಕಚೇರಿ ಮುಂಭಾಗ ನಗರಪಾಲಿಕೆಯ ಶೇ.5 ಅನುದಾನದಲ್ಲಿ 14 ಮಂದಿ ವಿಶೇಷಚೇತನರಿಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ತ್ರಿಚಕ್ರ ವಾಹನ ವಿತರಿಸಿದರು. ಈ ವೇಳೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಕಾರ್ಪೊರೇಟರ್ ಎಂ.ಡಿ.ನಾಗರಾಜ್ ಸೇರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

ಮಹಿಳಾ ನೌಕರರನ್ನು ಕೆಲಸದಿಂದ ತೆಗೆದಿದ್ದು, ಸಮಸ್ಯೆ ಬಗೆಹರಿಸಲು ಆಗ್ರಹ

ಮೈಸೂರು, ಮಾ.15(ಜಿಎ)–ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಚಾಮುಂಡಿ ಟೆಕ್ಸ್‌ಟೈಲ್ಸ್ ಘಟಕ ಸೀ.ಟೀ. ಸಿಲ್ಕ್‌ನಲ್ಲಿ ಕಳೆದ 16–17 ವರ್ಷಗಳಿಂದ ದುಡಿಯುತ್ತಿದ್ದ ಸುಮಾರು 16 ಮಂದಿ ಖಾಯಂ ಮಹಿಳಾ ಕಾರ್ಮಿಕರನ್ನು ಏಕಾಏಕಿ ಕೆಲಸದಿಂದ ತೆಗೆಯಲಾಗಿದೆ. ಹೀಗಾಗಿ ಕಾರ್ಮಿಕ ಇಲಾಖೆ ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕೆಂದು ಮೈಸೂರು ವಿಭಾಗೀಯ ಕೈಗಾರಿಕಾ ನೌಕರರ ಕೇಂದ್ರೀಯ ಯೂನಿಯನ್ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಖಜಾಂಚಿ ಲಲಿತಾ ಈ ವಿಷಯ ತಿಳಿಸಿ, ಫೆ.15 ರಂದು ಸಂಜೆ ಕಾರ್ಮಿಕರು ಕರ್ತವ್ಯ ಮುಗಿಸಿ ಮನೆಗೆ ತೆರಳಿದ ಬಳಿಕ ಏಕಾಏಕಿ ಎಲ್ಲಾ ಮಹಿಳಾ ಕಾರ್ಮಿಕರನ್ನು ತೆಗೆದು ಹಾಕಲಾಗಿದೆ. ಈ ರೀಟ್ರೆಂಚ್‌ಮೆಂಟ್ ಪ್ರಕ್ರಿಯೆ ನಡೆಸುವ ಮುನ್ನ ಯಾವುದೇ ನೋಟಿಸ್ ನೀಡಿಲ್ಲ. ಜೊತೆಗೆ, ಅಲ್ಲಿನ ಯಂತ್ರಗಳನ್ನು ಚಾಮಂಡಿ ಟೆಕ್ಸ್‌ಟೈಲ್ಸ್‌ಗೆ ಸಾಗಿಸುವ ಯತ್ನವೂ ನಡೆದಿದೆ. ಸೀ.ಟೀ. ಸಿಲ್ಕ್ ಕಂಪನಿಯು ಚಾಮುಂಡಿ ಟೆಕ್ಸ್‌ಟೈಲ್ಸ್ ಕಾರ್ಖಾನೆ ಘಟಕವೆಂದು ಆಡಳಿತ ವರ್ಗ ಹೇಳುತ್ತಿದ್ದರೂ ಈ ಕಂಪನಿಗೆ ಯಾವುದೇ ಆಡಳಿತ ಮಂಡಳಿ ಇಲ್ಲ. ಹೀಗಾಗಿ ಸರ್ಕಾರ ಮತ್ತು ವಿವಿಧ ಇಲಾಖೆಗಳು ಮಧ್ಯ ಪ್ರವೇಶಿಸಿ, ಸಂತ್ರಸ್ತ ಮಹಿಳಾ ಕಾರ್ಮಿಕರ ನೆರವಿಗೆ ಬರಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ವಿ.ಗೀತಾ, ಚಂದ್ರಮ್ಮ, ಎನ್.ಕೆ.ದೇವದಾಸ್ ಮತ್ತಿತರರು ಉಪಸ್ಥಿತರಿದ್ದರು.

ಆರೋಗ್ಯ ಸೇವೆಯಲ್ಲಿ ಮಾನವೀಯ ಗುಣ ಅತ್ಯಂತ ಮುಖ್ಯ

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್

ಮೈಸೂರು,ಮಾ.15(ಪಿಎಂ)– ದೇಹದ ರೋಗ ಗುಣಪಡಿಸುವ ಜೊತೆಗೆ ಭರವಸೆ ಮೂಡಿಸಿ, ದುಃಖ ನಿವಾರಿಸುವುದೇ ನೈಜ ಆರೋಗ್ಯ ಸೇವೆಯಾಗಿದೆ. ಹಾಗಾಗಿ ಈ ಕ್ಷೇತ್ರದ ವೃತ್ತಿಪರರು ಮಾನವೀಯ ಗುಣ ಹೊಂದುವುದು ಅತ್ಯಂತ ಮುಖ್ಯ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಹೇಳಿದರು.

ಮೈಸೂರಿನ ಮುಕ್ತ ಗಂಗೋತ್ರಿಯ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಸುಯೋಗ್ ಗ್ರೂಪ್ ಆಫ್ ಮೆಡಿಕಲ್ ಇನ್ಸಿಟಿಟ್ಯೂಷನ್ಸ್ (ಎಸ್‌ಜಿಓಎಂಐ) ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಸುಯೋಗ್ ನರ್ಸಿಂಗ್ ಕಾಲೇಜು ಮತ್ತು ಸುಯೋಗ್ ಇನ್ಸಿಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್‌ನ 2020–24ನೇ ಸಾಲಿನ ಬ್ಯಾಚ್‌ನ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಹಾಗೂ ಇದೇ ಕೋರ್ಸ್‌ಗಳ ಮೊದಲ ವರ್ಷದ ವಿದ್ಯಾರ್ಥಿಗಳ ಪ್ರತಿಜ್ಞಾ ವಿಧಿ ಸ್ವೀಕಾರ ಸಮಾರಂಭದಲ್ಲಿ (ಪದವಿ ಪ್ರದಾನ ಹಾಗೂ ದೀಪ ಬೆಳಗುವಿಕೆ ಸಮಾರಂಭ) ಮಾತನಾಡಿದರು.

ದೀಪ ಬೆಳಗಿಸುವ ಸಮಾರಂಭ ಕೇವಲ ಒಂದು ಸಂಪ್ರದಾಯವಲ್ಲ, ಬದಲಿಗೆ ಆರೋಗ್ಯ ರಕ್ಷಣೆಯ ಜಗತ್ತಿನಲ್ಲಿ ಆಳವಾದ ಅರ್ಥವನ್ನು ಹೊಂದಿರುವ ಸಂಕೇತ. ಕೈಯ್ಯಲ್ಲಿ ದೀಪ ಹಿಡಿದುಕೊಂಡು ರೋಗಿಗಳನ್ನು ಫ್ಲಾರೆನ್ಸ್ ನೈಟಿಂಗೇಲ್ ಅವರು ಉಪಚರಿಸುತ್ತಿದ್ದರು. ಅವರ ಪರಿಶ್ರಮ ಮತ್ತು ಕೊಡುಗೆಯು ಆಧುನಿಕ ನರ್ಸಿಂಗ್ ಸೇವೆಗೆ ಅಡಿಪಾಯ ಹಾಕಿತು. ಇಂದಿನ ಕಾರ್ಯಕ್ರಮದಲ್ಲಿ ದೀಪ ಬೆಳಗಿಸುವ ಮೂಲಕ ವಿದ್ಯಾರ್ಥಿಗಳು ಫ್ಲಾರೆನ್ಸ್ ನೈಟಿಂಗೇಲ್ ಅವರಿಗೆ ಗೌರವ ಸಲ್ಲಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆರೋಗ್ಯ ಸೇವೆಯ ಜಗತ್ತು ನಿರಂತರವಾಗಿ ಬೆಳವಣಿಗೆ ಹೊಂದುತ್ತಿದ್ದು, ಇದರೊಂದಿಗೆ ಸವಾಲುಗಳು ಎದುರಾಗುತ್ತಿವೆ. ನೀವು ಇಂದು ಪದವಿ ಸ್ವೀಕರಿಸುತ್ತಿದ್ದಂತೆ ನಿಮ್ಮ ಪ್ರಯಾಣದಲ್ಲಿ ಮತ್ತಷ್ಟು



ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಶನಿವಾರ ಸುಯೋಗ್ ನರ್ಸಿಂಗ್ ಕಾಲೇಜು ಬಿಎಸ್‌ಸಿ ನರ್ಸಿಂಗ್‌ನ 2020–24ನೇ ಸಾಲಿನ ಬ್ಯಾಚ್‌ನ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಜವಾಬ್ದಾರಿ ಹೆಚ್ಚಾಗಲಿದೆ. ಜೊತೆಗೆ ಪದವೀಧರರಾದ ನಿಮ್ಮ ಮೇಲೆ ಮತ್ತಷ್ಟು ಜವಾಬ್ದಾರಿ ಹೆಗಲೇರಲಿದೆ. ವೃತ್ತಿ ಜೀವನದ ಹೊಸ್ತಿಲಲ್ಲಿ ಇರುವ ನೀವು ಆರೋಗ್ಯ ಸೇವೆಯಲ್ಲಿ ಎಂದೂ ಜವಾಬ್ದಾರಿ ಮರೆಯಬಾರದು ಎಂದು ಕಿವಿಮಾತು ಹೇಳಿದರು.

ವ್ಯಕ್ತಿಗಳು ಹಾಗೂ ಸಮುದಾಯಗಳ ಜೀವನದ ಮೇಲೆ ನಿಮ್ಮ ಸೇವೆಯ ಸಕಾರಾತ್ಮಕ ಪರಿಣಮ ಇರುವಂತಾಗಬೇಕು. ಅವರ ಯೋಗಕ್ಷೇಮಕ್ಕೆ ಬದ್ಧರಾಗಿ ಸಹಾನುಭೂತಿಯಿಂದ ಸೇವೆ ಸಲ್ಲಿಸಬೇಕು. ಈ ನಿಟ್ಟಿನಲ್ಲಿ ನೈತಿಕ ವೃತ್ತಿಪರತೆ ಅಗತ್ಯ. ವೃತ್ತಿಪರ ಪ್ರಯಾಣದಲ್ಲಿ ಮೌಲ್ಯಗಳು ನೆನೆಪಿನಲ್ಲಿರಬೇಕು ಎಂದು ಸಲಹೆ ನೀಡಿದರು. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಸಮಾಜಕ್ಕೆ ನಿಮ್ಮ ಮಾನವೀಯ ಸ್ಪರ್ಶ ಅತ್ಯಂತ ಅಗತ್ಯ. ನಿಮ್ಮ ಸೇವೆಯಲ್ಲಿ ಭಾರತದ ಭವಿಷ್ಯ ಅಡಗಿದೆ. ಮಾನವೀಯ ಗುಣಗಳೊಂದಿಗೆ ವೃತ್ತಿ ಜೀವನ ಆರಂಭಿಸುವ ಮೂಲಕ ಸಂಸ್ಥೆ, ಪೋಷಕರು, ಗುರುಗಳಿಗೆ ಹೆಸರು ತರಬೇಕು ಎಂದು ನೂತನ ಪದವೀಧರರಿಗೆ ತಿಳಿ ಹೇಳಿದರು.

ಇದಕ್ಕೂ ಮುನ್ನ ಸುಯೋಗ್ ನರ್ಸಿಂಗ್ ಕಾಲೇಜಿನ ಬಿಎಸ್‌ಸಿ ನರ್ಸಿಂಗ್‌ನ 43 ವಿದ್ಯಾರ್ಥಿಗಳು ಹಾಗೂ ಸುಯೋಗ್ ಇನ್ಸಿಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸ್‌ನ ಬಿಎಸ್‌ಸಿಯ 19 ವಿದ್ಯಾರ್ಥಿಗಳಿಗೆ (2020–24ನೇ ಸಾಲಿನ ಬ್ಯಾಚ್‌ಗಳು) ಪದವಿ ಪ್ರದಾನ ಮಾಡಲಾಯಿತು. ಇದೇ ಕೋರ್ಸ್‌ಗಳ ಮೊದಲ ವರ್ಷದ ವಿದ್ಯಾರ್ಥಿಗಳು ದೀಪ ಬೆಳಗಿಸಿ ಪ್ರತಿಜ್ಞಾ ವಿಧಿ ಸ್ವೀಕಾರ ಮಾಡಿದರು.

2024ರ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪುರಸ್ಕೃತರೂ ಆದ ನಿಮ್ಹಾನ್ಸ್ ಆಸ್ಪತ್ರೆಯ ನರ್ಸಿಂಗ್ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ನಾಗರಾಜಯ್ಯ, ಬೆಂಗಳೂರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯೆ ಡಾ.ಡಿ. ಯಶೋಧ, ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ, ಸುಯೋಗ್ ಆಸ್ಪತ್ರೆ ಹಾಗೂ ಎಸ್‌ಜಿಓಎಂಐ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸುಯೋಗ್ ಆಸ್ಪತ್ರೆ ಟ್ರಸ್ಟಿ ಸುಧಾ ಯೋಗಣ್ಣ, ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ, ನಿರ್ದೇಶಕರಾದ ಡಾ.ಆರ್.ರಾಜೇಂದ್ರ ಪ್ರಸಾದ್, ಡಾ.ಸೀಮಾ ಯೋಗಣ್ಣ, ಸುಯೋಗ್ ನರ್ಸಿಂಗ್ ಪ್ರಾಂಶುಪಾಲೆ ಪ್ರೊ.ಟಿ. ನಾಗಮಣಿ ಮತ್ತಿತರರು ಹಾಜರಿದ್ದರು.

ಪೂರಿಗಾಲಿ ಹನಿ, ತುಂತುರು ನೀರಾವರಿ ಯೋಜನೆ ವ್ಯಾಪ್ತಿಯ ರೈತರೊಂದಿಗೆ ಸಭೆ

ಸಾಮೂಹಿಕ, ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಂಡರೆ ರೈತರಿಗೆ ಲಾಭ

ಮಳವಳ್ಳಿ, ಮಾ.15– ತಾಲೂಕಿನ ಪೂರಿಗಾಲಿ ವ್ಯಾಪ್ತಿಯಲ್ಲಿ ಈಗಾಗಲೇ ಹನಿ ಮತ್ತು ತುಂತುರು ನೀರಾವರಿ ಯೋಜನೆ ಪೂರ್ಣಗೊಂಡಿದ್ದು, ಇನ್ನಷ್ಟೇ ಈ ಭಾಗದ ರೈತರಿಗೆ ಅನುಷ್ಠಾನ ಮಾಡಿಕೊಡಬೇಕಾಗಿದೆ. ಈ ಯೋಜನೆಯ ಮೂಲಕ ರೈತರು ಸಾಮೂಹಿಕ ಮತ್ತು ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಲಾಭಗಳಿಸಬೇಕೆಂದು ಶಾಸಕ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಸಲಹೆ ನೀಡಿದರು.

ಕಾವೇರಿ ನೀರಾವರಿ ನಿಗಮ ನಿಯಮಿತದ ವತಿಯಿಂದ ತಾಲೂಕಿನ ದೊಡ್ಡಭೂಹಳ್ಳಿ ಗ್ರಾಮದಲ್ಲಿ ಶನಿವಾರ ನಡೆದ ಪೂರಿಗಾಲಿ ಹನಿ, ತುಂತುರು ನೀರಾವರಿ ಯೋಜನೆಯ ಫಲಾನುಭವಿಗಳ ಜೊತೆ ಯೋಜನೆಯ ಉದ್ದೇಶ ಮತ್ತು ಆಧುನಿಕ ಕೃಷಿ ಪದ್ಧತಿಯ ಬಗ್ಗೆ ಚರ್ಚಾ ಸಭೆಯಲ್ಲಿ ಮಾತನಾಡಿದ ಅವರು, ಈ ಯೋಜನೆಯಡಿ ಹೇಗೆ ನೀರು ಬಳಕೆ ಮಾಡಿಕೊಳ್ಳಬೇಕು? ಕೃಷಿ ಪದ್ಧತಿ ಹೇಗಿರಬೇಕು? ಎಂಬುದನ್ನು ತಿಳಿಸಲು ಕೃಷಿ, ತೋಟಗಾರಿಕೆ, ವಿವಿಯಿಂದ ವಿಷಯ ತಜ್ಞರನ್ನು ಕರೆಸಿ ಮನ ವರಿಕೆ ಮಾಡಲು ಸಭೆ ಹಮ್ಮಿಕೊಂಡಿದ್ದೇವೆ. ಇದರ ಸಂಪೂರ್ಣ ಲಾಭವನ್ನು ಮಳವಳ್ಳಿ ತಾಲೂಕಿನ ರೈತರು ಪಡೆದುಕೊಳ್ಳಬೇಕೆಂದು ತಿಳಿಸಿದರು.



> ಹನಿ ನೀರಾವರಿ ಯೋಜನೆ ನನ್ನ ಕನಸಿನ ಯೋಜನೆ. ದೊಡ್ಡಭೂಹಳ್ಳಿ ಭಾಗದಲ್ಲಿ ನೀರಿನ ಕೊರತೆ ಕಾಡುತ್ತಿತ್ತು. ಈ ಯೋಜನೆ ವಿರೋಧಿಗಳೂ ಇದ್ದಾರೆ, ದುಡ್ಡು ಹೊಡೆಯುವ ಯೋಜನೆ, ಕಮಿಷನ್ ಹೊಡೆಯುವ ಯೋಜನೆ ಅಂತ ಟೀಕಿಸುವವರೂ ಇದ್ದಾರೆ. ಅವರು ಸದಾ ಟೀಕಿಸುತ್ತಾ ಇರುತ್ತಾರೆ. ಈ ಭಾಗದಲ್ಲಿ ಕುಡಿಯುವ ನೀರಿಗೆ ತತ್ವಾರವಿತ್ತು, ರಸ್ತೆಗಳು ಹದಗೆಟ್ಟಿದ್ದವು. ಈಗ ಸಾಕಷ್ಟು ಬದಲಾವಣೆಗಳಾಗಿವೆ. ಈ ಯೋಜನೆ ಮಣ್ಣು ಪಾಲಾಗಬಾರದು ಅಂತ ರೈತರಿಗೆ ಮನವರಿಕೆ ಮಾಡಿಕೊಡಲು ಸಭೆ ಏರ್ಪಡಿಸಿದ್ದೇವೆ.

ಸಾಮೂಹಿಕ ಕೃಷಿ ಪದ್ಧತಿ, ಸಾವಯವ ಕೃಷಿ ಪದ್ಧತಿ, ಸಾಂಘಿಕ ಪ್ರಯತ್ನದ ಲಾಭ, ಏಕ ಬೆಳೆ ಪದ್ಧತಿಯ ಅನುಕೂಲ ಏನು ಎಂಬುದನ್ನು ತಜ್ಞರು ರೈತರಿಗೆ ಇಂತಹ ಸಭೆಯ ಮೂಲಕ ತಿಳಿಸಿಕೊಡುತ್ತಾರೆ. ತಜ್ಞರ ಸಲಹೆ ಪಡೆದುಕೊಂಡು ಉತ್ತಮ ರೀತಿಯಲ್ಲಿ ರೈತರು ಬೆಳೆ ಬೆಳದು ಲಾಭ ಪಡೆದುಕೊಳ್ಳಬೇಕು. ಇದರ ಉದ್ದೇಶ ಸದುಪಯೋಗವಾಗುವ ನಿಟ್ಟಿನಲ್ಲಿ ಸಾವಿರ ಎಕರೆಗೆ ಒಂದು ಸಂಘ ಮಾಡಲಾಗಿದೆ. ಈ ಯೋಜನೆ ಸದ್ಬಳಕೆ ಮಾಡಿಕೊಂಡರೆ, ನಿಮ್ಮ ಬದುಕು ಬಂಗಾರವಾಗಲಿದೆ. ನಿಮ್ಮ ಕುಟುಂಬದ ಗಂಡು ಮಕ್ಕಳಿಗೆ ಹೆಣ್ಣು ಕೊಡಲು ಮುಂದೆ ಬರುತ್ತಾರೆ. ಆರ್ಥಿಕವಾಗಿ ಸದೃಢರಾಗಲು ಈ ಯೋಜನೆಯನ್ನು ಅಳವಡಿಸಿಕೊಳ್ಳಿ ಎಂದು ಕರೆ ನೀಡಿದರು.

ಹಾವೇರಿ ಜಿಲ್ಲೆಯ ಶಿಗ್ಗಾವಿ, ರಾಮತಾಳ ಯೋಜನೆ ವಿಫಲವಾಗಿವೆ. ಕಾರಣ ಅಲ್ಲಿ 6 ತಿಂಗಳು ಮಾತ್ರ ನೀರು ಪೂರೈಕೆಯಾಗುತ್ತಿತ್ತು. ಇಲ್ಲಿ 10 ತಿಂಗಳ ನೀರು ಹರಿಯುವುದರಿಂದ ಯೋಜನೆ ಫಲಪ್ರದವಾಗುತ್ತದೆ. ಏಕ ಬೆಳೆಯಿಂದ, ಸಾಮೂಹಿಕ ಕೃಷಿ ಪದ್ಧತಿ ಅಳವಡಿಸಿಕೊಂಡರೆ, ಮಾರುಕಟ್ಟೆಯ ಲಾಭ ಸಿಗಲಿದೆ. ಬೇಡಿಕೆ ನೋಡಿಕೊಂಡು ಬೆಳೆ ಬೆಳೆಯಬಹುದು. ಉತ್ತಮ ದರ ಸಿಕ್ಕಿದಾಗ ಮಾರಾಟ ಮಾಡುವ ನಿರ್ಣಯವೂ ನಿಮ್ಮದೇ. ಬರಡು ನೆಲದಲ್ಲಿ ಹಸಿರು ಚಿಗುರಲಿ, ರೈತರ ಅಭಿವೃದ್ಧಿಯಾಗಲಿ ಎಂಬುದು ನನ್ನ ಕಾಳಜಿಯಾಗಿದೆ ಎಂದರು.

ರಾಜಕೀಯ ಚಿತಾವಣೆಗೆ ಇಲ್ಲಿನ ಜನ ಬಲಿಯಾಗದೇ ಭವಿಷ್ಯದ ಬಗ್ಗೆ ಚಿಂತಿಸಿ. ಮೆಕ್ಕೆಜೋಳ ಬೆಳೆಯಲು ನೀವು ನಿರ್ಧರಿಸಿ, ಈ ಬಗ್ಗೆ ನೀವು ಒಪ್ಪಂದ ಮಾಡಿಕೊಂಡರೆ ಆರ್ಥಿಕವಾಗಿ ಮುಂದೆ ಬರಬಹುದು. ಅಪಪ್ರಚಾರಕ್ಕೆ ಅವಕಾಶ ಕೊಡದೇ ಯೋಜನೆ ಯಶಸ್ಸಿಗೆ ಮುಂದಾಗಿ ಎಂದು ಕರೆ ನೀಡಿದರು.

ವೇದಿಕೆಯಲ್ಲಿ ವಿ.ಸಿ.ಫಾರಂನ ಕೃಷಿ ವಿಜ್ಞಾನಿ ಡಾ.ಮಹಾದೇವು, ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಡಾ.ಅಶೋಕ್, ಕೃಷಿ ತಜ್ಞ ಶ್ರೀಪಾದ್ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

ಮಡುವಿನಕೋಡಿ ಶ್ರೀಆಂಜನೇಯ ಸ್ವಾಮಿಯವರ ಅದ್ದೂರಿ ಬ್ರಹ್ಮ ರಥೋತ್ಸವ




ಗ್ರಾಮ ದೇವತೆ ಶ್ರೀ ಆಂಜನೇಯ ಸ್ವಾಮಿಯವರ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಕೆ.ಆರ್.ಪೇಟೆ,ಮಾ.15– ತಾಲೂಕಿನ ಮಡುವಿನಕೊಡಿ ಗ್ರಾಮದ ಗ್ರಾಮ ದೇವತೆ ಶ್ರೀ ಆಂಜನೇಯ ಸ್ವಾಮಿಯವರ ಬ್ರಹ್ಮ ರಥೋತ್ಸವವು ವಿಜೃಂಭಣೆಯಿಂದ ಶುಕ್ರವಾರ ನಡೆಯಿತು.

ರಥದಲ್ಲಿ ವಿರಾಜಮಾನವಾಗಿದ್ದ ಶ್ರೀಆಂಜನೇಯ ಸ್ವಾಮಿ ಉತ್ಸವ ಮೂರ್ತಿಗೆ ಗ್ರಾಮದ ಮುಖಂಡರು ಸಾಂಪ್ರದಾಯಿಕ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ನಾಡಿನ ನಾನಾ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತಾದಿಗಳು ಉಘೇ.. ಆಂಜನೇಯ, ಉಘೇ.. ಹನುಮಂತ, ಉಘೇ ರಾಮನ ಬಂಟ.. ಆಂಜನೇಯ, ಉಘೇ.. ಮಾರುತಿ.. ಉಘೇ ಉಘೇ.. ಎಂಬಿತ್ಯಾದಿ ಜಯ ಘೋಷಗಳನ್ನು ಮೊಳಗಿಸುತ್ತಾ ರಥವನ್ನು ಎಳೆದು ತಮ್ಮ ಭಕ್ತಿ–ಭಾವ ಪ್ರದರ್ಶಿಸಿದರು. ರಥೋತ್ಸವವು ಮಧ್ಯಾಹ್ನ 130ಗಂಟೆಗೆ ಜಾತ್ರಾ ಮಾಳದಿಂದ ಆರಂಭಿಸಿ ರಾಜಬೀದಿಯಲ್ಲಿ ಸಾಗಿ ಬಸವೇಶ್ವರ ದೇವಾಲಯದವರೆಗೆ ಸಾಗಿತು. ಸಂಜೆ 5.30ಗಂಟೆಗೆ ಮತ್ತೆ ಪ್ರಮುಖ ಬೀದಿಯಲ್ಲಿ ಸಾಗಿ ಸ್ವಸ್ಥಾನವನ್ನು ನಿರ್ವಿಘ್ನವಾಗಿ ತಲುಪಿತು. ಭಕ್ತಾದಿಗಳು ರಥದ ಕಳಸಕ್ಕೆ ಹಣ್ಣು–ದವನ ಅರ್ಪಿಸಿ ಕೃತಾರ್ಥರಾದರು.

ನಾಳೆ ಪು.ತಿ.ನ ಜನ್ಮದಿನೋತ್ಸವ



ಮಂಡ್ಯ, ಮಾ.15– ಡಾ.ಪು.ತಿ.ನರಸಿಂಹಚಾರ್ ಟ್ರಸ್ಟ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 120 ನೇ ಪು.ತಿ.ನ ಜನ್ಮದಿನೋತ್ಸವವನ್ನು ಮಾರ್ಚ್ 17 ರಂದು ಬೆಳಗ್ಗೆ 10.30 ಗಂಟೆಗೆ ಪಾಂಡವಪುರ ತಾಲೂಕಿನ ಮೇಲುಕೋಟೆಯ ಎಸ್.ಇ.ಟಿ ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ

ತಾಲೂಕುಗಳ ಆಗಮನ–ನಿರ್ಗಮನ ಮಾರ್ಗ ಮುಚ್ಚಿಲ್ಲ

ಶಾಸಕ ದಿನೇಶ್ ಗೂಳಿಗೌಡ ಪ್ರಶ್ನೆಗೆ ಸಚಿವ ಸತೀಶ್ ಜಾರಕಿಹೊಳಿ ಉತ್ತರ



ಸತೀಶ್ ಜಾರಕಿಹೊಳಿ



ದಿನೇಶ್ ಗೂಳೀಗೌಡ

ಮಂಡ್ಯ,ಮಾ.15– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇಗೆ ಸಂಬಂಧಪಟ್ಟಂತೆ ಬಿಡದಿ, ಮಂಡ್ಯ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲೂಕಿನ ವಿವಿಧೆಡೆ ನೀಡಲಾಗಿದ್ದ ಪ್ರವೇಶ ಹಾಗೂ ನಿರ್ಗಮನ ಮಾರ್ಗಗಳನ್ನು ಮುಚ್ಚಲಾಗಿಲ್ಲ ಎಂದು ಪಿಡಬ್ಲ್ಯೂಡಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ಎಮ್‌ಎಲ್‌ಸಿ ದಿನೇಶ್ ಗೂಳಿಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಸಚಿವರು, ಅಪಘಾತಗಳ ಹಿನ್ನೆಲೆಯಲ್ಲಿ ತೂಬಿನ ಕೆರೆ ಬಳಿ ಟೋಲ್ ಬೈಪಾಸ್ ಮಾಡುವ ಸ್ಥಳದಲ್ಲಿ ಟ್ರಕ್‌ಗಳನ್ನು ನಿರ್ಬಂಧಿಸಲಾಗಿದೆ ಎಂದು ಹೇಳಿದ್ದಾರೆ.

ಬಿಡದಿ, ಮಂಡ್ಯ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲೂಕಿನ ಕೇಂದ್ರಗಳಲ್ಲಿ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇಗೆ ಸಂಬಂಧಿಸಿದ ಆಗಮನ–ನಿರ್ಗಮನ ಪ್ರವೇಶದ್ವಾರಗಳನ್ನು ಯಾವುದೇ ಮುನ್ಸೂಚನೆ ಇಲ್ಲದೆ ಮುಚ್ಚಿರುವುದು ಸಾರ್ವಜನಿಕರಿಗೆ ತೊಂದರೆಯನ್ನುಂಟು ಮಾಡುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ದಿನೇಶ್ ಗೂಳಿಗೌಡ ಪ್ರಶ್ನೆ ಮಾಡಿದ್ದರು.

ಇದಕ್ಕೆ ಉತ್ತರಿಸಿದ ಸಚಿವರು, ಎನ್‌ಎಚ್ –275ರ ಬೆಂಗಳೂರು–ಮೈಸೂರು ವಿಭಾಗದ ತೂಬಿನಕೆರೆ ಬಳಿ ಬೆಂಗಳೂರಿನಿಂದ ಮೈಸೂರು ಕಡೆಗೆ ಸಂಚರಿಸುತ್ತಿರುವ ಭಾರಿ ವಾಹನಗಳು ಟೋಲ್ ಪ್ಲಾಜಾವನ್ನು ಬೈಪಾಸ್ ಮಾಡುವ ಸರ್ವೀಸ್ ರಸ್ತೆಯಲ್ಲಿ ನಿರ್ಗಮಿಸುತ್ತಿದ್ದವು. ಇಲ್ಲಿ ಪಕ್ಕದ ಹಳ್ಳಿಗರು, ಸ್ಥಳೀಯ ಸಂಚಾರ ಮತ್ತು ದ್ವಿಚಕ್ರ ವಾಹನಗಳು ಸಂಚರಿಸುತ್ತಿದ್ದರಿಂದ ವಾಹನಗಳ ದಟ್ಟಣೆಯಿಂದ ಸರ್ವೀಸ್ ರಸ್ತೆಯಲ್ಲಿ ಅಪಘಾತಗಳಾಗುತ್ತಿದ್ದವು. ಹೀಗಾಗಿ ಇಲ್ಲಿನ ಸೇವಾ ರಸ್ತೆಯಲ್ಲಿ ಸಂಚರಿಸುವ ಭಾರಿ ವಾಹನಗಳನ್ನು ನಿಲ್ಲಿಸುವಂತೆ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದರಿಂದ ರಸ್ತೆ ಸುರಕ್ಷತಾ ಸಮಸ್ಯೆಗಳ ಹಿತದೃಷ್ಟಿಯನ್ನು ಪರಿಗಣಿಸಿ ಬೆಂಗಳೂರಿನಿಂದ ಮೈಸೂರು ಕಡೆಗೆ ಪ್ರಯಾಣಿಸುವ ಭಾರಿ ವಾಹನಗಳ (ಟ್ರಕ್ ಇತ್ಯಾದಿ) ನಿರ್ಗಮನಕ್ಕೆ ತೂಬಿನ ಕೆರೆ ಟೋಲ್ ಬೈಪಾಸ್ ಮಾಡುವ ಸ್ಥಳದಲ್ಲಿ ನಿರ್ಬಂಧಿಸಲಾಗಿದೆ. ಆದರೆ, ಇತರೆ ಎಲ್ಲ ವಾಹನಗಳು (ಕಾರುಗಳು, ಜೀಪುಗಳು ಇತ್ಯಾದಿ) ಪಾಂಡವಪುರ ಒಳಗೊಂಡಂತೆ ಪಕ್ಕದ ಹಳ್ಳಿಗಳನ್ನು ತಲುಪಲು ಸೇವಾ ರಸ್ತೆಗೆ ಪ್ರವೇಶಿಸಲು ಮತ್ತು ನಿರ್ಗಮಿಸಲು ಅನುಮತಿ ನೀಡಲಾಗಿರುತ್ತದೆ. ಸರ್ವೀಸ್ ರಸ್ತೆಯನ್ನು ಸಂಪೂರ್ಣವಾಗಿ ಮುಚ್ಚಿರುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ನೀಡಿರುತ್ತಾರೆ ಎಂಬುದಾಗಿ ಸಚಿವರು ಹೇಳಿದ್ದಾರೆ.

ಇನ್ನು ಎಕ್ಸ್‌ಪ್ರೆಸ್‌ವೇನಲ್ಲಿ ಎರಡೂ ಬದಿಯ ಕಾಮಗಾರಿಗೆ ಸಂಬಂಧಿಸಿದಂತೆ ಯೋಜನಾ ಒಪ್ಪಂದದ ಪ್ರಕಾರ ಬೆಂಗಳೂರಿನಿಂದ ಮೈಸೂರು ಎನ್‌ಎಚ್ –275 ರವರೆಗೆ ಸರ್ವೀಸ್ ರಸ್ತೆಯನ್ನು ಪೂರ್ಣಗೊಳಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ಬೆಂಗಳೂರಿನಿಂದ ಮೈಸೂರಿಗೆ ಹೋಗಬೇಕಾದಲ್ಲಿ ವಂಡರ್‌ಲಾ, ಬಿಡದಿ ಬಳಿ ನಿರ್ಗಮನಕ್ಕೆ ದಾರಿ ಇದ್ದರೆ, ಬಿಡದಿಯಲ್ಲಿ ಆಗಮನಕ್ಕೂ ಅವಕಾಶವಿದೆ. ರಾಮನಗರದಲ್ಲಿ ಒಂದು ಕಡೆ, ಚನ್ನಪಟ್ಟಣ, ಮದ್ದೂರು, ಮಂಡ್ಯದಲ್ಲಿ ತಲಾ ಎರಡು ಕಡೆ ಆಗಮನ –ನಿರ್ಗಮನಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಇನ್ನು ತೂಬಿನಕೆರೆ ಇಂಡಸ್ಟ್ರಿಯಲ್ ಪ್ರದೇಶದಲ್ಲಿ ಆಗಮನಕ್ಕೆ ಅವಕಾಶವಿದ್ದರೆ, ಭಾರೀ ವಾಹನಗಳಿಗೆ ನಿರ್ಗಮಕ್ಕೆ ಅನುಮತಿಯನ್ನು ನೀಡಲಾಗಿಲ್ಲ. ಶ್ರೀರಂಗಪಟ್ಟಣದ ಎರಡು ಕಡೆ ಆಗಮನ–ನಿರ್ಗಮನಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಶ್ರೀರಂಗಪಟ್ಟಣ, ತೂಬಿನಕೆರೆ ಇಂಡಸ್ಟ್ರಿಯಲ್ ಏರಿಯಾ, ಮಂಡ್ಯ, ಮದ್ದೂರು, ಚನ್ನಪಟ್ಟಣ, ಬಿಡದಿಗಳಲ್ಲಿ ತಲಾ ಎರಡು ಕಡೆ ಆಗಮನ –ನಿರ್ಗಮನಕ್ಕೆ ಅವಕಾಶವಿದ್ದರೆ, ರಾಮನಗರದಲ್ಲಿ ಒಂದು ಕಡೆ ಅವಕಾಶವನ್ನು ಕಲ್ಪಿಸಲಾಗಿದೆ

ವೇ ಬ್ರಿಡ್ಜ್ ಬಳಿ ವಿಸಿ ನಾಲಿಗೆ ಕಾರು ಪಲ್ಟಿ



ಭಾರತೀನಗರ,ಮಾ.15– ಹನುಮಂತನಗರದ ವೇಬ್ರಿಡ್ಜ್ ಬಳಿ ವಿಸಿ ನಾಲೆಗೆ ಕಾರೊಂದು ಪಲ್ಟಿಯಾಗಿರುವ ಘಟನೆ ಜರುಗಿದೆ.

ಹನುಮಂತನಗರ ಹಾಗೂ ವೇಬ್ರಿಡ್ಜ್ ನಡುವೆ ಮಂಡ್ಯ, ಭಾರತಿನಗರ ಮುಖ್ಯ ಹೆದ್ದಾರಿಯ ಪಕ್ಕದಲ್ಲಿ ವಿ.ಸಿ ನಾಲೆ ಹಾದು ಹೋಗಿದ್ದು, ನಾಲೆಗೆ ಯಾವುದೇ ತಡೆಗೋಡೆ ಇಲ್ಲದಿರುವುದರಿಂದ ಆಗಿಂದಾಗೆ ಅಪಘಾತಗಳು ನಡೆಯುತ್ತಿವೆ. ಮಂಡ್ಯದಿಂದ ಭಾರತೀನಗರ ಕಡೆಗೆ ಆಗಮಿಸುತ್ತಿದ್ದ ರೆನಾಲ್ಟ್ ಕಂಪನಿಯ ಕಾರು ಒಂದು ನಾಲೆಗೆ ಉರುಳಿ ಬಿದ್ದಿದೆ. ಈ ಕಾರು ಯಾರದು ಈ ಕಾರಿನಲ್ಲಿ ಯಾರ್‍ಯಾರು ಚಲಿಸುತ್ತಿದ್ದರು ಎಂಬ ಮಾಹಿತಿ ಇದುವರೆಗೂ ಲಭ್ಯವಾಗಿಲ್ಲ.

ಹಾಗಾಗಿ ಈ ಬಗ್ಗೆ ಕೆ.ಎಂ.ದೊಡ್ಡಿ ಠಾಣೆಯಲ್ಲಿ ಯಾವುದೇ ಪ್ರಕರಣ ದಾಖಲಾಗಿಲ್ಲ, ಈ ರಸ್ತೆಯು ಮಾರ್ಗ ತಿರುವು ಇರುವುದರಿಂದ ಇಲ್ಲಿ ಯಾವುದೇ ತಡಗೋಡೆ ಇಲ್ಲದಿರುವುದರಿಂದ ಆಗಾಗ ಇಲ್ಲಿ ಅಪಘಾತಗಳು ಸಂಭವಿಸುತ್ತದೆ ಈ ಹಿಂದೆಯೂ ಸಹ ಇಲ್ಲಿ ವಿಸಿ ನಾಲಿಗೆ ವಾಹನಗಳು ಬಿದ್ದು ಸಾವು ನೋವುಗಳು ಸಂಭವಿಸಿವೆ. ಆದ್ದು ಶೀಘ್ರವಾಗಿ ವಿಸಿ ನಾಲೆಯ ಪಕ್ಕದಲ್ಲಿ ತಡೆಗೋಡೆಯನ್ನು ನಿರ್ಮಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಸತೀಶ್ ಹಾಗೂ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಒಂದನೇ ಪುಟದಿಂದ

ನಾನವಳಲ್ಲ...ನಾನವಳಲ್ಲ...

ಹೇಗೆ ನನ್ನ ಬಳಿ ಇರಲು ಸಾಧ್ಯ. ಮೂರು ದಿನಗಳ ಕಾಲ ಅಧಿಕಾರಿಗಳ ವಶದಲ್ಲಿದ್ದಾಗ, ನನಗೆ ಭಾರಿ ಕಿರುಕುಳ ಮತ್ತು ಹಿಂಸೆ ನೀಡಿ, ಬಲವಂತವಾಗಿ ಹೇಳಿಕೆಗಳು ಹಾಗೂ ಸುಮಾರು 40 ಬಿಳಿ ಕಾಗದಗಳ ಮೇಲೆ ಸಹಿ ಹಾಕಿಸಿಕೊಂಡಿದ್ದು, ಅದಕ್ಕೂ ನನಗೂ ಸಂಬಂಧ ಇಲ್ಲ. ಅಧಿಕಾರಿಗಳು ವ್ಯವಸ್ಥಿತವಾಗಿ ನನ್ನ ವಿರುದ್ಧ ಪಿತೂರಿ ನಡೆಸಿರುವ ಸಂಶಯ ಬರುತ್ತಿದೆ. ಇವರುಗಳು ನನ್ನನ್ನು ಏತಕ್ಕೆ ಗುರಿ ಮಾಡಿಕೊಂಡಿದ್ದಾರೆ ಎಂಬುದು ತಿಳಿದಿಲ್ಲ. ವಿಚಾರಣೆ ಹೆಸರಿನಲ್ಲಿ ನನಗೆ ಚಿತ್ರಹಿಂಸೆ ನೀಡಿದ್ದು, ಮೂರು–ನಾಲ್ಕು ದಿನ ಸರಿಯಾಗಿ ಆಹಾರ ನೀಡದೆ, ನಿದ್ರೆಯನ್ನೂ ಮಾಡಲು ಬಿಡದೆ ಹಿಂಸೆ ನೀಡಿದ್ದಾರೆ. ಕೆಳಹಂತದ ಅಧಿಕಾರಿಗಳ ವರ್ತನೆ ಮತ್ತು ನಡತೆ ಬಗ್ಗೆ ನೀವೇ ತನಿಖೆ ನಡೆಸಿ, ನನ್ನನ್ನು ಬಂಧಮುಕ್ತಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ. ನಾಲ್ಕು ಪುಟಗಳ ಪತ್ರದಲ್ಲಿ ಎಲ್ಲಿಯೂ ತಮ್ಮ ಸಾಕುತಂದೆ ಡಿಜಿಪಿ ರಾಮಚಂದ್ರ ರಾವ್ ಹೆಸರನ್ನು ರನ್ಯಾ ರಾವ್ ಪ್ರಸ್ತಾಪಿಸಿಲ್ಲ.

ಪೊಲೀಸ್ ಪ್ರೋಟೋಕಾಲ್ ಅಧಿಕಾರಿ ಬಳಕೆ

ಚಾನಲ್‌ವರೆಗೂ ಬರುವುದು ಅಸಾಧ್ಯವಾಗಿತ್ತು ಎಂದು ವಾದ ಮಾಡಲಾಗಿದೆ.

ಅಂತರರಾಷ್ಟ್ರೀಯ ಸಂಪರ್ಕಗಳನ್ನು ಪರಿಶೀಲಿಸಲು ಹೆಚ್ಚಿನ ತನಿಖೆಯ ಅಗತ್ಯ ಇದೆ ಮತ್ತು ಕಸ್ಟಡಿಯಲ್ಲಿ ತನಿಖೆಯ ಸಮಯದಲ್ಲಿ ರನ್ಯಾ ಸಹಕರಿಸಲಿಲ್ಲ ಎಂದು ಡಿಆರ್‌ಐ ಹೇಳಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಆರ್‌ಐ ಅಧಿಕಾರಿಗಳು ಹಿರಿಯ ಪೊಲೀಸ್ ಅಧಿಕಾರಿಗೆ ಸಮನ್ಸ್ ನೀಡಿದ್ದಾರೆ. ಏರ್‌ಪೋರ್ಟ್‌ನಲ್ಲಿ ನೇಮಕ ಆಗಿದ್ದ ನಾಲ್ವರು ಪ್ರೋಟೋಕಾಲ್ ಅಧಿಕಾರಿಗಳನ್ನು ಸಹ ವಿಚಾರಣೆ ಮಾಡಲಾಗಿದೆ. ರನ್ಯಾ ರಾವ್ ಬರುವಾಗ ಸೆಕ್ಯುರಿಟಿ ಕ್ಲಿಯರೆನ್ಸ್ ಮಾಡಲು ಹೇಳಿದ್ದರು. ಗ್ರೀನ್ ಚಾನೆಲ್ ಮೂಲಕ ಹೊರತರಲು ಸೂಚನೆ ನೀಡಿದ್ದರು. ಹಿರಿಯ ಅಧಿಕಾರಿ ಸೂಚನೆಯಂತೆ ನಾವು ನಮ್ಮ ಕೆಲಸ ಮಾಡಿದ್ದೇವೆ ಎಂದಿದ್ದಾರೆ. ಇದರಿಂದ ಪ್ರಾಥಮಿಕ ತನಿಖೆಯಲ್ಲಿ ಇಬ್ಬರು ಅಧಿಕಾರಿಗಳು ಕರ್ತವ್ಯ ಲೋಪ ಮಾಡಿರುವುದು ಬೆಳಕಿಗೆ ಬಂದಿದೆ ಎಂದು ಡಿಆರ್‌ಐ ತಿಳಿಸಿದೆ.

ಸಾಮಾನ್ಯವಾಗಿ ಹಿರಿಯ ಪೊಲೀಸ್ ಅಧಿಕಾರಿಗಳ ಸಂಬಂಧಿಗಳು ಬರುವಾಗ ಪ್ರೊಟೋಕಾಲ್‌ಗೆ ಕರೆ ಮಾಡುತ್ತಾರೆ. ಹೀಗೆ ಪದೇ ಪದೆ ಪ್ರೊಟೋಕಾಲ್‌ಗೆ ಕರೆ ಮಾಡಿರುವ ಪೊಲೀಸ್ ಅಧಿಕಾರಿಗಳ ಲಿಸ್ಟ್ ಮಾಡಲಾಗಿದೆ. ಗೋಲ್ಡ್ ಸ್ಮಗ್ಲಿಂಗ್ ಮಾಡಿರುವ ರನ್ಯಾ ರಾವ್‌ಗೆ ಪ್ರೋಟೋಕಾಲ್ ನೀಡಲು ಕೇವಲ ಒಬ್ಬ ಪೊಲೀಸ್ ಅಧಿಕಾರಿ ಮಾತ್ರ ಕರೆ ಮಾಡಿಲ್ಲ. 3–4 ಜನ ಅಧಿಕಾರಿಗಳು ರನ್ಯಾಗೆ ಪ್ರೋಟೋಕಾಲ್ ವ್ಯವಸ್ಥೆ ಮಾಡಿದ್ದಾರೆ ಎನ್ನಲಾಗಿದೆ.

ಶೋಧನಾ ಸಮಿತಿ ರಚನೆ

ಗಂಭೀರವಾಗಿ ಚರ್ಚಿಸಿದ್ದು, ಕೆಪಿಎಸ್‌ಸಿ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಕ್ಕೆ ವ್ಯಾಪಕ ಹುಡುಕಾಟ ಸಮಿತಿ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಜತೆಗೆ ಪ್ರಸ್ತುತ ಸಿ ಹಾಗೂ ಬಿ ಗ್ರೂಪ್‌ನ ಹುದ್ದೆಗಳ ನೇಮಕಾತಿ ವೇಳೆ ಸಂದರ್ಶನವನ್ನು ತೆಗೆದು ಹಾಕಲಾಗಿದೆ. ಹೀಗಾಗಿ 15 ಮಂದಿ ಕೆಪಿಎಸ್‌ಸಿ ಸದಸ್ಯರ ಸಂಖ್ಯೆ ಅಗತ್ಯವಿಲ್ಲ. ಸದಸ್ಯರ ಸಂಖ್ಯೆ ಹೆಚ್ಚಿದ್ದಷ್ಟೂ ಆಯೋಗದ ಮಹತ್ವ ಹಾಗೂ ಗೌಪ್ಯ ವಿಚಾರಗಳನ್ನು ಕಾಯ್ದುಕೊಳ್ಳಲು ಸಾಧ್ಯವಾಗುವುದಿಲ್ಲ.

ಇದು ನೇಮಕಾತಿ ಅಕ್ರಮಗಳಿಗೆ ಅವಕಾಶ ನೀಡಬಹುದು ಎಂಬ ಕಾರಣ ನೀಡಿ ಕೆಪಿಎಸ್‌ಸಿ ಸದಸ್ಯರ ಸಂಖ್ಯೆ ಕಡಿಮೆ ಮಾಡುವ ಕುರಿತು ಪರಿಶೀಲಿಸಿ ನಿರ್ಧರಿಸಲು ರಾಜ್ಯಪಾಲರ ಅನುಮೋದನೆ ಪಡೆಯಲು ಸಚಿವ ಸಂಪುಟ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ. ಇನ್ನು ಕೆಪಿಎಸ್‌ಸಿಯಲ್ಲಿ ಸ್ವಜನಪಕ್ಷಪಾತಕ್ಕೆ ಬ್ರೇಕ್ ಹಾಕಲು ಈವರೆಗೆ ಆಯೋಗಕ್ಕೆ ಸಂಬಂಧಿಸಿದ ಯಾವುದೇ ತೀರ್ಮಾನದ ಪ್ರಶ್ನೆ ಬಂದರೂ ಅಧ್ಯಕ್ಷರು ಸಭೆ ನಡೆಸಿ ತೀರ್ಮಾನಿಸಬಹುದಿತ್ತು. ಈ ನಿಯಮ ಬದಲಿಸಿ ಆಯೋಗದ ಸಭೆಗೆ ಅಧ್ಯಕ್ಷರನ್ನು ಸೇರಿಸಿ ಒಟ್ಟು ಸದಸ್ಯರ ಶೇ.50ರಷ್ಟು ಕೋರಂ ಅಗತ್ಯ ಎಂದು ಮಾಡಲಾಗಿದೆ. ಇನ್ನು ಸಭೆಯಲ್ಲಿ ಎಲ್ಲಾ ತೀರ್ಮಾನ ಹಾಗೂ ನಡಾವಳಿಗಳನ್ನು ಕಾರ್ಯದರ್ಶಿಗಳೇ ಖುದ್ದಾಗಿ ದಾಖಲಿಸಬೇಕು ಎಂದು ಸ್ಪಷ್ಟಪಡಿಸಲಾಗಿದೆ.

ಮೊಮ್ಮಕ್ಕಳೊಂದಿಗೆ ತಾತ ಜಲಸಮಾಧಿ

ಯತೀಂದ್ರ ಸಿದ್ದರಾಮಯ್ಯ ಪಟ್ಟಣಕ್ಕೆ ಭೇಟಿ ನೀಡುವ ಸಮಯದಲ್ಲಿ ಮೃತ ಕುಟುಂಬದವರಿಗೆ ಪರಿಹಾರದ ಚೆಕ್ ನೀಡಲಾಗುತ್ತದೆ ಎಂದು ತಿಳಿಸಿದರು. ಸ್ಥಳದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಸಹಾಯಕ ಸಿ.ಟಿ.ಕುಮಾರ್ ಹಾಜರಿದ್ದರು. ಘಟನೆ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸಿಪಿಐ ಧನಂಜಯ್ ಮಾರ್ಗದರ್ಶನದಲ್ಲಿ ಎಎಸ್‌ಐ ಶಿವಕುಮಾರ್ ಪ್ರಕರಣ ದಾಖಲಿಸಿದ್ದಾರೆ. ಪಿಎಸ್‌ಐ ಜಗದೀಶ್ ದೂಳ್ ಶೆಟ್ಟಿ, ಎಎಸ್‌ಐ ಪಚ್ಚೇಗೌಡ ಮುಖ್ಯಪೇದೆ ಪ್ರಭಾಕರ್ ಸ್ಥಳಕ್ಕೆ ಭೇಟಿ ನೀಡಿದ್ದರು.

ಪ್ರವಾಸಿಗರ ಸುರಕ್ಷತೆಗೆ 'ಟೂರಿಸ್ಟ್ ಮಿತ್ರ' ಯೋಜನೆ ಜಾರಿ

- ಕರ್ನಾಟಕ ಪ್ರವಾಸೋದ್ಯಮ ನೀತಿ ದೇಶಕ್ಕೆ ಮಾದರಿ
- ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕ ಹೆಚ್.ಪಿ.ಜನಾರ್ದನ್ ಅಭಿಮತ



'ಕರ್ನಾಟಕ ಪ್ರವಾಸೋದ್ಯಮ ನೀತಿ 2024–29' ಕುರಿತು ಉಪನ್ಯಾಸದಲ್ಲಿ ಇಲಾಖೆ ಜಂಟಿ ನಿರ್ದೇಶಕ ಹೆಚ್.ಪಿ.ಜನಾರ್ದನ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಮಾ.15(ಎಂಕೆ)– ಕರ್ನಾಟಕ ಸರ್ಕಾರ ಟೂರಿಸ್ಟ್ ಮಿತ್ರ ಯೋಜನೆ ಜಾರಿಗೆ ತಂದಿದ್ದು, ಈ ವರ್ಷದ ಬಜೆಟ್‌ನಲ್ಲಿ ಹೊಸದಾಗಿ ಒಂದು ಸಾವಿರ ಟೂರಿಸ್ಟ್ ಮಿತ್ರರನ್ನು ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿದೆ ಎಂದು ರಾಜ್ಯ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕ ಹೆಚ್.ಪಿ.ಜನಾರ್ದನ್ ಹೇಳಿದರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಮೈಸೂರು ಹೋಟೆಲ್ ಮಾಲೀಕರ ಸಂಘದ ಕಚೇರಿ ಸಭಾಂಗಣದಲ್ಲಿ ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ವಿಭಾಗದ ವತಿಯಿಂದ ಆಯೋಜಿಸಿದ್ದ 'ಕರ್ನಾಟಕ ಪ್ರವಾಸೋದ್ಯಮ ನೀತಿ 2024–29' ಕುರಿತ ಉಪನ್ಯಾಸದಲ್ಲಿ ಮಾತನಾಡಿದ ಅವರು, ಟೂರಿಸ್ಟ್ ಮಿತ್ರ ಯೋಜನೆ ಜಾರಿಗೆ ತಂದ ಮೊದಲ ರಾಜ್ಯ ಎಂಬ ಹೆಗ್ಗಳಿಕೆ ಕರ್ನಾಟಕದ್ದಾಗಿದೆ. ಈ ಮೂಲಕ ಪ್ರವಾಸಿಗರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುವ ಸಹಾಯವಾಣಿ ಸ್ಥಾಪನೆ ಮಾಡಲಾಗುವುದು ಎಂದು ತಿಳಿಸಿದರು.

ಪ್ರವಾಸೋದ್ಯಮ ವಲಯದ ಪಾಲುದಾರರಾದ ಹೋಟೆಲ್, ಟೂರ್ ಅಂಡ್ ಟ್ರಾವೆಲ್ಸ್ ಇನ್ನಿತರೆ ಸೆಕ್ಟರ್‌ಗಳು ತಮ್ಮಲ್ಲಿರುವ ಮಾಹಿತಿಯನ್ನು ಇಲಾಖೆಯ ಕೇಂದ್ರ ಕಚೇರಿಗೆ ನೀಡಿದರೆ, ಅದೆಲ್ಲಾ ಮಾಹಿತಿಯನ್ನು ಡಿಜಿಟಲ್ ಗ್ರೀಡ್‌ಗಳನ್ನು ಸ್ಥಾಪಿಸಿ, ಪ್ರವಾಸಿಗರಿಗೆ ನೀಡಲು ಅನುಕೂಲವಾಗುತ್ತದೆ. ಸರ್ಕಾರಿ ಹಾಗೂ ಖಾಸಗಿ ವ್ಯಾಸಿಯಂಗಳ ಮಾಹಿತಿ, ಟಾಂಗಾ, ದೊರೆಯುವ ಹೋಟೆಲ್ ಹಾಗೂ ಇನ್ನಿತರೆ ಸೌಲಭ್ಯಗಳ ನೀಡಿದರೆ ಪ್ರವಸಿಗರಿಗೆ ಅನುಕೂಲವಾಗಲಿದೆ. ಹಾಗೆಯೇ 7800 ಕೋಟಿ ರೂ. ಬಂಡವಾಳ ಹೂಡಿಕೆಯನ್ನು ಪ್ರವಾಸೋದ್ಯಮ ವಲಯಕ್ಕೆ ತರಬೇಕು ಎನ್ನುವ ಗುರಿ ಇಟ್ಟುಕೊಂಡಿದ್ದೇವೆ. ನಮ್ಮ ಸ್ಮಾರಕ ಪರಿಕಲ್ಪನೆಯಲ್ಲಿ ಸಾವಿರಕ್ಕೂ ಹೆಚ್ಚು ಸ್ಮಾರಕಗಳನ್ನು ದತ್ತು ಪಡೆದು ಸಂರಕ್ಷಣೆ ಮಾಡಲು ಸರ್ಕಾರ ಮುಂದಾಗಿದ್ದು, ಉದ್ದಿಮೆದಾರರು ಸಹ ದತ್ತು ಪಡೆದುಕೊಳ್ಳುವ ಮೂಲಕ ಸಹಕರಿಸಬೇಕು ಎಂದು ಮನವಿ ಮಾಡಿದರು.

ಸೆಕ್ಟರ್‌ಗಳು ಅಟ್ಯಾಕಿಂಗ್ ಆಗಿಲ್ಲ: ದೇಶದಲ್ಲಿಯೇ ಅತಿಥಿಗಳನ್ನು ಪ್ರೀತಿಯಿಂದ ಸ್ವಾಗತಿಸುವ ರಾಜ್ಯ ಕರ್ನಾಟಕವಾಗಿದ್ದು, ರಾಜ್ಯದ ಪ್ರವಾಸೋದ್ಯಮ ನೀತಿಯನ್ನು ಇತರೆ ರಾಜ್ಯಗಳು ಕೂಡ ಅಳವಡಿಸಿಕೊಂಡಿವೆ. ಪ್ರತೀ ಐದು ವರ್ಷಗಳಿಗೊಮ್ಮೆ ಆಗುವ ಪಾಲಿಸಿ ನವೀಕರಣದಲ್ಲಿ ಭಾರತ ಸರ್ಕಾರವೂ ಕೂಡ ರಾಜ್ಯದ ಪ್ರವಾಸೋದ್ಯಮ ನೀತಿಯ ಅಂಶಗಳನ್ನು ಸೇರಿಸಿಕೊಂಡಿದೆ. 1992ನೇ ಇಸವಿಯಿಂದಲೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನೀತಿಯನ್ನು ಹೊಂದಿದೆ. ಆದರೆ, ನಮ್ಮಲ್ಲಿರುವ ಸೆಕ್ಟರ್‌ಗಳು ಅಟ್ಯಾಕಿಂಗ್ ಆಗಿಲ್ಲ. ಪ್ರವಾಸೋದ್ಯಮ ಪಾಲುದಾರರು ಅಧಿಕಾರಿಗಳಿಗೆ ಉತ್ತೇಜನ ನೀಡದಿದ್ದರೆ ಒಳ್ಳೆಯ ನೀತಿಯನ್ನು ಜಾರಿಗೆ ತಂದರೂ ಸಹ ಅನುಷ್ಠಾನಗೊಳಿಸಲು ಸಾಧ್ಯವಾಗುವುದಿಲ್ಲ ಎಂದು ಎಚ್ಚರಿಸಿದರು.

1,350 ಕೋಟಿ ರೂ. ಸಹಾಯ ಧನ: ರಾಜ್ಯ ಸರ್ಕಾರ ಐದು ವರ್ಷದಲ್ಲಿ ಪ್ರವಾಸೋದ್ಯಮ ವಲಯಕ್ಕೆ 1,350 ಕೋಟಿ ರೂ. ಸಹಾಯ ಧನವನ್ನು ಮತ್ತು ರಿಯಾಯಿತಿಯನ್ನು ನೀಡಿದೆ. ಇದನ್ನು ವಲಯದವರು ಹಾಗೂ ಸೆಕ್ಟರ್‌ನವರು ಸದುಪಯೋಗ ಪಡೆದುಕೊಳ್ಳಲಿಲ್ಲವಾದರೆ ವಲಯಕ್ಕೆ ನಷ್ಟವಾಗುತ್ತದೆಯೇ ಹೊರತು ಸರ್ಕಾರಕಲ್ಲ. ಹಾಗಾಗಿ ವಲಯದವರು ಗಟ್ಟಿಯಾಗಿ ತಮ್ಮ ಬೇಡಿಕೆಗಳನ್ನು ಕೇಳಿ ಪಡೆದುಕೊಳ್ಳಬೇಕು. ನಾವು ಬೇರೆ ಬೇರೆ ದೇಶಗಳಿಗೆ ಭೇಟಿ ಕೊಟ್ಟಾಗಲೆಲ್ಲಾ ಮೈಸೂರನ್ನು ಪ್ರಮೋಟ್ ಮಾಡುತ್ತೇವೆ. ಏಕೆಂದರೆ ಮೈಸೂರಿಗೆ ಅಷ್ಟು ಮಹತ್ವವಿದೆ. ಕರ್ನಾಟಕ ಎಂದರೆ ಮೈಸೂರಿನಿಂದಲೇ ಹೇಳಬೇಕಾಗುತ್ತದೆ. ಮೈಸೂರು ದಸರಾ, ಅರಮನೆ, ಚಾಮುಂಡಿ ಬೆಟ್ಟ ಆಕರ್ಷಣೆಗಳಾಗಿವೆ ಎಂದರು.

ಪ್ರವಾಸೋದ್ಯಮ ಅಭಿವೃದ್ಧಿಗೆ ಮಾರ್ಕೆಂಟಿಂಗ್ ಮತ್ತು ಪ್ರಮೋಷನ್ ಮುಖ್ಯವಾಗಿದ್ದು, ರಾಜ್ಯ ಪ್ರವಾಸೋದ್ಯಮದ ಕುರಿತು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡಲಾಗುತ್ತಿದೆ. ರೋಡ್ ಶೋ, ಟ್ರಾವೆಲ್ ಮೀಟಿಂಗ್‌ಗಳನ್ನು ನಡೆಸಲಾಗುತ್ತಿದೆ. ಪ್ರತೀ ವರ್ಷವೂ ಇಲಾಖೆಯ ಬಜೆಟ್ ಕೂಡ ಜಾಸ್ತಿಯಾಗುತ್ತಿದೆ. ಆದರೆ, ನಮ್ಮಲ್ಲಿ ಕೌಶಲ್ಯ ಅಭಿವೃದ್ಧಿಗೆ ತರಬೇತಿಗಳನ್ನು ಕೊಡಬೇಕು. ನಮ್ಮರಲ್ಲಿನ ಸೋಮಾರಿತನದಿಂದ ಬೇರೆ ಬೇರೆ ರಾಜ್ಯದವರು ಇಲ್ಲಿನ ಹೋಟೆಲ್‌ಗಳಲ್ಲಿ ಕೆಲಸ ಮಾಡುವಂತಾಗಿದೆ. ಇದೆಲ್ಲವನ್ನೂ ಹೊಗಲಾಡಿಸಬೇಕು ಎಂದು ತಿಳಿಹೇಳಿ ದರು. ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಬಿ.ಎಸ್.ಪ್ರಶಾಂತ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಸ್ವಾಮಿ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸ್ಕಾಲ್ ಇಂಟರ್ ನ್ಯಾಷನಲ್ ಮೈಸೂರು ಅಧ್ಯಕ್ಷ ಜಯಕುಮಾರ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮೈಸೂರು ಗೈಡ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಜೆ.ಅಶೋಕ್ ಮತ್ತಿತರರಿದ್ದರು.

ವಿದೇಶಿ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದೆ...

"ಕೋವಿಡ್ ನಂತರ ಮೈಸೂರು ಸೇರಿದಂತೆ ರಾಜ್ಯಕ್ಕೆ ಬರುವ ವಿದೇಶಿ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದೆ. ಇದಕ್ಕೆ ಕಾರಣವೇನು ಎಂಬುದರ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕಿದೆ. ಇಲ್ಲದಿದ್ದರೆ ಪ್ರವಾಸೋದ್ಯಮ ವಲಯಕ್ಕೆ ಬಹಳ ಸಮಸ್ಯೆಯಾಗುವ ಸಾಧ್ಯತೆಗಳಿವೆ. ಈ ವರ್ಷ ಕೊಪ್ಪಳಕ್ಕೆ ಸುಮಾರು 50 ಸಾವಿರ ವಿದೇಶಿ ಪ್ರವಾಸಿಗರು ಬಂದಿದ್ದು, ಇಷ್ಟು ಜನ ಹಂಪಿಗೂ ಬಂದಿಲ್ಲ. ಆದರೆ, ಸ್ಥಳಿಯ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುವುದು ಒಳ್ಳೆಯ ಬೆಳವಣಿಗೆ. ವಿದೇಶಿ ಪ್ರವಾಸಿಗರು ಬಂದರೆ 15–20 ದಿನವಾದರೂ ರಾಜ್ಯದೆಲ್ಲೆಡೆ ಪ್ರವಾಸ ಮಾಡುತ್ತಾರೆ. ಹಾಗೆಯೇ ಸ್ಥಳೀಯ ಪ್ರವಾಸಿಗರು ವಾರದ ಎಲ್ಲಾ ದಿನಗಳು ಪ್ರವಾಸಿ ತಾಣಗಳಿಗೆ ಬರುವಂತೆ ಮಾಡಲು ಹೊಸ ಹೊಸ ಆಫರ್‌ಗಳನ್ನು ನೀಡಬೇಕು.

–ಹೆಚ್.ಪಿ.ಜನಾರ್ದನ್, ಜಂಟಿ ನಿರ್ದೇಶಕ, ರಾಜ್ಯ ಪ್ರವಾಸೋದ್ಯಮ ಇಲಾಖೆ

ಮಧ್ಯಾಹ್ನ 12ರಿಂದ 3ರವರೆಗೆ ಮನೆಯಿಂದ ಹೊರ ಬರಬೇಡಿ!

- ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಲಹೆ
- ವರ್ಕ್ ಫ್ರಮ್ ಹೋಮ್ ಆಯ್ಕೆ ಉತ್ತಮ
- ಸರ್ಕಾರಿ ಅಧಿಕಾರಿಗಳು ಕ್ಷೇತ್ರ ವೀಕ್ಷಣೆಯನ್ನು ಬೆಳಗಿನ ಜಾವ ಇಲ್ಲವೇ ಸಂಜೆ ಕೈಗೊಳ್ಳಬೇಕು

ರಾಯಚೂರು, ಮಾ.15– ಕರ್ನಾಟಕದಲ್ಲಿ ಪ್ರಸಕ್ತ ವರ್ಷ ಬಿಸಿಲಿನ ಅರ್ಭಟ ಜೋರಾಗಲಿದ್ದು, ಮಧ್ಯಾಹ್ನ 12ರಿಂದ 3ಗಂಟೆವರೆಗೆ ಯಾರೂ ಮನೆಯಿಂದ ಹೊರಗೆ ಬರಬಾರದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ರಾಜ್ಯದ ಜನರಲ್ಲಿ ಮನವಿ ಮಾಡಿದ್ದಾರೆ.

ರಾಯಚೂರಿನ ಮಾನ್ವಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಬೇಸಿಗೆಯ ತಾಪಮಾನವನ್ನು ಎದುರಿಸಲು ರಾಜ್ಯದ ಜನ ಮತ್ತು ಆರೋಗ್ಯ ಇಲಾಖೆ ಸಜ್ಜಾಗಬೇಕಿದೆ ಎಂದು ಸೂಚ್ಯವಾಗಿ ಹೇಳಿದರು. ರಾಜ್ಯದಲ್ಲಿ ಅದರಲ್ಲೂ ಉತ್ತರ ಮತ್ತು ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಿಸಿಲಿನ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಜನ ಈ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ದೇಹವನ್ನು ತಂಪಾಗಿಟ್ಟುಕೊಳ್ಳುವ ಪ್ರಕ್ರಿಯೆಗಳನ್ನು ಆರಂಭಿಸಬೇಕು. ಬಿಸಿಲು ಸಮಯದಲ್ಲಿ ಮನೆಯಿಂದ ಹೊರ ಹೋಗದಿರುವುದನ್ನು ರೂಢಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಬಿಸಿಲಿನ ಪ್ರಕೋಪದಿಂದ ತಪ್ಪಿಸಿಕೊಳ್ಳಲು, ಮಧ್ಯಾಹ್ನ 12ರಿಂದ 3ರವರೆಗೆ ಮನೆಯಿಂದ ಹೊರ ಹೋಗುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ತಪ್ಪಿಸಿ. ವರ್ಕ್ ಫ್ರಮ್ ಹೋಮ್ ಆಯ್ಕೆ ಉತ್ತಮ. 3 ಗಂಟೆಗಳ ಕಾಲ ಮನೆಯಲ್ಲೇ ಇರುವುದರಿಂದ ಬಿಸಿಲಿನ ಕಾರಣಕ್ಕೆ ಎದುರಾಗುವ ಆರೋಗ್ಯಕರ ಸಮಸ್ಯೆಗಳಿಂದ ದೂರ ಇರಬಹುದು ಎಂದು ದಿನೇಶ್ ಗುಂಡೂರಾವ್ ಸೂಚಿಸಿದರು.



ಬಿಸಿಲು ಹೆಚ್ಚಾಗುತ್ತಿರುವುದರಿಂದ ಸರ್ಕಾರಿ ಕಚೇರಿಗಳ ಕೆಲಸದ ಸಮಯ ಬದಲಾವಣೆಯ ಬಗ್ಗೆ ಸರ್ಕಾರ ಮಟ್ಟದಲ್ಲಿ ತೀರ್ಮಾನವಾಗಬೇಕಿದೆ. ಆದರೆ, ಸರ್ಕಾರಿ ಅಧಿಕಾರಿಗಳು ಫೀಲ್ಡ್ ವಿಸಿಟ್, ಕ್ಷೇತ್ರ ವೀಕ್ಷಣೆ ಮುಂತಾದ ದೈನಂದಿನ ಜವಾಬ್ದಾರಿಗಳನ್ನು ಬೆಳಗಿನ ಜಾವ ಅಥವಾ ಸಾಯಂಕಾಲದ ಸಮಯದಲ್ಲಿ ಕೈಗೊಳ್ಳಬೇಕು. ಸರ್ಕಾರ ಸಮಯ ಬದಲಾವಣೆ ತೀರ್ಮಾನ ಮಾಡಿದರೆ ಅದನ್ನು ನಾನು ಸ್ವಾಗತಿಸುತ್ತೇನೆ ಎಂದು ದಿನೇಶ್ ಗುಂಡೂರಾವ್ ಇದೇ ವೇಳೆ ನುಡಿದರು.

ಇನ್ನು ಬಿಸಿಲಿನ ಪ್ರಕೋಪ ಹೆಚ್ಚಿರುವ ಜಿಲ್ಲೆಗಳಲ್ಲಿ ಸರ್ಕಾರಿ ಕಚೇರಿಗಳಿಗೆ ರಜಾ ಘೋಷಣೆ ಮಾಡಲಾಗುವುದೇ ಎಂಬ ಪ್ರಶ್ನೆಗೆ ಉತ್ತರಿಸಿದ ದಿನೇಶ್ ಗುಂಡೂರಾವ್, ಈ ರೀತಿ ರಜೆ ಘೋಷಣೆ ಮಾಡಲು ಸಾಧ್ಯವಿಲ್ಲವಾದರೂ, ಕನಿಷ್ಟ ಸಮಯ ಬದಲಾವಣೆ ಮಾಡುವ ಮೂಲಕ ನೆರವು ಒದಗಿಸಬಹುದು ಎಂದು ಅಭಿಪ್ರಾಯಪಟ್ಟರು.

ಬಿಸಿಲಿನ ತಾಪಮಾನ ಹೆಚ್ಚಳ ಹಿನ್ನೆಲೆಯಲ್ಲಿ, ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಪೆಷಲ್ ವಾರ್ಡ್ ಅಗತ್ಯ ಇಲ್ಲ ಎಂದು ಸ್ಪಷ್ಟಪಡಿಸಿರುವ ದಿನೇಶ್ ಗುಂಡೂರಾವ್, ನಮ್ಮಲ್ಲಿ ಎಲ್ಲಾ ಅಗತ್ಯ ಸೌಲಭ್ಯಗಳಿವೆ ಎಂದು ಭರವಸೆ ನೀಡಿದ್ದಾರೆ.

ಅರ್ಬನ್ ಹಾತ್‌ನಲ್ಲಿ ಕರಕುಶಲ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ, ಮಾರಾಟ ಮೇಳಕ್ಕೆ ಚಾಲನೆ



ಗಾಂಧಿ ಶಿಲ್ಪ ಬಜಾರ್‌ನಲ್ಲಿ ಮೈಸೂರು ಜಿಪಂ ಸಿಇಓ ಎಸ್.ಉಕೇಶ್‌ಕುಮಾರ್, ಮೈಸೂರು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಎಡಿಸಿ ಡಾ.ಪಿ.ಶಿವರಾಜು ಭಾಗವಹಿಸಿ ಕರಕುಶಲ ಕರ್ಮಿಗಳ ಉತ್ಪನ್ನಗಳನ್ನು ವೀಕ್ಷಿಸಿ, ಪ್ರೋತ್ಸಾಹಿಸಿದರು.

ಮೈಸೂರು, ಮಾ.15(ಎಸ್‌ಪಿಎನ್)– ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಮಾ.14ರಿಂದ ಮಾ.23ರವರೆಗೆ ಕರಕುಶಲ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಮೇಳದ ಗಾಂಧಿ ಶಿಲ್ಪ ಬಜಾರ್‌ಗೆ ಮೈಸೂರು ಜಿಪಂ ಸಿಇಓ ಎಸ್.ಉಕೇಶ್ ಕುಮಾರ್ ಚಾಲನೆ ನೀಡಿದರು.

ಮೈಸೂರು ರಿಂಗ್‌ರೋಡ್‌ನಲ್ಲಿರುವ ಹೆಬ್ಬಾಳ ಕೈಗಾರಿಕಾ ಪ್ರದೇಶದ ಜೆಎಸ್‌ಎಸ್ ಅರ್ಬನ್ ಹಾತ್ ಅಮಣದಲ್ಲಿ ಜೆಎಸ್‌ಎಸ್ ಮಹವಿದ್ಯಾಪೀಠ, ಕೇಂದ್ರ ಸರ್ಕಾರದ ಜವಳಿ ಸಚಿವಾಲಯ ಅಭಿವೃದ್ಧಿ ಆಯುಕ್ತರು ಹಾಗೂ ತ್ರಿಪುರ ಕೈಮಗ್ಗ, ಕರಕುಶಲ ಮತ್ತು ರೇಷ್ಮೆ ನಿರ್ದೇಶನಾಲಯ ಸಹಯೋಗದೊಂದಿಗೆ 10 ದಿನಗಳ ಗಾಂಧಿ ಶಿಲ್ಪ ಮಾರಾಟ ಮೇಳಕ್ಕೆ ಚಾಲನೆ ನೀಡಿ, ಮಾತನಾಡಿದರು.

ಈ ಮೇಳದಲ್ಲಿ ದೇಶದ 22ಕ್ಕೂ ಹೆಚ್ಚು ರಾಜ್ಯಗಳ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪಡೆದ ಕರ ಕುಶಲಕರ್ಮಿಗಳು, ಕೈ ಮಗ್ಗ ನೇಕಾರರ ಕೈಮಗ್ಗ ಮತ್ತು ಕರಕುಶಲ ಉತ್ಪನ್ನಗಳನ್ನು ಒಂದೇ ಸೂರಿನಡಿ ಲಭ್ಯವಿದೆ. ಮೈಸೂರಿನ ಜನತೆ, ದೇಶಿಯ ಜವಳಿ ಉತ್ಪನ್ನಗಳನ್ನು ಖರೀದಿಗಳು ದೇಶಿಯ ಕರಕುಶಲಕರ್ಮಿಗಳಿಗೆ ಪ್ರೋತ್ಸಾಹ ನೀಡುವಂತೆ ಮನವಿ ಮಾಡಿದರು.

ಮರದ ಕೆತ್ತನೆ, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇರ್ಪ, ರತ್ನಗಂಬಳಿ, ಹತ್ತಿ ಜಮಕಾನ, ಇಮಿಟೇಶನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬಾಟಿಕ್, ಕಲಾಂಕಾರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು,ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ಮಧ್ಯಪ್ರದೇಶ ರಾಜ್ಯದ ಮಹೇಶ್ವರಿ, ಚಂದೇರಿ ಸೀರೆಗಳು, ಒಡಿಶಾ ರಾಜ್ಯದ ಪಟ್ಟ ಚಿತ್ರ ಬೆಳ್ಳಿಯ ಸೂಕ್ಷ್ಮ ವಿನ್ಯಾಸ ವಸ್ತುಗಳು, ಬಿದಿರು–ಬೆತ್ತದ ವಸ್ತುಗಳು, ಕಲಾತ್ಮಕ ಕಲ್ಲಿನ ವಸ್ತುಗಳು, ಪಂಜಾಬ್‌ನ ಬಟ್ಟೆಗಳು ಖರೀದಿಗೆ ಸಿಗಲಿದೆ ಎಂದರು.

ಮೈಸೂರು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಕೈಮಗ್ಗ ಕರಕುಶಲ ಮತ್ತು ರೇಷ್ಮೆ ನಿರ್ದೇಶನಾಲಯದ ನಿರ್ದೇಶಕ ಆರ್.ಅರುಣ್‌ಕುಮಾರ್, ಜವಳಿ ಮಂತ್ರಾಲಯದ ಅಭಿವೃದ್ಧಿ ಆಯುಕ್ತರ ಕಚೇರಿ ಪ್ರಾಂತೀಯ ನಿರ್ದೇಶಕ ಲಕ್ಷ್ಮಣ್ ರಾವ್ ಆತುಕುರಿ, ಸಹಾಯಕ ನಿರ್ದೇಶಕ ಸುನಿಲ್‌ಕುಮಾರ್, ಎಚ್‌ಬಿಓ ಸ್ವದೇಶ್ ಘಾರ, ಅರ್ಬನ್ ಹಾತ್ ಸಂಯೋಜನಾಧಿಕಾರಿ ಎಂ.ಶಿವನಂಜಸ್ವಾಮಿ, ರಾಕೇಶ್ ರೈ ಇನ್ನಿತರರು ಉಪಸ್ಥಿತರಿದ್ದರು.

ಮೋಸ ಮಾಡುವವರು ಚಾಣಾಕ್ಷರು; ಗ್ರಾಹಕರು ಎಚ್ಚರಿಕೆಯಿಂದ ಇರಬೇಕು

ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ನವೀನಕುಮಾರಿ ಸಲಹೆ



ಮೈಸೂರಿನ ಬಾಸುದೇವ ಸೋಮಾನಿ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ವಿಶ್ವ ಗ್ರಾಹಕರ ದಿನಾಚರಣೆಯನ್ನು ಆಹಾರ ಇಲಾಖೆ ಜಂಟಿ ನಿರ್ದೇಶಕಿ ಕುಮುದ ಶರತ್ ಉದ್ಘಾಟಿಸಿದರು.

ಮೈಸೂರು, ಮಾ.15(ಬಿಎಲ್‌ಯು)– ಮೋಸ ಮಾಡುವವರು ಚಾಣಾಕ್ಷರಿರುವ ಕಾರಣ ಗ್ರಾಹಕರು ಎಚ್ಚರಿಕೆಯಿಂದ ಇರಬೇಕು ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ನವೀನ ಕುಮಾರಿ ಇಂದಿಲ್ಲಿ ಸಲಹೆ ನೀಡಿದ್ದಾರೆ.

ನಗರದ ಬಾಸುದೇವ ಸೋಮಾನಿ ಕಾಲೇಜಿನಲ್ಲಿ ಆಯೋಜಿಸಿದ್ದ ವಿಶ್ವ ಗ್ರಾಹಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದುರಾಸೆ ಅನೇಕ ಮೋಸಗಳಿಗೆ ಕಾರಣವಾಗುವ ಹಿನ್ನೆಲೆಯಲ್ಲಿ ಗ್ರಾಹಕರು ಎಚ್ಚರಿಕೆಯಿಂದ ಇರಬೇಕು ಎಂದು ಹೇಳಿದರು.

ಪ್ರತಿಯೊಬ್ಬರು ತಾವು ಖರೀದಿಸುವ ವಸ್ತು ಹಾಗೂ ಸೇವೆಗಳು ಗುಣಮಟ್ಟದಿಂದ ಇದೆಯೊ ಅಥವಾ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಇದರಲ್ಲಿ ವ್ಯತ್ಯಯ ಉಂಟಾದರೆ ಕಾನೂನು ನೆರವು ಪಡೆದು ನ್ಯಾಯ ದೊರಕಿಸಿಕೊಳ್ಳಬೇಕು ಎಂದರು.

ಗ್ರಾಹಕರಿಗೆ ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿದ್ದರೆ ಮಾರುಕಟ್ಟೆಯಲ್ಲಿ ವಸ್ತುಗಳ ಖರೀದಿ, ಕಲಬೆರಕೆ, ಸೇವೆಗಳ ನ್ಯೂನತೆಗಳ ಬಗ್ಗೆ ಎಚ್ಚರಿಕೆ ವಹಿಸಲು ಸಾಧ್ಯ ಎಂದು ನವೀನಕುಮಾರಿ ಅಭಿಪ್ರಾಯಪಟ್ಟರು

ಇದೇ ವೇಳೆ ಮಾತನಾಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್ ಬಿ.ಜಿ., ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯ ಮಾರುತಿ ಹೆಚ್. ವಡ್ಡರ್, ಆಹಾರ ಇಲಾಖೆಯ ಜಂಟಿ ನಿರ್ದೇಶಕಿ ಕುಮುದ ಶರತ್, ಸಹಾಯಕ ನಿರ್ದೇಶಕ ಪ್ರತೀಕ್ ಜಿ.ಹೆಗ್ಡೆ, ವ್ಯವಸ್ಥಾಪಕ ಬಿ.ಸಿ. ಮೋಹನ್, ಸೌಭಾಗ್ಯವತಿ, ಬಾಸುದೇವ ಸೋಮಾನಿ ಕಾಲೇಜಿನ ಅಧ್ಯಕ್ಷ ಡಾ.ಎಂ.ಪುಟ್ಟಸ್ವಾಮಿ, ಕಾಲೇಜಿನ ಪ್ರಿನ್ಸಿಪಾಲ್ ಡಾ.ಎಂ.ಮಹದೇವಸ್ವಾಮಿ, ಡಾ.ಬಿ.ರಮೇಶ್, ದಯಾನಂದ ಸಾಗರ್ ಇನ್ನಿತರರು ಉಪಸ್ಥಿತರಿದ್ದರು.

ಸಮಾನತೆಗಾಗಿ ಸಂದೇಶ ಸಾರುವ ಸೈಕ್ಲಿಂಗ್

ಮೈಸೂರಿನಲ್ಲಿ ಶ್ರೀನಿವಾಸ್‌ಗೆ ಗ್ಲೋಬಲ್ ವರ್ಲ್ಡ್ ರೆಕಾರ್ಡ್ ಸರ್ಟಿಫಿಕೇಟ್



ಕೋಲಾರದಿಂದ ಮೈಸೂರುವರೆಗೆ ಸೈಕ್ಲಿಂಗ್ ಮಾಡಿ ಗ್ಲೋಬಲ್ ವರ್ಲ್ಡ್ ರೆಕಾರ್ಡ್ ಸರ್ಟಿಫಿಕೇಟ್ ಪಡೆದ ಬೀರಮಾನಹಳ್ಳಿಯ ಶ್ರೀನಿವಾಸ್ ಅವರನ್ನು ದಲಿತಪರ ಸಂಘಟನೆಯವರು ಅಭಿನಂದಿಸಿದರು.

ಮೈಸೂರು, ಮಾ.15(ಬಿಎಲ್‌ಯು)– ಕೋಲಾರದ ಬೀರಮಾನಹಳ್ಳಿಯ ಕ್ರೀಡಾಪಟು ಶ್ರೀನಿವಾಸ್ ಸಮಾನತೆಗಾಗಿ ಸಂದೇಶ ಧ್ಯೇಯವಾಕ್ಯದೊಂದಿಗೆ ಕೋಲಾರದಿಂದ ಮೈಸೂರಿನವರೆಗೆ ಸೈಕ್ಲಿಂಗ್ ಮಾಡಿ ಗ್ಲೋಬಲ್ ವರ್ಲ್ಡ್ ರೆಕಾರ್ಡ್ ಸರ್ಟಿಫಿಕೇಟ್ ಪಡೆದಿದ್ದಾರೆ.

'ಪ್ರಜಾಪ್ರಭುತ್ವ ಉಳಿಸಿ, ಸಂವಿಧಾನ ರಕ್ಷಿಸಿ' ಸಂದೇಶದೊಂದಿಗೆ ಶ್ರೀನಿವಾಸ್ ಈಗಾಗಲೇ ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ 10,500 ಕಿಲೋಮೀಟರ್‌ವರೆಗೆ ಸೈಕ್ಲಿಂಗ್ ಮಾಡಿದ್ದಾರೆ. ಗ್ಲೋಬಲ್ ವರ್ಲ್ಡ್ ರೆಕಾರ್ಡ್‌ಗಾಗಿ ಶ್ರೀನಿವಾಸ್ ಅವರು ನಿನ್ನೆ ಕೋಲಾರದಿಂದ ಹೊರಟು ಮೈಸೂರು ತನಕ 254 ಕಿಲೋಮೀಟರ್ ಸೈಕ್ಲಿಂಗ್ ಮಾಡಿದ್ದರು. ಗ್ಲೋಬಲ್ ವರ್ಲ್ಡ್ ರೆಕಾರ್ಡ್‌ನ ಪ್ರತಿನಿಧಿ ಪೂಜಾ ಅವರು ಕಾರಿನಲ್ಲಿ ಸೈಕ್ಲಿಂಗ್‌ನಲ್ಲಿ ಸಾಗುತ್ತಿದ್ದ ಶ್ರೀನಿವಾಸ್ ಅವರನ್ನು ಹಿಂಬಾಲಿಸಿದರು. ಇಂದು ಬೆಳಿಗ್ಗೆ ಮೈಸೂರಿನ ಪುರಭವನಕ್ಕೆ ಬಂದ ಶ್ರೀನಿವಾಸ್ ಅವರಿಗೆ ಪೂಜಾ ಅವರು ಗ್ಲೋಬಲ್ ವರ್ಲ್ಡ್ ರೆಕಾರ್ಡ್ ಸರ್ಟಿಫಿಕೇಟ್ ಹಾಗೂ ಪದಕ ನೀಡಿದರು. ಈ ಸಂದರ್ಭದಲ್ಲಿ ದಲಿತ ಪರ ಸಂಘಟನೆಯ ಕಾರ್ಯಕರ್ತರು ಶ್ರೀನಿವಾಸ್ ಅವರನ್ನು ಅಭಿನಂದಿಸಿದರು.

ರೈಲು ಬೋಗಿಯಲ್ಲಿ ಗಾಂಜಾ ಪತ್ತೆ

ಮೈಸೂರು, ಮಾ.15(ಆರ್‌ಕೆ)–ರೈಲು ಬೋಗಿಯಲ್ಲಿ ಸಾಗಣೆ ಮಾಡುತ್ತಿದ್ದ 1 ಕೆ.ಜಿ. 692 ಗ್ರಾಂ ಗಾಂಜಾ ಪತ್ತೆಯಾಗಿದೆ.

ದರ್ಭಾಂಗ್‌ನಿಂದ ಮೈಸೂರಿಗೆ ಬಂದ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಗಾಂಜಾ ಸಾಗಣೆ ಮಾಡಲಾಗುತ್ತಿದೆ ಎಂಬ ಸುಳಿವಿನ ಮೇರೆಗೆ ಕಾರ್ಯ ಪ್ರವೃತ್ತರಾದ ಅಬಕಾರಿ ಇನ್ಸ್‌ಪೆಕ್ಟರ್ ಪೂಜಾ ನೇತೃತ್ವದ ಅಧಿಕಾರಿಗಳ ತಂಡ, ಶೋಧ ನಡೆಸಿದಾಗ ಎಸಿ ಸಾಮಾನ್ಯ ಕೋಚ್‌ನಲ್ಲಿ ವಾರಸುದಾರರಿಲ್ಲದ ನೀಲಿ ಬಣ್ಣದ ಸೂಟ್‌ಕೇಸ್‌ನಲ್ಲಿ 1 ಕೆ.ಜಿ. 692 ಗ್ರಾಂ ಗಾಂಜಾ ಪತ್ತೆಯಾಗಿದೆ.

ಪ್ರಕರಣ ದಾಖಲಿಸಿಕೊಂಡಿರುವ ಅಬಕಾರಿ ಅಧಿಕಾರಿಗಳು ಮಾಲು ವಶಪಡಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಅಬಕಾರಿ ಸಬ್ ಇನ್ಸ್‌ಪೆಕ್ಟರ್ ರವಿಕುಮಾರ್, ಸಿಬ್ಬಂದಿಗಳಾದ ಎನ್.ಅಜಂಖ್, ಸಿ.ಮಂಜುನಾಥ ಹಾಗೂ ಇತರರು ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಬೆಳಗಾವಿಯಲ್ಲಿ ಭೀಕರ ಅಪಘಾತ ಕಾರಿನ ಮೇಲೆ ಉರುಳಿಬಿದ್ದ ಕಾಂಕ್ರೀಟ್ ಮಿಕ್ಸರ್ ಲಾರಿ

ಪವಾಡಸದೃಶ್ಯವಾಗಿ ಇಬ್ಬರು ಪಾರು



ಬೆಳಗಾವಿ, ಮಾ.15– ಬೆಂಗಳೂರಿನ ನೆಲಮಂಗಲದಲ್ಲಿ ಕಳೆದ ಡಿಸೆಂಬರ್‌ನಲ್ಲಿ ನಡೆದಿದ್ದ ಭೀಕರ ಅಪಘಾತವನ್ನು ನೆನಪಿಸುವಂಥ ರೀತಿಯಲ್ಲಿ ಬೆಳಗಾವಿಯಲ್ಲಿ ಭೀಕರ ಆಕ್ಸಿಡೆಂಟ್ ಸಂಭವಿಸಿದೆ.

ರಸ್ತೆ ಪಕ್ಕದಲ್ಲಿ ನಿಂತಿದ್ದ ಕಾರ್‌ನ ಮೇಲೆ ಕಾಂಕ್ರಿಟ್ ಮಿಕ್ಸರ್ ಲಾರಿ ಉರುಳಿಬಿದ್ದಿದೆ. ನೆಲಮಂಗಲದಲ್ಲಿ ನಡೆದಿದ್ದ ಅಪಘಾತದಲ್ಲಿ ಒಂದೇ ಕುಟುಂಬದ 6 ಮಂದಿ ಸಾವು ಕಂಡಿದ್ದರೆ, ಬೆಳಗಾವಿ ಅಪಘಾತದಲ್ಲಿ ಕಾರಿನ ಮೇಲೆ ಕಾಂಕ್ರಿಟ್ ಮಿಕ್ಸರ್ ಲಾರಿ ಬಿದ್ದರೂ, ಕಾರ್‌ನಲ್ಲಿದ್ದ ಇಬ್ಬರು ಪವಾಡಸದೃಶ್ಯವಾಗಿ ಪಾರಾಗಿದ್ದಾರೆ.

ಕಾರಿನ ಒಳಗೆ ಇಬ್ಬರು ಪ್ರಯಾಣಿಕರು ಸಿಕ್ಕಿಕೊಂಡಿರುವ ಮಾಹಿತಿ ಸಿಕ್ಕ ಕೂಡಲೇ ರಕ್ಷಣಾ ಕಾರ್ಯಾಚರಣೆ ಆರಂಭ ವಾಗಿತ್ತು. ಬೆಳಗಾವಿಯ ಕೆ.ಎಲ್.ಇ ಆಸ್ಪತ್ರೆ ಬಳಿಯ ಹೈವೇ ಪಕ್ಕದಲ್ಲಿ, ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಪಕ್ಕದ ಸರ್ವೀಸ್ ರಸ್ತೆಯಲ್ಲಿ ಈ ಘಟನೆ ನಡೆದಿದ್ದು, ಸ್ಥಳಕ್ಕೆ ಪೊಲೀಸರು ಭೇಟಿ ಪರಿಶೀಲನೆ ಮಾಡಿದ್ದಾರೆ. ಕಾರಿನಲ್ಲಿ ಇದ್ದವರನ್ನು ರಕ್ಷಿಸಲು ಕ್ರೇನ್ ಮೂಲಕ ರಕ್ಷಣಾ ಕಾರ್ಯಾಚರಣೆ ನಡೆದಿತ್ತು. ಇಬ್ಬರಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ಇವರು ಪಾರಾದ ರೀತಿಗೆ ಜನರು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಅಶೋಕ್ ಲೇಲ್ಯಾಂಡ್ ಕಂಪನಿಯ ಕಾಂಕ್ರಿಟ್ ಲಾರಿ ಬಿದ್ದ ರಭಸಕ್ಕೆ ಇಡೀ ಕಾರು ಜಖಂ ಆಗಿದೆ.


ಸಬರ್ಬನ್ ಬಸ್ ನಿಲ್ದಾಣದಲ್ಲಿ ಮಹಿಳೆ ಚಿನ್ನದ ಸರ ಕಳವು

ಮೈಸೂರು,ಮಾ.15(ಆರ್‌ಕೆ)– ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಮಹಿಳೆಯ ಚಿನ್ನದ ಸರ ಎಗರಿಸಿರುವ ಪ್ರಕರಣ ಗುರುವಾರ ಸಂಜೆ ನಡೆದಿದೆ.

ಶ್ರೀರಂಗಪಟ್ಟಣ ತಾಲೂಕು ಚಿನ್ನಗಿರಿ ಕೊಪ್ಪಲು ನಿವಾಸಿ ದೇವಮ್ಮ(62) ಸರ ಕಳೆದುಕೊಂಡವರು. ಗ್ರಾಮದ ಇತರ ಮಹಿಳೆಯರೊಂದಿಗೆ ನಂಜನಗೂಡಿಗೆ ತೆರಳಿ ಶ್ರೀಕಂಠೇಶ್ವರ ಸ್ವಾಮಿ ದರ್ಶನ ಮಾಡಿ ಬಂದಿದ್ದ ದೇವಮ್ಮ, ಊರಿಗೆ ತೆರಳಲು ಮೈಸೂರಿನ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದ 10ನೇ ಪ್ಲಾಟ್ ಫಾರಂನಲ್ಲಿ ಬಸ್ ಹತ್ತುವಾಗ ನೂಕು–ನುಗ್ಗಲು ವೇಳೆ ಖದೀಮರು ಅವರ ಸುಮಾರು 2 ಲಕ್ಷ ರೂ. ಬೆಲೆಯ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡಿದ್ದಾರೆ.

ಗಮನಕ್ಕೆ ಬರುತ್ತಿದ್ದಂತೆಯೇ ಸ್ಥಳದಲ್ಲಿದ್ದ ಲಷ್ಕರ್ ಠಾಣೆ ಔಟ್‌ಪೋಸ್ಟ್ ಪೊಲೀಸರಿಗೆ ವಿಷಯ ತಿಳಿಸಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಧಾವಿಸಿದ ಇನ್‌ಸ್ಪೆಕ್ಟರ್ ಪ್ರಸಾದ್, ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡರು. ಬಸ್‌ಸ್ಟ್ಯಾಂಡಿನ ಪ್ಲಾಟ್‌ಫಾರಂನಲ್ಲಿರುವ ಸಿಸಿಟಿವಿ ಫುಟೇಜ್‌ಗಳನ್ನು ಪಡೆದುಕೊಂಡಿರುವ ಪೊಲೀಸರು, ಸುಳಿವಿನ ಜಾಡು ಹಿಡಿದು ಸರಗಳ್ಳರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಡಾ.ಆಚಾರ್ಯ ಬುದ್ಧರಖ್ಖಿತ ಭಂತೇಜಿ ಜನ್ಮದಿನದಂದು ರಜೆ ಘೋಷಣೆಗೆ ಆಗ್ರಹ



ಮೈಸೂರು,ಮಾ.15(ಎಂಕೆ)–ಪೂಜ್ಯ ಡಾ.ಆಚಾರ್ಯ ಬುದ್ಧರಖ್ಖಿತ ಭಂತೇಜಿಯವರ ಜನ್ಮದಿನ(ಮಾರ್ಚ್ ತಿಂಗಳ ಫಗ್ಗುನ(ಫಾಲ್ಗುಣ) ಹುಣ್ಣಿಮೆಯ ದಿನದಂದು)ವನ್ನು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ರಜಾ ದಿನವನ್ನಾಗಿ ಘೋಷಿಸುವಂತೆ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಸಮಿತಿ ಸದಸ್ಯ ಹಾಗೂ ಮೈಸೂರಿನ ಮಹಾಬೋಧಿ ಮೈತ್ರಿ ಮಂಡಲದ ಸಿಇಓ ಜಿಕ್ಮೆತ್ ವಾಂಗ್ಡಸ್ ಜ್ಯೋತಿ ಮನವಿ ಮಾಡಿದ್ದಾರೆ.

ಆಚಾರ್ಯ ಬುದ್ಧರಖ್ಖಿತ ಭಂತೇಜಿ ಅವರು ಭಾರತದಲ್ಲಿ ಮಾತ್ರವಲ್ಲದೆ ಏಷ್ಯಾ ಮತ್ತು ಪ್ರಪಂಚದಾದ್ಯಂತ ಅಪಾರ ಭಕ್ತರನ್ನು ಹೊಂದಿರುವ ಗೌರವಾನ್ವಿತ ಬೌದ್ಧ ಸನ್ಯಾಸಿಗಳಲ್ಲಿ ಒಬ್ಬರು. ಬೌದ್ಧಧರ್ಮ, ಶಿಕ್ಷಣ ಮತ್ತು ಮಾನವೀಯ ಸೇವೆಗೆ ಅವರ ಅಸಾಧಾರಣ ಕೊಡುಗೆಗಳನ್ನು ನೀಡಿದ್ದಾರೆ. ದೇಶ ಹಾಗೂ ಏಷ್ಯಾದ ಅನೇಕ ಭಾಗಗಳಲ್ಲಿ ಅಸಂಖ್ಯಾತ ಜನರ ಜೀವನದ ಮೇಲೆ ಗಾಢವಾದ ಪ್ರಭಾವ ಬೀರಿದ್ದಾರೆ. ಪೂಜ್ಯರು 1956ರಂದು ಬೆಂಗಳೂರಿನಲ್ಲಿ ಸ್ಥಾಪಿಸಿದ ಮಹಾಬೋಧಿ ಸೊಸೈಟಿ ಇಂದು ದೇಶದ ನಾನಾ ಕಡೆ 22 ಶಾಖೆಗಳಾಗಿ ವಿಸ್ತಾರಗೊಂಡು ಸೇವೆ ನೀಡುತ್ತಿದೆ. ಮಾರ್ಚ್ ತಿಂಗಳ ಫಗ್ಗುನ ಹುಣ್ಣಿಮೆ ದಿನದಂದು ದೇಶಾದ್ಯಂತ ಪೂಜ್ಯ ಡಾ.ಆಚಾರ್ಯ ಬುದ್ಧರಖ್ಖಿತ ಭಂತೇಜಿಯವರ 103ನೇ ಜನ್ಮದಿನ. ಮೈಸೂರಿನಲ್ಲಿ ಮಹಾಬೋಧಿ ಮೈತ್ರಿ ಮಂಡಲ (ಮಹಾಬೋದಿ ಶಾಲೆ)ದಲ್ಲಿ ಅವರ ಜನ್ಮದಿನ ಆಚರಿಸಲಾಗುತ್ತಿದೆ. ಪೂಜ್ಯರು ಸಮಾಜಕ್ಕೆ ನೀಡಿರುವ ಕೊಡುಗೆಯನ್ನು ಸ್ಮರಿಸುವ ನಿಟ್ಟಿನಲ್ಲಿ ಅವರ ಜನ್ಮದಿನವನ್ನು ರಾಜ್ಯ ಮತ್ತು ರಾಷ್ಟ್ರೀಯ ರಜಾ ದಿನವನ್ನಾಗಿ ಘೋಷಿಸುವಂತೆ ಮನವಿ ಮಾಡಿದ್ದಾರೆ.


ಇಂದು ಅಕಬರ ಅಲಿ ಜನ್ಮ ಶತಮಾನೋತ್ಸವ ಕವಿಗೋಷ್ಠಿ



ಅಕಬರ ಅಲಿ

ಮೈಸೂರು, ಮಾ. 15– ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಿಳಾ ಘಟಕ ಮತ್ತು ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಸಂಯುಕ್ತವಾಗಿ ಚುಟುಕು ರತ್ನ ಡಾ.ಎಂ.ಅಕಬರ ಅಲಿ ಅವರ ಜನ್ಮ ಶತಮಾನೋತ್ಸವ ಸವಿನೆನಪಿನಲ್ಲಿ ಚುಟುಕು ಕವಿಗೋಷ್ಠಿಯನ್ನು ಮಾ.16ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಶಾಸಕ ತನ್ವೀರ್ ಸೇಠ್ ಕಾರ್ಯಕ್ರಮ ಉದ್ಘಾಟಿಸುವರು. ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್.ಅರಸ್ ಅಧ್ಯಕ್ಷತೆ ವಹಿಸುವರು. ಚುಟುಕು ರತ್ನ ಡಾ.ಸಿಪಿಕೆ ಮತ್ತು ಹಿರಿಯ ಪತ್ರಕರ್ತ ಬಿ.ಜ.ರಾಜೀವ್, ಅಕಬರ ಅಲಿ ಅವರನ್ನು ಕುರಿತು ಮಾತನಾಡುವರು. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ರಾಜ್ಯ ಮಟ್ಟದ ಚುಟುಕು ಕವಿಗೋಷ್ಠಿ ಉದ್ಘಾಟಿಸುವರು. ಡಾ.ಎಂ.ಅಕಬರ ಅಲಿ ಅವರ ಪುತ್ರ ಅಹಮದ್ ಮುಲ್ಲ, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚುಟುಕು ಸಿರಿ ಡಾ.ರತ್ನ ಹಾಲಪ್ಪಗೌಡ ಅತಿಥಿಗಳಾಗಿರುವರು.

ಬೋರಣ್ಣಗೆ ಪಿಎಚ್.ಡಿ ಪದವಿ



ಮೈಸೂರು,ಮಾ.15–ಡಾ.ಹೆಚ್.ಬಿ. ರವಿಕುಮಾರ್ ಅವರ ಮಾರ್ಗದರ್ಶನದಲ್ಲಿ ಎಂ.ಪಿ. ಬೋರಣ್ಣ ಅವರು ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಏ.20, ಮೈಸೂರಲ್ಲಿ ವಿಶ್ವಕರ್ಮ ಸಮಾಜದ ಸಾಧಕರಿಗೆ ಸನ್ಮಾನ

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಕಾರ್ಯಕ್ರಮ ಉದ್ಘಾಟನೆ



ಮೈಸೂರಿನ ರೋಟರಿ ಭವನದಲ್ಲಿ ಅಖಿಲ ಕರ್ನಾಟಕ ವಿಶ್ವಕರ್ಮ ಯುವ ಬ್ರಿಗೇಡ್ ವತಿಯಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಒಬಿಸಿ ರಾಜ್ಯ ಕಾರ್ಯದರ್ಶಿ ವಸಂತ ಮುರಳಿ ಆಚಾರ್ ಮಾತನಾಡಿದರು.

ಮೈಸೂರು, ಮಾ.15(ಜಿಎ)–ಅಖಿಲ ಕರ್ನಾಟಕ ವಿಶ್ವಕರ್ಮ ಯುವ ಬ್ರಿಗೇಡ್ ವತಿಯಿಂದ ಏ.20ರಂದು ಮೈಸೂರಿನ ಕಲಾಮಂದಿರದಲ್ಲಿ ವಿಶ್ವಕರ್ಮ ಸಮಾಜದ ಸಾಧಕರು, ಹಿರಿಯರಿಗೆ ಸನ್ಮಾನ ಮತ್ತು ಟೂಲ್‌ಕಿಟ್ ಹಾಗೂ ಟೈಲರಿಂಗ್ ಮಿಷನ್ ವಿತರಣಾ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಯುವ ಬ್ರಿಗೇಡ್ ಅಧ್ಯಕ್ಷ ನಾಗೇಂದ್ರ ತಿಳಿಸಿದರು.

ಮೈಸೂರಿನ ರೋಟರಿ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಡೀ ವಿಶ್ವಕರ್ಮ ಸಮುದಾಯದ ಬಲವರ್ಧನೆಗಾಗಿ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಶ್ವಕರ್ಮ ಪುತ್ಥಳಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಟೂಲ್ಸ್ ಕಿಟ್ ಅನ್ನು ಶಾಸಕ ಕೆ.ಹರೀಶ್‌ಗೌಡ ಹಾಗೂ ಹೊಲಿಗೆ ಯಂತ್ರವನ್ನು ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ವಿತರಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್, ಶಾಸಕರಾದ ಜಿ.ಟಿ. ದೇವೇಗೌಡ, ಗಣೇಶ್ ಪ್ರಸಾದ್, ತನ್ವೀರ್ ಸೇಠ್, ಜಿ.ಡಿ.ಹರೀಶ್‌ಗೌಡ ಮತ್ತಿತರರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಸಮುದಾಯದ ಬಲವರ್ಧನೆ, ವಿಶ್ವಕರ್ಮ ನಿಗಮಕ್ಕೆ ಹೆಚ್ಚಿನ ಅನುದಾನ ನೀಡುವಂತೆ ಅಂದು ಸರ್ಕಾರಕ್ಕೆ ಒತ್ತಾಯಿಸಲಾಗುತ್ತದೆ. ವಿಶ್ವಕರ್ಮ ಸಮುದಾಯ ಸಾಕಷ್ಟು ಹಿಂದುಳಿದಿದ್ದು, ರಾಜಕೀಯ ಪ್ರಾತಿನಿಧ್ಯ ಸಿಗದೆ ನಾವು ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲು ಆಗುತ್ತಿಲ್ಲ. ನಮ್ಮ ಸಮುದಾಯ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ನಮ್ಮ ಎಲ್ಲಾ ಸಮಸ್ಯೆಗಳ ಬಗ್ಗೆ ಚರ್ಚಿಸಿ ಮುಂದಿನ ದಿನಗಳಲ್ಲಿ ವಿಶ್ವಕರ್ಮ ಸಮುದಾಯ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರ ವಿಶೇಷ ಯೋಜನೆ ರೂಪಿಸಲು ನಾವು ಒತ್ತಾಯಿಸುತ್ತೇವೆ. ಮುಂದಿನ ದಿನಗಳಲ್ಲಿ ಸಮುದಾಯ ಒಗ್ಗಟ್ಟಿನಿಂದ ಹೋರಾಟ ಮಾಡುತ್ತದೆ ಎಂದು ತಿಳಿಸಿದರು.

ಮುಖಂಡ ಸಿದ್ದಪ್ಪಾಜಿ ವಿಶ್ವಕರ್ಮ ಮಾತನಾಡಿ, ನಮ್ಮ ಸಮುದಾಯಕ್ಕೆ ಯಾವುದೇ ಶಕ್ತಿ ಇಲ್ಲ. ಕೊರೊನಾ ಸಂದರ್ಭದಲ್ಲಿ ಯಾವುದೇ ವಿಶೇಷ ಅನುದಾನ ನೀಡಿಲ್ಲ. ರಾಜ್ಯ ಸರ್ಕಾರ ಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸಬೇಕು. ಮೈಸೂರಿನಲ್ಲಿ ವಿಶ್ವಕರ್ಮ ಸಮುದಾಯದ ಭವನ ನಿರ್ಮಾಣವಾಗಬೇಕಿದೆ. ಈ ಕಾರ್ಯಕ್ರಮಕ್ಕೆ ಸಮುದಾಯದ ಎಲ್ಲಾ ಮುಖಂಡರು ಮತ್ತು ಸಂಘಟನೆಗಳಿಗೆ ಆಹ್ವಾನ ನೀಡಿ ಸರ್ಕಾರದ ಮೇಲೆ ಒತ್ತಡ ಹಾಕುತ್ತೇವೆ ಎಂದರು.

ಸುದ್ದಿಗೋಷ್ಠಿ ನಂತರ ಕೆಪಿಸಿಸಿ ಒಬಿಸಿ ರಾಜ್ಯ ಕಾರ್ಯದರ್ಶಿ ವಸಂತ ಮುರಳಿ ಆಚಾರ್ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು. ಎಲ್ಲರೂ ಒಗ್ಗಟ್ಟಿನಿಂದ ಕಾರ್ಯಕ್ರಮ ಮಾಡಿ ಸಮುದಾಯ ಬಲಪಡಿಸಿಕೊಳ್ಳಿ ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ರಾಮಲಿಂಗಾಚಾರಿ, ರುದ್ರೇಶ್ ಇಲವಾಲ, ವಿಜಯ್ ವಿಶ್ವಕರ್ಮ, ಹೇಮಲತಾ, ಯೋಗೇಶ್ ಆಚಾರ್, ಸೋಮಣ್ಣ, ವೈರಮುಡಿ, ರಮೇಶ್ ಆಚಾರ್, ಶಂಕರಚಾರಿ, ರವಿ ಅರಸಿನಕೆರೆ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ವೈಮಾನಿಕ ದಾಳಿಯಲ್ಲಿ ಐಸಿಸ್ ಮುಖ್ಯಸ್ಥ ಹತ್ಯೆ



ಇರಾಕ್: ಇರಾಕ್ ರಾಷ್ಟ್ರೀಯ ಗುಪ್ತಚರ ಸೇವೆ ಸದಸ್ಯರು ಅಮೆರಿಕ ನೇತೃತ್ವದ ಸಂಯುಕ್ತ ಪಡೆಯೊಂದಿಗೆ ನಡೆಸಿದ ವೈಮಾನಿಕ ಕಾರ್ಯಾಚರಣೆಯಲ್ಲಿ ಐಸಿಸ್‌ನ ಮತ್ತೊಬ್ಬ ಮುಖ್ಯಸ್ಥನನ್ನು ಇರಾಕ್‌ನಲ್ಲಿ ಹತ್ಯೆ ಮಾಡಲಾಗಿದೆ.

ಇರಾಕ್ ಪ್ರಧಾನಿ ಮೊಹಮ್ಮದ್ ಶಿಯಾ ಅಲ್ ಸುದಾನಿ ಇದನ್ನು ದೃಢಪಡಿಸಿದ್ದು, ಭಯೋತ್ಪಾದನೆಯ ಶಕ್ತಿಗಳ ಮೇಲೆ ಇರಾಕಿಗಳು ತಮ್ಮ ಪ್ರಭಾವಶಾಲಿ ವಿಜಯಗಳನ್ನು ಮುಂದುವರೆಸಿದ್ದಾರೆ ಎಂದು ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಅಬ್ದುಲ್ಲಾ ಮಕಿ ಮೊಸ್ಲೆಹ್ ಅಲ್–ರಿಫಾಯಿ ಅಥವಾ ಅಬು ಖದೀಜಾ ಉಗ್ರಗಾಮಿ ಸಂಘಟನೆಯ ಉಪ ಖಲೀಫ್ ಆಗಿದ್ದ. ಈತ ಇರಾಕ್ ಮತ್ತು ವಿಶ್ವದ ಅತ್ಯಂತ ಅಪಾಯಕಾರಿ ಭಯೋತ್ಪಾದಕರಲ್ಲಿ ಒಬ್ಬನಾಗಿದ್ದ ಎಂದು ಪ್ರಧಾನ ಮಂತ್ರಿಗಳ ಹೇಳಿಕೆ ತಿಳಿಸಿದೆ. ತಮ್ಮ ಟ್ರೂತ್ ಸೋಷಿಯಲ್ ಪ್ಲಾಟ್‌ಫಾರ್ಮ್‌ನಲ್ಲಿ ನಿನ್ನೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇಂದು ಇರಾಕ್‌ನಲ್ಲಿ ಪರಾರಿಯಾಗಿದ್ದ ಐಸಿಸ್ ನಾಯಕನನ್ನು ಹತ್ಯೆ ಮಾಡಲಾಗಿದೆ. ನಮ್ಮ ವೀರಯೋಧರು ಇರಾಕ್ ಸರ್ಕಾರ ಮತ್ತು ಕುರ್ದಿಶ್ ಸ್ಥಳೀಯ ಸರ್ಕಾರದ ಸಮನ್ವಯದೊಂದಿಗೆ ಆತನನ್ನು ಕೊಂದು ಹಾಕಿದ್ದಾರೆ ಎಂದು ಬರೆದಿದ್ದಾರೆ.

ಕಳಪೆ ಶೈಕ್ಷಣಿಕ ಸಾಧನೆ: ಪುತ್ರರ ಕೊಂದು, ವ್ಯಕ್ತಿ ಆತ್ಮಹತ್ಯೆ

ಕಾಕಿನಾಡ: ಮಕ್ಕಳ ಕಳಪೆ ಶೈಕ್ಷಣಿಕ ಸಾಧನೆಗಾಗಿ 37 ವರ್ಷದ ಒಎನ್‌ಜಿಸಿ ಉದ್ಯೋಗಿಯೊಬ್ಬರು ತನ್ನ ಇಬ್ಬರು ಅಪ್ರಾಪ್ತ ಪುತ್ರರನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಆಂಧ್ರಪ್ರದೇಶದ ಕಾಕಿನಾಡ ಜಿಲ್ಲೆಯಲ್ಲಿ ನಡೆದಿದೆ. ಶುಕ್ರವಾರ ಬೆಳಗ್ಗೆ 10 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ಮಕ್ಕಳ ಶೈಕ್ಷಣಿಕ ಸಾಧನೆಯಿಂದ ನಿರಾಸೆಗೊಂಡಿದ್ದ ತಂದೆ ವಿ.ಚಂದ್ರಕಿಶೋರ್ ಬಕೆಟ್ ನೀರಿನಲ್ಲಿ ಮುಳುಗಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಅಧ್ಯಯನದಲ್ಲಿ ಅತ್ಯುತ್ತಮವಾಗಿಲ್ಲದಿದ್ದರೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ತುಂಬಾ ಕಷ್ಟಪಡಬೇಕಾಗುತ್ತದೆ ಎಂಬ ಹೆದರಿಕೆಯಿಂದ ಅವರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಸೂಸೈಡ್ ನೋಟ್ ವಶಕ್ಕೆ ಪಡೆಯಲಾಗಿದ್ದು, ಅದರಲ್ಲಿನ ಅಂಶಗಳನ್ನು ಪರಿಶೀಲಿಸಲಾಗುತ್ತಿದೆ. ಈ ದುರಂತಕ್ಕೆ ಕಾರಣವಾದ ನಿಖರವಾದ ಕಾರಣ ಪತ್ತೆ ಹಚ್ಚಲು ವಿಧಿ ವಿಜ್ಞಾನ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿ ಹೇಳಿದರು. ತಮ್ಮ ಪತಿ ಮಲಗುವ ಕೋಣೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಅವರ ಮಕ್ಕಳು ಬಕೆಟ್‌ನಲ್ಲಿ ಸಾವನ್ನಪ್ಪಿರುವುದಾಗಿ ಕಿಶೋರ್ ಅವರ ಪತ್ನಿ ರಾಣಿ ದೂರಿನಲ್ಲಿ ತಿಳಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕುರ್ಸ್ಕ್ ಪ್ರದೇಶದ ಸೈನಿಕರು ಶರಣಾದರೆ ಉಕ್ರೇನ್ ಪಡೆಗಳ ಸುರಕ್ಷತೆ ಖಚಿತ



ಮಾಸ್ಕೋ: ಉಕ್ರೇನಿಯನ್ ಸೈನಿಕರ ಜೀವ ಉಳಿಸಲು ಕದನ ವಿರಾಮಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒತ್ತಾಯಿಸಿದ ನಂತರ ಕುರ್ಸ್ಕ್ ಪ್ರದೇಶದಲ್ಲಿ ಹೋರಾಡುತ್ತಿರುವ ಉಕ್ರೇನ್ ಸೈನಿಕರು ಶರಣಾಗುವಂತೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಕರೆ ನೀಡಿದ್ದಾರೆ.

ರಷ್ಯಾ ಸೈನಿಕರನ್ನು ಉಕ್ರೇನ್ ಪಡೆಗಳು ಸುತ್ತುವರೆದಿವೆ ಎಂಬ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಹೇಳಿಕೆಯನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ತಳ್ಳಿಹಾಕಿದ್ದು, ತಮ್ಮ ದೇಶದ ಸೈನಿಕರ ಮೇಲೆ ಒತ್ತಡ ತೀವ್ರವಾಗಿ ಹೆಚ್ಚಾಗುತ್ತಿದೆ ಎಂದಿದ್ದಾರೆ. ಕಳೆದ ವಾರ ರಷ್ಯಾ ತ್ವರಿತ ಪ್ರತಿದಾಳಿ ನಡೆಸಿದೆ. ಉಕ್ರೇನ್‌ನಿಂದ ಪಶ್ಚಿಮ ಗಡಿ ಪ್ರದೇಶದಲ್ಲಿನ ಭೂಮಿ ಮತ್ತು ವಸಾಹತುಗಳನ್ನು ವಶಪಡಿಸಿಕೊಂಡಿದೆ ಎಂದು ಉಕ್ರೇನ್ ಹೇಳಿದೆ. ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ಕರೆಗೆ ನಾವು ಸಹಾನುಭೂತಿ ಹೊಂದಿದ್ದೇವೆ ಎಂದು ಪುಟಿನ್ ಟೆಲಿವಿಷನ್ ಮೂಲಕ ಹೇಳಿದ್ದಾರೆ. ಉಕ್ರೇನ್ ಪಡೆ ತಮ್ಮ ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಶರಣಾದರೆ ಅವರಿಗೆ ಜೀವರಕ್ಷಣೆ ಮತ್ತು ನಮ್ಮ ಸರ್ಕಾರದಿಂದಲೇ ಸೂಕ್ತ ಚಿಕಿತ್ಸೆಯನ್ನು ಒದಗಿಸಲಾಗುವುದು ಎಂದರು.

ಬಿಹಾರದಲ್ಲಿ ಮತ್ತೊಬ್ಬ ಪೊಲೀಸ್ ಅಧಿಕಾರಿ ಹತ್ಯೆ

ಪಾಟ್ನಾ: ಕಳೆದ 48 ಗಂಟೆಗಳಲ್ಲಿ ಬಿಹಾರದಲ್ಲಿ ಮತ್ತೊಬ್ಬ ಪೊಲೀಸ್ ಅಧಿಕಾರಿಯನ್ನು ಉದ್ರಿಕ್ತ ಗುಂಪೊಂದು ಕೊಂದು ಹಾಕಿದ್ದು, ರಾಜ್ಯ ಗೃಹ ಇಲಾಖೆ ವಿರೋಧ ಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿದೆ. ಶುಕ್ರವಾರ ರಾತ್ರಿ 8 ಗಂಟೆ ಸುಮಾರಿಗೆ ಮುಂಗೇರ್ ಜಿಲ್ಲೆಯ ಮುಫಾಸಿಲ್ ಪೊಲೀಸ್ ಠಾಣೆ ವ್ಯಾಪ್ತಿಯ ಐಟಿಸಿ ನಂದಲಾಲ್‌ಪುರ ಗ್ರಾಮದ ಬಳಿ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆಯಿತು. ಸಹಾಯಕ ಸಬ್–ಇನ್ಸ್‌ಪೆಕ್ಟರ್ ಸಂತೋಷ್ ಕುಮಾರ್ ಮಧ್ಯಸ್ಥಿಕೆ ವಹಿಸಲು ಪ್ರಯತ್ನಿಸಿದಾಗ ಅವರ ಮೇಲೆ ಹಲ್ಲೆ ನಡೆಸಲಾಗಿದೆ. ಸಂತೋಷ್‌ಕುಮಾರ್ ಎರಡು ಕಡೆಯವರನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದರು. ಆದರೆ ಹಲ್ಲೆಯಲ್ಲಿ ಅವರ ತಲೆಗೆ ಗಂಭೀರ ಗಾಯಗಳಾಗಿ ಪ್ರಜ್ಞಾಹೀನರಾದರು. ಅವರ ಸಹೋದ್ಯೋಗಿಗಳು ಅವರನ್ನು ಮುಂಗೇರ್‌ನ ಸದರ್ ಆಸ್ಪತ್ರೆಗೆ ಕರೆದೊಯ್ದರು, ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಪಾಟ್ನಾಗೆ ಕರೆದೊಯ್ಯಲಾಯಿತಾದರೂ ದಾರಿ ಮಧ್ಯೆ ಮೃತಪಟ್ಟರು. ಕಳೆದ ಎರಡು ದಿನಗಳಲ್ಲಿ ಬಿಹಾರದಲ್ಲಿ ಪೊಲೀಸ್ ಅಧಿಕಾರಿಯೊಬ್ಬರ ಎರಡನೇ ಹತ್ಯೆ ಪ್ರಕರಣ ಇದಾಗಿದೆ. ಇದಕ್ಕೂ ಮೊದಲು ಅರಾರಿಯಾ ಜಿಲ್ಲೆಯ ಫುಲ್ಕಹಾನಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಎಎಸ್‌ಐ ರಾಜೀವ್ ರಂಜನ್ ಅವರನ್ನು ಗುಂಪೊಂದು ತಳ್ಳಿ ಹಲ್ಲೆ ಮಾಡಿ ಹತ್ಯೆ ಮಾಡಿತ್ತು.

ಹಮಾಸ್ ಬೆಂಬಲಿಸಿದ ಭಾರತೀಯ ವಿದ್ಯಾರ್ಥಿನಿ ವೀಸಾ ರದ್ದು



ನ್ಯೂಯಾರ್ಕ್: ಹಿಂಸೆ ಮತ್ತು ಭಯೋತ್ಪಾದನೆಯನ್ನು ಪ್ರತಿಪಾದಿಸಿದ ಮತ್ತು ಹಮಾಸ್ ಉಗ್ರಗಾಮಿ ಸಂಘಟನೆಯನ್ನು ಬೆಂಬಲಿಸುವ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ವೀಸಾ ರದ್ದುಗೊಂಡ ಕೊಲಂಬಿಯಾ ವಿಶ್ವವಿದ್ಯಾಲಯದ ಭಾರತೀಯ ಮೂಲದ ವಿದ್ಯಾರ್ಥಿನಿ ಸ್ವಯಂ ಗಡಿಪಾರುಗೊಂಡಿದ್ದಾರೆ. ಭಾರತೀಯಳಾಗಿರುವ ರಂಜನಿ ಶ್ರೀನಿವಾಸನ್, ಕೊಲಂಬಿಯಾ ವಿಶ್ವವಿದ್ಯಾಲಯದ ನಗರ ಯೋಜನೆಯಲ್ಲಿ ಡಾಕ್ಟರೇಟ್ ವಿದ್ಯಾರ್ಥಿಯಾಗಿ ಎಫ್–1 ವಿದ್ಯಾರ್ಥಿ ವೀಸಾದಲ್ಲಿ ಅಮೆರಿಕಕ್ಕೆ ಹೋಗಿದ್ದರು. ನಂತರ ಭಯೋತ್ಪಾದಕ ಸಂಘಟನೆಯಾದ ಹಮಾಸ್ ಅನ್ನು ಬೆಂಬಲಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು ಎಂದು ಗೃಹ ಭದ್ರತಾ ಇಲಾಖೆ ಶುಕ್ರವಾರ ಹೇಳಿಕೆಯಲ್ಲಿ ತಿಳಿಸಿದೆ. ಮಾರ್ಚ್ 5 ರಂದು ವಿದೇಶಾಂಗ ಇಲಾಖೆ ಅವರ ವೀಸಾವನ್ನು ರದ್ದುಗೊಳಿಸಿತ್ತು. ಮಾರ್ಚ್ 11 ರಂದು ಸ್ವಯಂ ಗಡಿಪಾರುಗೊಳ್ಳಲು ಕಸ್ಟಮ್ಸ್ ಮತ್ತು ಬಾರ್ಡರ್ ಪ್ರೊಟೆಕ್ಷನ್ ಹೋಮ್ ಅಪ್ಲಿಕೇಶನ್ ಅನ್ನು ರಂಜನಿ ಶ್ರೀನಿವಾಸನ್ ಬಳಸಿದ ವೀಡಿಯೊ ತುಣುಕುಗಳು ಕಂಡಿವೆ ಎಂದು ಗೃಹ ಭದ್ರತಾ ಇಲಾಖೆ ತಿಳಿಸಿದೆ.



ಕೊಡವ ಹಾಕಿ ಅಕಾಡೆಮಿ ಹಾಗೂ ಮುದ್ದಂಡ ಕಪ್ ಹಾಕಿ ಉತ್ಸವ ಸಮಿತಿಯ ಪ್ರಮುಖರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಾ.28ರಿಂದ ಮುದ್ದಂಡ ಕಪ್ ಹಾಕಿ ಉತ್ಸವ

ದಾಖಲೆಯ 370 ತಂಡಗಳು ನೋಂದಣಿ, 3 ಮೈದಾನಗಳಲ್ಲಿ ಪಂದ್ಯಾಟ

ಮಡಿಕೇರಿ,ಮಾ.15– ಕೊಡವ ಕುಟುಂಬಗಳ ನಡುವಿನ ಹಾಕಿ ಪಂದ್ಯಾವಳಿಯ '25ನೇ ವರ್ಷದ ಮುದ್ದಂಡ ಕಪ್ ಹಾಕಿ' ಉತ್ಸವಕ್ಕೆ ಮಡಿಕೇರಿ ನಗರದಲ್ಲಿ ಅಂತಿಮ ಹಂತದ ಸಿದ್ಧತೆ ನಡೆದಿದೆ. ಪಂದ್ಯಾವಳಿಯು ಮಾ.28ರಿಂದ ಏ.27ರವರೆಗೆ 3 ಮೈದಾನದಲ್ಲಿ ನಡೆಯಲಿದ್ದು, ಈಗಾಗಲೇ ದಾಖಲೆಯ 370 ತಂಡಗಳು ನೋಂದಣಿ ಮಾಡಿಕೊಂಡಿವೆ.

ಒಂದು ತಿಂಗಳ ಹಾಕಿ ಪಂದ್ಯಾವಳಿ ಹಾಗೂ ಈ ಅವಧಿಯಲ್ಲಿ ನಡೆಯುವ ವಿಭಿನ್ನ ಕಾರ್ಯಕ್ರಮಗಳ ಕುರಿತು ಕೊಡವ ಹಾಕಿ ಅಕಾಡೆಮಿ ಹಾಗೂ ಮುದ್ದಂಡ ಕಪ್ ಹಾಕಿ ಉತ್ಸವ ಸಮಿತಿಯ ಪ್ರಮುಖರು ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಹಾಕಿ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಮಾತನಾಡಿ, ಕಳೆದ ಬಾರಿಯ ಕುಂಡ್ಯೋಳಂಡ ಹಾಕಿ ಹಬ್ಬದಲ್ಲಿ 360 ತಂಡಗಳು ಪಾಲ್ಗೊಂಡಿದ್ದವು. ಈ ಬಾರಿಯ ಮುದ್ದಂಡ ಕಪ್ ಹಾಕಿ ಉತ್ಸವದಲ್ಲಿ 10 ತಂಡಗಳು ಹೆಚ್ಚುವರಿಯಾಗಿದ್ದು, 370 ತಂಡಗಳು ಹೆಸರು ನೋಂದಾಯಿಸಿಕೊಂಡಿವೆ. ನೋಂದಣಿಯ ಕೊನೆಯ ದಿನಾಂಕ ಮಾ.18 ಆಗಿದ್ದು, ಮತ್ತಷ್ಟು ತಂಡಗಳು ಸೇರ್ಪಡೆಗೊಳ್ಳುವ ನಿರೀಕ್ಷೆಇದೆ ಎಂದು ತಿಳಿಸಿದರು. ಮಾ.28ರಂದು ಉದ್ಘಾಟನೆಯ ಪ್ರದರ್ಶನ ಪಂದ್ಯವಾಗಿ ಕೊಡವ ಹಾಕಿ ಅಕಾಡೆಮಿ ಇಲೆವೆನ್ ಹಾಗೂ ಇತ್ತೀಚೆಗೆ ರಾಷ್ಟ್ರೀಯ ಮಟ್ಟದಲ್ಲಿ ವಿಜೇತರಾದ ಕರ್ನಾಟಕ ಇಲೆವೆನ್ ತಂಡಗಳ ನಡುವೆ ಸೆಣಸಾಟ ನಡೆಯಲಿದೆ ಎಂದರು.

ಪಂದ್ಯಾವಳಿಯ ನಿರ್ದೇಶಕರಾಗಿ ಬಡಕಡ ದೀನ ಪೂವಯ್ಯ ಹಾಗೂ ಸಂಯೋಜಕರಾಗಿ ಮುದ್ದಂಡ ರಾಯ್ ತಮ್ಮಯ್ಯ ಕಾರ್ಯನಿರ್ವಹಿಸಲಿದ್ದಾರೆ. ಪಂದ್ಯಾವಳಿಯಲ್ಲಿ ಮುಖ್ಯ ವೀಕ್ಷಕ ವಿಮರ್ಶಕರಾಗಿ ಚೆಪ್ಪುಡಿರ ಕಾರ್ಯಪ್ಪ ಇವರಿಗೆ ಸಹಾಯಕರಾಗಿ ಮಾಳೇಟಿರ ಶ್ರೀನಿವಾಸ್ ಇರಲಿದ್ದು, ಟೈಸ್ ಪ್ರಕ್ರಿಯೆಯನ್ನು ಕೆಚ್ಚೆಟ್ಟಿರ ಪ್ರಸನ್ನ ನಿರ್ವಹಿಸಲಿದ್ದಾರೆ. ಉದ್ಘಾಟನಾ ಸಮಾರಂಭದಲ್ಲಿ ಕಳೆದ ಹಾಕಿ ಉತ್ಸವದಲ್ಲಿ ಗಿನ್ನಿಸ್ ದಾಖಲೆ ನಿರ್ಮಿಸಿದ ಕುಂಡ್ಯೋಳಂಡ ಒಕ್ಕದವರನ್ನು ಸನ್ಮಾನಿಸಿ ಗೌರವಿಸಲಾಗುವುದು ಎಂದು ತಿಳಿಸಿದರು.

ತರಬೇತಿ ಕಾರ್ಯಾಗಾರ: ಹಾಕಿ ಅಕಾಡೆಮಿಯ ಕಾರ್ಯಾಧ್ಯಕ್ಷ ಮೇಕೇರಿರ ರವಿ ಪೆಮ್ಮಯ್ಯ ಮಾತನಾಡಿ, ಕೊಡವ ಹಾಕಿ ಅಕಾಡೆಮಿ ವತಿಯಿಂದ ಮಾ.19 ಮತ್ತು 20 ರಂದು ವಿರಾಜಪೇಟೆಯ ಕಾವೇರಿ ಕಾಲೇಜಿನಲ್ಲಿ ಹಾಕಿ ತೀರ್ಪುಗಾರರ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಜಿಲ್ಲೆಯ ಆಸಕ್ತ ಯುವ ಸಮೂಹ ಇದರಲ್ಲಿ ಪಾಲ್ಗೊಂಡು ಸದುಪಯೋಗಪಡಿಸಿಕೊಳ್ಳುವಂತೆ ಮನವಿ ಮಾಡಿದರು. ಮಿನಿ ಒಲಂಪಿಕ್ಸ್ ಮಾದರಿಯಲ್ಲಿ ಈ ಬಾರಿಯ ಮುದ್ದಂಡ ಕಪ್ ಹಾಕಿ ಉತ್ಸವ ನಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹಾಕಿ ಅಕಾಡೆಮಿಯ ಉಪಾಧ್ಯಕ್ಷ ಕುಕ್ಕೇರ ಜಯ ಚಿಣ್ಣಪ್ಪ ಮಾತನಾಡಿ, ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ, ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ, ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಒಡೆಯರ್, ವಿಧಾನ ಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ, ರಾಜ್ಯಸಭಾ ಸದಸ್ಯ ಅಜೆಯ್ ಮಾಕನ್, ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮತ್ತಿತರ ಪ್ರಮುಖರು ಪಾಲ್ಗೊಳ್ಳಲಿದ್ದಾರೆ ಎಂದರು.

ಮುದ್ದಂಡ ಹಾಕಿ ಹಬ್ಬದ ಅಧ್ಯಕ್ಷ ಮುದ್ದಂಡ ರಶಿನ್ ಸುಬ್ಬಯ್ಯ ಮಾತನಾಡಿ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ 2 ಮೈದಾನ ಹಾಗೂ ಪೊಲೀಸ್ ಕವಾಯತು ಮೈದಾನದಲ್ಲಿ ಪಂದ್ಯಾವಳಿಗಳನ್ನು ಆಯೋಜಿಸಲಾಗಿದ್ದು, ಗ್ಯಾಲರಿ ನಿರ್ಮಾಣದ ಕಾರ್ಯ ಆರಂಭಗೊಂಡಿದೆ. ಹಾಕಿ ಉತ್ಸವದ ಬೆಳ್ಳಿಹಬ್ಬದ ಸಂಭ್ರಮದ ಹಿನ್ನೆಲೆ ಹಾಕಿ ಪಂದ್ಯಾವಳಿಯೊಂದಿಗೆ ವಿಭಿನ್ನ ಕಾರ್ಯಕ್ರಮಗಳು ಕೂಡ ನಡೆಯಲಿವೆ ಎಂದರು.

ಕ್ರೀಡಾ ಜ್ಯೋತಿಯ ವಿಶೇಷ: ಈ ಬಾರಿ ವಿಶೇಷವಾಗಿ ಇದುವರೆಗೆ ಹಾಕಿ ಉತ್ಸವ ಆಯೋಜಿಸಿದ್ದ ಎಲ್ಲಾ ಕುಟುಂಬಗಳ ಐನ್ ಮನೆಗಳಿಗೆ ಮ್ಯಾರಥಾನ್ ಮೂಲಕ ಕ್ರೀಡಾ ಜ್ಯೋತಿಯನ್ನು ಕೊಂಡೊಯ್ಯಲಾಗುವುದು. ಮಾ.25ರಂದು ಬೆಳಗ್ಗೆ 8 ಗಂಟೆಗೆ ಕೊಡವ ಹಾಕಿ ಉತ್ಸವದ ಜನಕರಾದ ಕರಡ ಗ್ರಾಮದ ಪಾಂಡಂಡ ಕುಟುಂಬದ ಐನ್‌ಮನೆಯಲ್ಲಿ ಆರಂಭಗೊಳ್ಳಲಿರುವ ಮುದ್ದಂಡ ಹಾಕಿ ಉತ್ಸವದ ಕ್ರೀಡಾ ಜ್ಯೋತಿಯನ್ನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ಉದ್ಘಾಟಿಸಲಿದ್ದಾರೆ. ನಂತರ ಪೊನ್ನಂಪೇಟೆಯ 8 ಐನ್ ಮನೆಗಳನ್ನು ಕ್ರಮಿಸಿ, ಮಾ.26ರಿಂದ 28ರ ವರೆಗೆ ವಿವಿಧ ಐನ್‌ಮನೆಗಳಿಗೆ ಕ್ರೀಡಾ ಜ್ಯೋತಿ ಸಾಗಲಿದೆ. ಮಾ.28ರಂದು ಬೆಳಿಗ್ಗೆ 9 ಗಂಟೆಗೆ ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದಿಂದ ಮುಖ್ಯ ರಸ್ತೆಯ ಮೂಲಕ ಫೀ.ಮಾ. ಕೆ.ಎಂ. ಕಾರ್ಯಪ್ಪ ಕಾಲೇಜು ಮೈದಾನಕ್ಕೆ ಬೃಹತ್ ಮೆರವಣಿಗೆಯ ಮೂಲಕ ಕ್ರೀಡಾ ಜ್ಯೋತಿಯನ್ನು ಕೊಂಡೊಯ್ಯಲಾಗುವುದು. 4 ದಿನವೂ ಪ್ರಮುಖ ಮ್ಯಾರಥಾನ್ ಓಟಗಾರರು ಕ್ರೀಡಾ ಜ್ಯೋತಿಯೊಂದಿಗೆ ಓಡಲಿದ್ದಾರೆ ಎಂದು ರಶಿನ್ ಸುಬ್ಬಯ್ಯ ಮಾಹಿತಿ ನೀಡಿದರು.



ಮಹಿಳಾ ಹಾಕಿ ಸಂಭ್ರಮ: ಬೆಳ್ಳಿ ಮಹೋತ್ಸವದ ಸಂಭ್ರಮದ ಹಿನ್ನೆಲೆಯಲ್ಲಿ ಮುದ್ದಂಡ ಹಾಕಿ ಉತ್ಸವದಲ್ಲಿ ಮಹಿಳಾ ತಂಡಗಳ ನಡುವೆ ಹಾಕಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ. ಈಗಾಗಲೇ 30 ತಂಡಗಳು ನೋಂದಾಯಿಸಿಕೊಂಡಿದ್ದು, ನೋಂದಣಿಯ ಕೊನೆಯ ದಿನಾಂಕ ಏ.10 ಆಗಿರುವುದರಿಂದ ಮತ್ತಷ್ಟು ತಂಡಗಳು ಸೇರ್ಪಡೆಗೊಳ್ಳಲಿವೆ. 3ನೇ ಮೈದಾನದಲ್ಲಿ ಮಹಿಳಾ ಹಾಕಿ ಪಂದ್ಯಾವಳಿ ನಡೆಯಲಿದೆ ಎಂದರು. ಸೆಮಿಫೈನಲ್ ಸಂದರ್ಭ ಭಾರತೀಯ ಮಹಿಳಾ ಹಾಕಿ ತಂಡದ ನಾಯಕಿ ಲಾಲ್ ರಿಮ್ ಸಿಯಾಮಿ ಅವರು ಆಗಮಿಸಿ ಹಾಕಿ ಕ್ರೀಡೆಯ ಕುರಿತು ಮಾಹಿತಿ ನೀಡಲಿದ್ದಾರೆ. ಭಾರತೀಯ ಪುರುಷರ ಹಾಕಿ ತಂಡದ ನಾಯಕ ಹಾಗೂ ಒಲಂಪಿಯನ್ ಮನ್‌ಪ್ರೀತ್ ಸಿಂಗ್ ಕೂಡ ಪಂದ್ಯಾವಳಿಯ ಸಂದರ್ಭ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ತಂದ್–ಬೆಂದ್: ವಿಶೇಷವಾಗಿ ರಸಪ್ರಶ್ನೆ ಸ್ಪರ್ಧೆ ಮತ್ತು ತಂದ್–ಬೆಂದ್ (ವಧು–ವರರ ಅನ್ವೇಷಣೆ) ಕಾರ್ಯಕ್ರಮವನ್ನು ಪಂದ್ಯಾವಳಿ ನಡೆಯುವ ಮೈದಾನದ ಆವರಣದಲ್ಲಿ ಆಯೋಜಿಸಲಾಗುತ್ತಿದೆ. ಏ.26 ರಂದು ಸೈಕ್ಲೋಥಾನ್ ನಗರದಲ್ಲಿ ನಡೆಯಲಿದೆ. ಕ್ವಾರ್ಟರ್ ನಡೆಯುವ ದಿನದಿಂದ ಅಂತಿಮ ಪಂದ್ಯಾವಳಿ ದಿನದವರೆಗೂ ಡಿ.ಜೆ ಕಾರ್ಯಕ್ರಮ ಮನರಂಜಿಸಲಿದೆ. ನಗರದ ಫೀ.ಮಾ.ಕಾರ್ಯಪ್ಪ ವೃತ್ತದಿಂದ ಮುಕ್ತ 'ಮಜಾ ರನ್' ನಡೆಯಲಿದೆ. ಅಂತಿಮ ದಿನದ ಸಮಾರಂಭದ ಸಂದರ್ಭ ಆಕರ್ಷಕ ಸಿಡಿಮದ್ದುಗಳ ಪ್ರದರ್ಶನವಿರುತ್ತದೆ. ಸುಮಾರು 2 ಸಾವಿರ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಬೆಂಗಳೂರಿನ ವಂದನಾ ಟ್ರಸ್ಟ್ ಸಂಸ್ಥೆ ಪ್ಲಾಸ್ಟಿಕ್ ಸೇರಿದಂತೆ ಇನ್ನಿತರ ತ್ಯಾಜ್ಯಗಳ ನಿರ್ವಹಣೆಯನ್ನು ಮಾಡಲಿದೆ ಎಂದರು.

ಮುದ್ದಂಡ ಒಕ್ಕದ ಕಾರ್ಯದರ್ಶಿ ಮುದ್ದಂಡ ರಾಯ್ ತಮ್ಮಯ್ಯ ಮಾತನಾಡಿ ಮುಕ್ತ ಶೂಟಿಂಗ್ ಸ್ಪರ್ಧೆಯ ವಿವರ ನೀಡಿದರು. ಏ.20ರಂದು ಮೈದಾನ ಎರಡರಲ್ಲಿ ಶೂಟಿಂಗ್ ಸ್ಪರ್ಧೆ ಮೂರು ವಿಭಾಗಗಳಲ್ಲಿ ನಡೆಯಲಿದೆ. 50 ಮೀಟರ್ ನಿಗದಿತ ಗುರಿಯ ಪಾಯಿಂಟ್ 22 ಶೂಟಿಂಗ್ ಸ್ಪರ್ಧೆ, 30 ಮೀಟರ್ ಅಂತರದ 12 ಬೋರ್ ಬಂದೂಕಿನಿಂದ ಗುರಿ ಹಿಡಿಯುವ ಹಾಗೂ 15 ಮೀ. ದೂರದ ಮೊಟ್ಟೆಗೆ ಗುಂಡಿಕ್ಕುವ ಏರ್ ರೈಫಲ್ ಶೂಟಿಂಗ್ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ಕೂಡ ನಡೆಯಲಿದೆ ಎಂದು ತಿಳಿಸಿದರು. ಇಲ್ಲಿಯವರೆಗೆ ಕೊಡವ ಹಾಕಿ ಉತ್ಸವವನ್ನು ಆಯೋಜಿಸಿದ 24 ಕುಟುಂಬಗಳನ್ನು ಸ್ಮರಿಸುವ ಮತ್ತು ಗೌರವದಿಂದ ಕಾಣುವ ಉದ್ದೇಶದಿಂದ ಈ ಬಾರಿ ಕ್ರೀಡಾ ಜ್ಯೋತಿಯನ್ನು ಕೊಂಡೊಯ್ಯಲಾಗುತ್ತಿದೆ. ಈ ಕುಟುಂಬಗಳ ಐನ್‌ಮನೆಗಳಿಗೆ ತೆರಳಿ ನೆಲ್ಲಕ್ಕಿ ಬೆಳಕಿನಿಂದ ಕ್ರೀಡಾ ಜ್ಯೋತಿಗೆ ಬೆಳಕು ಪಡೆಯಲಿದ್ದೇವೆ ಎಂದರು.

ಮುದ್ದಂಡ ಒಕ್ಕದ ಅಧ್ಯಕ್ಷ ಮುದ್ದಂಡ ಬಿ.ದೇವಯ್ಯ ಮಾತನಾಡಿ, ಮಾ.28ರಂದು ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದಿಂದ ಫೀ.ಮಾ.ಕೆ.ಎಂ.ಕಾರ್ಯಪ್ಪ ಮೈದಾನದವರೆಗೆ ನಡೆಯುವ ಬೃಹತ್ ಮೆರವಣಿಗೆಯಲ್ಲಿ ಸರ್ವರೂ ಪಾಲ್ಗೊಳ್ಳುವಂತೆ ಮನವಿ ಮಾಡಿದರು. ಜಿಲ್ಲೆ ಮಾತ್ರವಲ್ಲದೆ ಹೊರ ಜಿಲ್ಲೆಗಳ ಎಲ್ಲಾ ಕೊಡವ ಸಮಾಜಗಳು ಹಾಗೂ ಕೊಡವ ಕೇರಿಗಳ ಸಹಕಾರವನ್ನು ಪಡೆಯಲಾಗಿದೆ. ಹಾಕಿ ಉತ್ಸವ ಯಾವುದೇ ಅಡ್ಡಿ ಆತಂಕವಿಲ್ಲದೆ ಯಶಸ್ವಿಯಾಗಿ ನಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿದೇಶಿ ಪ್ರವಾಸಿಗರಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಿ

ಹೋಟೆಲ್, ರೆಸಾರ್ಟ್, ಹೋಂಸ್ಟೇ ಮಾಲೀಕರಿಗೆ ಎಸ್‌ಪಿ ಸೂಚನೆ

ಮಡಿಕೇರಿ,ಮಾ.15– ವಿದೇಶಿ ಪ್ರವಾಸಿಗರ ಭೇಟಿ ಸಂದರ್ಭ ಕಾನೂನು ಉಲ್ಲಂಘನೆಯಾಗದಂತೆ ನೋಡಿಕೊಳ್ಳುವಂತೆ ಹೋಟೆಲ್, ರೆಸಾರ್ಟ್, ಹೋಂಸ್ಟೇ ಮಾಲೀಕರುಗಳಿಗೆ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಸೂಚನೆ ನೀಡಿದ್ದಾರೆ.

ಮಡಿಕೇರಿ ನಗರದ ಮೈತ್ರಿ ಪೊಲೀಸ್ ಸಮುದಾಯ ಭವನದಲ್ಲಿ ಮಡಿಕೇರಿ ನಗರ, ಸುತ್ತಮುತ್ತಲ ಹೋಟೆಲ್, ರೆಸಾರ್ಟ್ ಮತ್ತು ಹೋಂ ಸ್ಟೇ ಮಾಲೀಕರುಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರವಾಸಿಗರ ತಾಣವಾಗಿರುವ ಮಡಿಕೇರಿ ನಗರಕ್ಕೆ ಅಸಂಖ್ಯಾತ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಪ್ರವಾಸಿಗರಿಗೆ ಆತಿಥ್ಯವನ್ನು ಒದಗಿಸುವ ಸಮಯದಲ್ಲಿ ಪಡೆದುಕೊಳ್ಳಬೇಕಾದ ದಾಖಲೆಗಳು, ನಿರ್ವಹಿಸಬೇಕಾದ ದಾಖಲೆಗಳು, ವಿದೇಶಿ ಪ್ರವಾಸಿಗರ ಭೇಟಿಯ ಸಮಯದಲ್ಲಿ ಕಾನೂನು ಪ್ರಕಾರ ನಡೆಸಬೇಕಾದ ನೋಂದಣಿ ಪ್ರಕ್ರಿಯೆಗಳ ಕುರಿತು ಮಾಹಿತಿ ನೀಡಲಾಯಿತು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೆ.ಎಸ್.ಸುಂದರ್ ರಾಜ್, ಮಡಿಕೇರಿ ನಗರದ ಪೊಲೀಸ್ ಅಧಿಕಾರಿಗಳು ಮತ್ತು ಹೋಟೆಲ್, ರೆಸಾರ್ಟ್, ಹೋಂಸ್ಟೇ ಮಾಲೀಕರುಗಳ ಸಂಘಗಳ ಪದಾಧಿಕಾರಿಗಳು, ಮಾಲೀಕರು ಉಪಸ್ಥಿತರಿದ್ದರು.



ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾತನಾಡುತ್ತಿರುವುದು.

ಮಾ.19, ಅಂಚೆ ಅದಾಲತ್

ಮಡಿಕೇರಿ: ಅಂಚೆ ಅದಾಲತ್ ಸಭೆಯು ಮಾ.19ರಂದು ಬೆಳಗ್ಗೆ 11 ಗಂಟೆಗೆ ಕೊಡಗು ಅಂಚೆ ವಿಭಾಗದ ವಿಭಾಗೀಯ ಕಚೇರಿ ವತಿಯಿಂದ ಸಿದ್ದಾಪುರ ರಸ್ತೆಯಲ್ಲಿರುವ ಅಶೋಕ್‌ಪುರದಲ್ಲಿ ನಡೆಯಲಿದೆ.

ಸಭೆಯಲ್ಲಿ ಕೊಡಗು ಅಂಚೆ ವಿಭಾಗದ ಅಂಚೆ ಸೇವೆಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಿ ಚರ್ಚಿಸಲಾಗುತ್ತದೆ.

ಮಾ.29 ರಿಂದ ಅಮ್ಮತ್ತಿಯಲ್ಲಿ ಕೊಡವ ಬಲ್ಯ ನಮ್ಮೆ ಕಾರ್ಯಕ್ರಮ

ಮಡಿಕೇರಿ,ಮಾ.15– ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ಇದೇ ಮಾ.29 ಮತ್ತು 30ರಂದು ಅಮ್ಮತ್ತಿ ಕೊಡವ ಸಮಾಜದಲ್ಲಿ, ವೈವಿಧ್ಯಮಯ ಕಾರ್ಯಕ್ರಮ, ವಿಚಾರಗೋಷ್ಠಿ, ಗೌರವ ಪ್ರಶಸ್ತಿ, ಪುಸ್ತಕ ಪ್ರಶಸ್ತಿ ಪ್ರದಾನವನ್ನು ಒಳಗೊಂಡಂತೆ 'ಕೊಡವ ಬಲ್ಯ ನಮ್ಮೆ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಅಮ್ಮತ್ತಿ ಕೊಡವ ಸಮಾಜದ ಸಹಯೋಗದಲ್ಲಿ ಆಯೋಜಿತ ಬಲ್ಯನಮ್ಮೆಯ ಯಶಸ್ಸಿಗಾಗಿ ಈಗಾಗಲೇ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಉಪ ಸಮಿತಿಗಳನ್ನು ರಚಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಬಲ್ಯ ನಮ್ಮೆಯಂದು ಬೆಳಗ್ಗೆ 9 ಗಂಟೆಗೆ ಅಮ್ಮತ್ತಿಯ ಹೊಸೂರು ಜಂಕ್ಷನ್‌ನಿಂದ ಕೊಡವ ಸಮಾಜದವರೆಗೆ ಕೊಡವ ಸಾಂಸ್ಕೃತಿಕ–ಜಾನಪದ ಮೆರವಣಿಗೆ ನಡೆಯಲಿದೆ. ಬೆ.10 ಗಂಟೆಗೆ ಬಲ್ಯ ನಮ್ಮೆಯ ಸಭಾ ಕಾರ್ಯಕ್ರಮವನ್ನು ಅಮ್ಮತ್ತಿ ಕೊಡವ ಸಮಾಜದ ಅಧ್ಯಕ್ಷ ಐನಂಡ ಪ್ರಕಾಶ್ ಗಣಪತಿ ಉದ್ಘಾಟಿಸಲಿದ್ದು, ಜಿಲ್ಲೆಯ ಶಾಸಕರನ್ನು ಒಳಗೊಂಡಂತೆ ಅತಿಥಿ ಗಣ್ಯರು ಪಾಲ್ಗೊಳ್ಳಲಿದ್ದಾರೆ. 'ಪಟ್ಟೋಲೆ ಪಳಮೆ'ಯ ನಡಿಕೇರಿಯಂಡ ಚಿಣ್ಣಪ್ಪ ಅವರ ಜ್ಞಾಪಕಾರ್ಥವಾಗಿ ನಡೆಸುವ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ 9 ಮಂದಿ ಸಾಹಿತಿಗಳು ರಚಿಸಿದ ಪುಸ್ತಕಗಳನ್ನು ಅನಾವರಣಗೊಳಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.



'ಕೊಡವ ಬಲ್ಯ ನಮ್ಮೆ' ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಅಕಾಡೆಮಿ ಗೌರವ ಪ್ರಶಸ್ತಿ: ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯಿಂದ 2022–23 ಮತ್ತು 2023–24ನೇ ವರ್ಷದ ಗೌರವ ಪ್ರಶಸ್ತಿ ಹಾಗೂ ಪುಸ್ತಕ ಪ್ರಶಸ್ತಿಗಳನ್ನು ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಘೋಷಿಸಿದರು. ಕೊಡವ ಸಂಸ್ಕೃತಿ, ಪಾಟ್–ಪಡಿಪು ಕ್ಷೇತ್ರದಿಂದ ಕೋಡಿಮಣಿಯಂಡ ತಮ್ಮುಣಿ ಬೋಪಯ್ಯ, ಕೊಡವ ಆಟ್–ಪಾಟ್, ಸಂಸ್ಕೃತಿ ಕ್ಷೇತ್ರದಿಂದ ಚೀಯಕಪೂವಂಡ ಬಿ.ದೇವಯ್ಯ ಮತ್ತು ಜನ ಸೇವಾ ಕ್ಷೇತ್ರದಿಂದ ಹೀರಕುಟ್ಟಡ ಟಸ್ಸಿ ಸದನ್ ಅವರಿಗೆ ಗೌರವ ಪ್ರಶಸ್ತಿಗಳನ್ನು ಕೊಡಮಾಡಲಾಗುತ್ತಿದೆ ಎಂದರು.

2023–24ನೇ ಸಾಲಿಗೆ ಸಂಬಂಧಿಸಿದಂತೆ ಕೊಡವ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಿಂದ ಕಾಟಿಮಾಡ ಜಿಮ್ಮಿ ಅಣ್ಣಯ್ಯ, ಕೊಡವ ಜಾನಪದ ಕ್ಷೇತ್ರದಿಂದ ಚೇನಂಡ ರಘು ಉತ್ತಪ್ಪ ಮತ್ತು ದಾನ–ಧರ್ಮ, ಸಮಾಜ ಸೇವಾ ಕ್ಷೇತ್ರದಿಂದ ಕೈಬುಲಿರ ಪಾರ್ವತಿ ಬೋಪಯ್ಯ, ಗೌರವ ಪ್ರಶಸ್ತಿಗಳಿಗೆ ಆಯ್ಕೆಯಾಗಿರುವುದಾಗಿ ಮಾಹಿತಿ ನೀಡಿದರು.

ಪುಸ್ತಕ ಪ್ರಶಸ್ತಿ: ಪುಸ್ತಕ ಪ್ರಶಸ್ತಿಗಳಿಗೆ ಮಚ್ಚಮಾಡ ಲಾಲ ಕುಟ್ಟಪ್ಪ ರಚಿಸಿದ 'ಮೂಪಾಜಿ ನಿಗಂಟ್', ಐಚಂಡ ರಶ್ಮಿ ಮೇದಪ್ಪನವರ 'ಸಾಂಸ್ಕೃತಿರ ಪಿಞ್ಞ ಧಾರ್ಮಿಕ ಹಿನ್ನಲೆಲ್ ಕೊಡವಡ ಐನ್‌ಮನೆ' ಅಧ್ಯಯನ ಗ್ರಂಥ, ಕೊಟ್ಟ್‌ಕತ್ತಿರ ಪ್ರಕಾಶ್ ಕಾರ್ಯಪ್ಪರ 'ನಾಡ ಕೊಡಗ್(ಕಾದಂಬರಿ)' ಹಾಗೂ ಚೊಟ್ಟೆಯಂಡ ಲಲಿತ ಕಾರ್ಯಪ್ಪ 'ಅಗ್ಗೇನ' ಎಂಬ ಪುಸ್ತಕಕ್ಕೆ ಪುಸ್ತಕ ಪ್ರಶಸ್ತಿಯನ್ನು ನೀಡಲಾಗುವುದೆಂದು ತಿಳಿಸಿದರು. ಅಕಾಡೆಮಿ ಗೌರವ ಪ್ರಶಸ್ತಿ ಮತ್ತು ಪುಸ್ತಕ ಪ್ರಶಸ್ತಿಗಳನ್ನು ಮಾ.30, ಅಮ್ಮತ್ತಿಯಲ್ಲಿ ಆಯೋಜಿಸಲಾಗಿರುವ ಕೊಡವ ಬಲ್ಯ ನಮ್ಮೆಯಲ್ಲಿ ವಿತರಿಸಲಾಗುತ್ತದೆ ಎಂದರು.

ಮಾ.30, ಬೆಳಗ್ಗೆ 11 ಗಂಟೆಗೆ ಅಕಾಡೆಮಿ ಗೌರವ ಪ್ರಶಸ್ತಿ, ಪುಸ್ತಕ ಪ್ರಶಸ್ತಿ ಮತ್ತು ದುಡಿ–ತಾಳ ವಿತರಣಾ ಕಾರ್ಯಕ್ರಮ ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕನಸಿನ ಕೂಸು

ಇಂದಿರಾ ಕ್ಯಾಂಟೀನ್‌ಗೆ ಚಾ.ನಗರದಲ್ಲಿ ಗ್ರಹಣ

ಚಾಮರಾಜನಗರ, ಮಾ.15–ಹಸಿವಿನಿಂದ ಯಾರೂ ಬಳಲಬಾರದು ಎಂಬ ಉದ್ದೇಶದಿಂದ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಜನಪ್ರಿಯ ಯೋಜನೆಗಳಲ್ಲಿ ಒಂದಾದ ಇಂದಿರಾ ಕ್ಯಾಂಟೀನ್ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಕಳೆದ ಒಂದೆರಡು ವಾರಗಳಿಂದ ಸ್ಥಗಿತಗೊಂಡಿದೆ.

ಜಿಲ್ಲೆಯ ಚಾಮರಾಜನಗರ, ಯಳಂದೂರು, ಗುಂಡ್ಲುಪೇಟೆ ತಾಲೂಕು ಕೇಂದ್ರಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ಬೀಗ ಹಾಕಲಾಗಿದೆ. ಹನೂರಿನಲ್ಲಿ ಇಂದಿರಾ ಕ್ಯಾಂಟೀನ್‌ನ ನೂತನ ಕಟ್ಟಡ ನಿರ್ಮಾಣವಾಗಿದ್ದರೂ ಇನ್ನೂ ಉದ್ಘಾಟನೆಗೊಂಡಿಲ್ಲ. ಹೀಗಾಗಿ, ಈ ಕ್ಯಾಂಟೀನ್ ಅನ್ನು ಅವಲಂಬಿಸಿರುವ ಬಡ ಕೂಲಿ ಕಾರ್ಮಿಕರು ಸಮಸ್ಯೆ ಅನುಭವಿಸುವಂತಾಗಿದೆ. ಕೊಳ್ಳೇಗಾಲದ ಉಪವಿಭಾಗ ಆಸ್ಪತ್ರೆಯ ಬಳಿಯ ಕ್ಯಾಂಟೀನ್ ಮಾತ್ರ ಕಾರ್ಯ ನಿರ್ವಹಿಸುತ್ತಿದೆ.

ಚಾಮರಾಜನಗರ ಜಿಲ್ಲಾ ಕೇಂದ್ರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ಇಂದಿರಾ ಕ್ಯಾಂಟೀನ್ ಜಿಲ್ಲಾಡಳಿತ ಭವನ, ಮಹಿಳಾ ಪ್ರಥಮ ದರ್ಜೆ ಕಾಲೇಜು, ಎಸ್‌ಪಿ ಕಚೇರಿ, ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗೆ ಸಮೀಪದಲ್ಲಿದ್ದು, ಕ್ಯಾಂಟೀನ್‌ಗೆ ಬೀಗ ಹಾಕಿರುವುದರಿಂದ ಜಿಲ್ಲಾಡಳಿತ ಭವನಕ್ಕೆ ಬರುವ ಹಳ್ಳಿಗಾಡಿನ ಜನರು, ಕೂಲಿ ಕಾರ್ಮಿಕರು, ಶಾಲಾ– ಕಾಲೇಜು ವಿದ್ಯಾರ್ಥಿಗಳು, ಆಸ್ಪತ್ರೆಗೆ ಬರುವ ರೋಗಿಯ ಸಂಬಂಧಿಕರು ಊಟ, ತಿಂಡಿಗೆ ಹೆಚ್ಚಿನ ಹಣ ನೀಡುವಂತಾಗಿದೆ.

ಗುಂಡ್ಲುಪೇಟೆ ತಾಲೂಕು ಕೇಂದ್ರದ ರಾಷ್ಟ್ರೀಯ ಹೆದ್ದಾರಿ 766ರ ಪ್ರವಾಸಿ ಮಂದಿರ ಬಳಿಯ ಇಂದಿರಾ ಕ್ಯಾಂಟೀನ್ ಕೂಡ ಕೂಲಿ ಕಾರ್ಮಿಕರು, ಮಧ್ಯಮ ವರ್ಗದ ಜನರಿಗೆ ಅನುಕೂಲವಾಗಿತ್ತು.

ಯಳಂದೂರಿನ ಪಟ್ಟಣ ಪಂಚಾಯಿತಿ ಬಳಿಯಲ್ಲಿದ್ದ ಕ್ಯಾಂಟೀನ್ ಪಟ್ಟಣದ ತಾಲೂಕು ಆಸ್ಪತ್ರೆ, ಶಾಲಾ– ಕಾಲೇಜುಗಳಿಗೆ ಸಮೀಪದಲ್ಲಿದ್ದರಿಂದ ಸಾಕಷ್ಟು ಜನರಿಗೆ ಕಡಿಮೆ ಹಣದಲ್ಲಿ ಹೊಟ್ಟೆ ತುಂಬ ಊಟ ದೊರೆಯುತ್ತಿತ್ತು. ಆದರೆ, ಕ್ಯಾಂಟೀನ್‌ಗೆ ಬೀಗ ಹಾಕಿರುವುದು ಸಮಸ್ಯೆಯನ್ನು ಉಂಟು ಮಾಡಿದೆ.



ಕಡಿಮೆ ಬೆಲೆಯಲ್ಲಿ ಬೆಳಗಿನ ತಿಂಡಿ, ಮಧ್ಯಾಹ್ನ ಹಾಗೂ ರಾತ್ರಿ ಊಟವನ್ನು ನೀಡುವ ಉದ್ದೇಶದಿಂದ ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಇಂದಿರಾ ಕ್ಯಾಂಟೀನ್ ಯೋಜನೆಯನ್ನು ಪ್ರಾರಂಭಿಸಿದ್ದರು. ಮತ್ತೆ ಎರಡನೇ ಅವಧಿಗೆ ಮುಖ್ಯಮಂತ್ರಿಯಾದ ಸಿದ್ದರಾಮಯ್ಯ ಅವರು ಈ ಯೋಜನೆ ಮುಂದುವರಿಸಿದ್ದರು. ಬೆಳಗ್ಗೆ 5 ರೂ.ಗೆ ತಿಂಡಿ, ಮಧ್ಯಾಹ್ನ ಹಾಗೂ ರಾತ್ರಿ 10 ರೂ.ಗೆ ಊಟವನ್ನು ಒದಗಿಸಲಾಗುತ್ತಿದ್ದ ಇಂದಿರಾ ಕ್ಯಾಂಟೀನ್‌ಗಳು ಜಿಲ್ಲೆಯಲ್ಲಿ ಒಂದೆರಡು ವಾರಗಳಿಂದ ಮುಚ್ಚಲಾಗಿದೆ.

ಹನೂರು ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯ ಸರ್ಕಾರಿ ಪ್ರಾಥಮಿಕ ಶಾಲಾವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಇಂದಿರಾ ಕ್ಯಾಂಟೀನ್ ಕಟ್ಟಡ ಉದ್ಘಾಟನೆಗೆ ಇನ್ನೂ ದಿನಾಂಕ ನಿಗದಿಯಾಗಿಲ್ಲ. ಶೀಘ್ರದಲ್ಲೇ ಕಟ್ಟಡ ಉದ್ಘಾಟನೆಗೊಂಡು ಕಡಿಮೆ ದರದಲ್ಲಿ ಊಟ–ತಿಂಡಿ ಹನೂರಿನಲ್ಲೂ ದೊರೆಯಲಿದೆ ಎಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ.

ಸರ್ಕಾರದಿಂದ ನಮಗೆ ಬಿಲ್ ಪಾವತಿಯಾಗಿಲ್ಲ ಎಂದು ಹಿಂದಿನ ಕ್ಯಾಂಟೀನ್ ನಿರ್ವಹಣೆ ಹೊತ್ತವರ ಆರೋಪವಾದರೇ, ಟೆಂಡರ್ ಅವಧಿ ಮುಕ್ತಾಯವಾಗಿದೆ. ಹೀಗಾಗಿ, ಹೊಸ ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತಿದ್ದು, ಶೀಘ್ರವೇ ಕ್ಯಾಂಟೀನ್ ಪುನಾರಂಭಿಸಲಾಗುವುದು ಎಂಬುದು ಅಧಿಕಾರಿಗಳ ಉತ್ತರವಾಗಿದೆ.

ಒಟ್ಟಾರೆ ಬಡವರು, ಕೂಲಿ ಕಾರ್ಮಿಕರನ್ನು ಗುರಿಯಾಗಿಸಿಕೊಂಡು ಈ ಕ್ಯಾಂಟೀನ್‌ಗಳನ್ನು ತೆರೆಯಲಾಗಿತ್ತು. ಕೇವಲ 25 ರೂ.ಗಳಿಗೆ ಒಬ್ಬರ ಇಡೀ ದಿನದ ಊಟ– ತಿಂಡಿ ಮುಗಿದು ಹೋಗುತ್ತಿತ್ತು ಆದರೀಗ ಕ್ಯಾಂಟೀನ್ ಬಂದ್ ಆಗಿದ್ದು, ಅವಲಂಬಿತರಿಗೆ ಸಮಸ್ಯೆ ಉಂಟಾಗಿದೆ.

ಹನೂರಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಹನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮಹಿಳಾ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಮಾ.15– ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚೆಗೆ ಹಮ್ಮಿಕೊಳ್ಳಲಾಗಿತ್ತು.

ಆಂತರಿಕ ಗುಣಮಟ್ಟ ಭರವಸಾ ಕೋಶ, ಮಹಿಳಾ ಕೋಶ, ರೇಂಜರ್ಸ್ ಮತ್ತು ರೋವರ್ಸ್ ಹಾಗೂ ಎನ್‌ಎಸ್‌ಎಸ್ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಕೊಳ್ಳೇಗಾಲದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಸಫೀನಾ ಬಾನು ಅವರು ಮಾತನಾಡಿ, ಮಹಿಳೆಯರ ಆರ್ಥಿಕ ಸ್ವಾವಲಂಬನೆಯ ಪ್ರಾಮುಖ್ಯತೆಯನ್ನು ಹಾಗೂ ವರ್ತಮಾನದ ಅಗತ್ಯತೆಗಳ ಅನುಸಾರ ವ್ಯಕ್ತಿತ್ವ ಮತ್ತು ಕೌಶಲಗಳನ್ನು ಅಳವಡಿಸಿಕೊಂಡು ಉತ್ತಮ ಬದುಕಿನ ಕಡೆಗೆ ಗಮನ ವಹಿಸಬೇಕೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್.ಚಂದ್ರಮ್ಮ ವಹಿಸಿದ್ದರು. ಇದೇ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಏರ್ಪಡಿಸಲಾಗಿದ್ದ ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಿಸಲಾಯಿತು. ಕಾಲೇಜಿನ ಮಹಿಳಾ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

ಐ.ಕ್ಯೂ.ಎ.ಸಿ ಸಂಚಾಲಕರಾದ ಮನೋಜ್‌ಕುಮಾರ್, ಮಹಿಳಾ ಕೋಶದ ಸಂಚಾಲಕರಾದ ಪ್ರೊ.ಲಕ್ಷ್ಮಿ, ಬಸವಣ್ಣಿ ಪನ್ಯಾಗೋಳ್, ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿ ಪ್ರೊ.ಎಂ.ಪಿ.ಯಶವಂತ್, ಉಪನ್ಯಾಸಕಿ ಉಮಾ ಉಪಸ್ಥಿತರಿದ್ದರು.

ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮವಹಿಸಿ

ಅಧಿಕಾರಿಗಳಿಗೆ ಹನೂರು ಶಾಸಕ ಮಂಜುನಾಥ್ ಸೂಚನೆ



ಮಂಜುನಾಥ್

ಕೊಳ್ಳೇಗಾಲ: ಬೇಸಿಗೆ ಪ್ರಾರಂಭವಾಗಿದ್ದು ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಆಗದಂತೆ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ಅಧಿಕಾರಿಗಳಿಗೆ ಹನೂರು ಶಾಸಕ ಎಂ.ಆರ್.ಮಂಜುನಾಥ್ ಹೇಳಿದರು

ತಾಲೂಕು ಪಂಚಾಯ್ತಿಯಲ್ಲಿ ಕರೆಯಲಾಗಿದ್ದ ಅಧಿಕಾರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಹನೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ ಆಗದಂತೆ ಅಧಿಕಾರಿಗಳು ಜಾಗೃತರಾಗಬೇಕು. ಸಮಸ್ಯೆ ಕಂಡು ಬಂದಲ್ಲಿ ತುರ್ತಾಗಿ ಸ್ಪಂದಿಸಬೇಕು ಎಂದು ಸೂಚಿಸಿದರು. ಕೊಳ್ಳೇಗಾಲ ತಾಲೂಕು ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಸದ್ಯ ಕುಡಿಯುವ ನೀರಿನ ಸಮಸ್ಯೆ ಇಲ್ಲ. ಈ ಭಾಗದಲ್ಲೂ ಸಹ ಸಮಸ್ಯೆ ಕಂಡು ಬಂದಲ್ಲಿ ಅಧಿಕಾರಿಗಳು ಸಮಸ್ಯೆ ನಿವಾರಣೆಗೆ ಸಜ್ಜಾಗಿದ್ದಾರೆ ಎಂದರು.

ಬೇಸಿಗೆ ಹಿನ್ನೆಲೆ ಕಾಡಂಚಿನ ಗ್ರಾಮಗಳಿಗೆ ಬೆಂಕಿ ತಗಲದಂತೆ ಅಧಿಕಾರಿಗಳು ಕ್ರಮವಹಿಸಬೇಕು ಎಂದರಲ್ಲದೆ, ಪ್ರತಿ ಗ್ರಾಮ ಪಂಚಾಯಿತಿಯ ಪ್ರತಿ ಗ್ರಾಮಗಳಲ್ಲಿ ಇರುವ ಸಮಸ್ಯೆಗಳನ್ನು ನಕ್ಷೆ ಮೂಲಕ ತೋರಿಸಿ ಅವುಗಳನ್ನು ಸರಿಪಡಿಸಿ ಕ್ರಮವಹಿಸುವ ಕುರಿತು ಶಾಸಕರು ತಾಕೀತು ಮಾಡಿದರು. ಇದೆ ವೇಳೆ ಶಾಸಕರು 2023–24 ನೇ ಸಾಲಿನ ತಾ.ಪಂ. ವಿಕಲಚೇತನರ ಶೇ.5 ರಷ್ಟು ಅನುದಾನದಲ್ಲಿ 9 ಮಂದಿ ವಿಕಲಚೇತನ ಫಲಾನುಭವಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಿಸಿದರು.

ಸಂದರ್ಭದಲ್ಲಿ ತಹಸೀಲ್ದಾರ್ ಬಸವರಾಜು, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಗುರುಶಾಂತಪ್ಪ ಬೆಳ್ಳುಂಡಗಿ ಇನ್ನಿತರರಿದ್ದರು.

ಮಾ.18ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಗುಂಡ್ಲುಪೇಟೆ ಉಪವಿಭಾಗ ವ್ಯಾಪ್ತಿ ಕಾಮಗಾರಿ ನಿಮಿತ್ತ ಮಾ.18 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಬೇಳವಾಡಿ, ಬಾಚಳ್ಳಿ, ಬೊಮ್ಮಲಾಪುರ, ದಾರಿಬೇಗೂರು, ಕೊಡಸೋಗೆ, ಹೆಗ್ಗವಾಡಿ, ಹಂಗಳ, ಶಿವಪುರ, ಕಲಿಗೌಡನಹಳ್ಳಿ ಎನ್.ಜೆ.ವೈ, ಎಲಚಟ್ಟಿ, ಗೋಪಾಲಪುರ ಎನ್.ಜೆ.ವೈ, ದೇವರಹಳ್ಳಿ, ಹೊನ್ನೇಗೌಡನಹಳ್ಳಿ, ಮಲ್ಲಯ್ಯನಪುರ, ಹೊಂಗಹಳ್ಳಿ ಐಪಿ, ಮುಂಟಿಪುರ ಐಪಿ, ಹೆಚ್.ಎಸ್.ಹುಂಡಿ ಎನ್.ಜೆ.ವೈ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಿಮ್ಸ್ ನರ್ಸಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ



ಸಿಮ್ಸ್ ನರ್ಸಿಂಗ್ ಕಾಲೇಜಿನ 5ನೇ ಬ್ಯಾಚ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಕಾರ್ಯಕ್ರಮ ನಡೆಯಿತು.

ಚಾಮರಾಜನಗರ, ಮಾ.15– ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧನಾ ಆಸ್ಪತ್ರೆಯ ಸಿಮ್ಸ್ ನರ್ಸಿಂಗ್ ಕಾಲೇಜಿನ 5ನೇ ಬ್ಯಾಚ್ ವಿದ್ಯಾರ್ಥಿಗಳಿಗೆ ದೀಪ ಬೆಳಗುವಿಕೆ ಮತ್ತು ಪ್ರತಿಜ್ಞಾವಿಧಿ ಕಾರ್ಯಕ್ರಮ ನಡೆಯಿತು.

ಸಿಮ್ಸ್ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಚಾಮರಾಜನಗರ ವಿಶ್ವವಿದ್ಯಾನಿಲಯ ಉಪಕುಲಪತಿಗಳಾದ ಎಂ.ಆರ್. ಗಂಗಾಧರ್ ಅವರು, ನರ್ಸಿಂಗ್ ಸೇವಾ ಮನೋಭಾವನೆಯುಳ್ಳ ಶ್ರೇಷ್ಠ ಹುದ್ದೆಯಾಗಿದೆ. ಇದನ್ನು ಶ್ರದ್ಧೆಯಿಂದ ನಿರ್ವಹಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಹಾಗೂ ನಿರ್ದೇಶಕರಾದ ಡಾ. ಹೆಚ್.ಜಿ.ಮಂಜುನಾಥ್ ಅವರು ಶುಭ ಹಾರೈಸಿದರು. ವಿಶೇಷ ಆಹ್ವಾನಿತರಾಗಿದ್ದ ನಿವೃತ್ತ ಸಹಾಯಕ ನರ್ಸಿಂಗ್ ನಿರ್ದೇಶಕಿ ಸಿ.ಶಿವಮ್ಮ ಅವರು ನರ್ಸಿಂಗ್ ವೃತ್ತಿಯ ವಿಶೇಷತೆಗಳು ಮತ್ತು ಶಿಸ್ತುಪಾಲನೆಯ ಕುರಿತು ತಿಳಿಸಿದರು.

ಇದೇ ವೇಳೆ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಸಿಮ್ಸ್ ಮುಖ್ಯ ಆಡಳಿತಾಧಿಕಾರಿ ನಂಜುಂಡೇಗೌಡ, ನಿವಾಸಿ ವೈದ್ಯಾಧಿಕಾರಿಗಳಾದ ಡಾ. ಎಂ. ಮಹೇಶ್, ಹಿರಿಯ ಶುಶ್ರೂಷಣಾಧಿಕಾರಿ ಮಹದೇವಮ್ಮ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕೋಟೆಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

ಕಾಂಗ್ರೆಸ್ ಬೆಂಬಲಿತರ ಭರ್ಜರಿ ಜಯ

ಬೇಗೂರು, ಮಾ.15– ಸಮೀಪದ ಕೋಟೆಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತರು ಭರ್ಜರಿ ಗೆಲುವು ಸಾಧಿಸಿದ್ದು, ಬಿಜೆಪಿ ಬೆಂಬಲಿತ ಅಭ್ಯರ್ಥಿಯೋರ್ವ ಗೆಲುವು ಸಾಧಿಸಿದ್ದಾರೆ.

ಸಾಲಗಾರರ ಸಾಮಾನ್ಯ ಕ್ಷೇತ್ರದಿಂದ ಕಾಂಗ್ರೆಸ್‌ನ ಶೇಖರ, ಪುಟ್ಟಸ್ವಾಮಿ, ಬಸಪ್ಪದೇವರು, ಸದಾಶಿವಪ್ಪ(ಸದಾ), ಹಿಂದುಳಿದ ವರ್ಗ(ಎ) ಕ್ಷೇತ್ರದಿಂದ ರಾಮೇಗೌಡ, ಹಿಂದುಳಿದ ವರ್ಗ(ಬಿ) ಕ್ಷೇತ್ರದಿಂದ ಜಿ.ಮಹೇಶ್, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ರಾಮಕೃಷ್ಣಯ್ಯ, ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ಹೊಣಕಾರ ನಾಯಕ, ಮಹಿಳಾ ಮೀಸಲು ಕ್ಷೇತ್ರದಿಂದ ಎಸ್. ರತ್ನಮ್ಮ, ಶಿವಮ್ಮ ಗೆಲುವು ಸಾಧಿಸಿದ್ದಾರೆ.

ಸಾಲಗಾರರಲ್ಲದ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಕೆ.ಎಂ.ಮಹದೇವಸ್ವಾಮಿ 90 ಮತ ಪಡೆದು ಬಿಜೆಪಿ ಬೆಂಬಲಿತ ಅಭ್ಯರ್ಥಿ ಎಂ.ಗುರುಮೂರ್ತಿಯನ್ನು 63 ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ. ಸಾಲಗಾರರ ಕ್ಷೇತ್ರದಿಂದ ಬಿಜೆಪಿ ಬೆಂಬಲಿತ ಅಭ್ಯರ್ಥಿ ಬಿ.ಎನ್.ಗಣೇಶ್ ಗೆಲುವು ಸಾಧಿಸಿದ್ದಾರೆ.



ಕೋಟೆಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತರು ಭರ್ಜರಿ ಗೆಲುವು ಸಾಧಿಸಿದರು.



ಮಾ.22ರಿಂದ ಐಪಿಎಲ್ ಹಂಗಾಮ

ಐಪಿಎಲ್ ಪಂದ್ಯಾವಳಿಯ ವೇಳಾಪಟ್ಟಿ

ಮಾ.22 ಕೋಲ್ಕತ್ತಾ / ಬೆಂಗಳೂರು	ಸಂಜೆ 7.30	ಕೋಲ್ಕತ್ತಾ
ಮಾ.23 ಹೈದರಾಬಾದ್ / ರಾಜಸ್ಥಾನ್	ಮಧ್ಯಾಹ್ನ 3.30	ಹೈದರಾಬಾದ್
ಮಾ.23 ಚೆನ್ನೈ / ಮುಂಬೈ	ಸಂಜೆ 7.30	ಚೆನ್ನೈ
ಮಾ.24 ಡೆಲ್ಲಿ / ಲಕ್ನೋ	ಸಂಜೆ 7.30	ವಿಶಾಖಪಟ್ಟಣ
ಮಾ.25 ಗುಜರಾತ್/ ಪಂಜಾಬ್	ಸಂಜೆ 7.30	ಅಹಮದಾಬಾದ್
ಮಾ.26 ರಾಜಸ್ಥಾನ್ / ಕೋಲ್ಕತ್ತಾ	ಸಂಜೆ 7.30	ಗುವಾಹಟಿ
ಮಾ.27 ಹೈದರಾಬಾದ್ / ಲಕ್ನೋ	ಸಂಜೆ 7.30	ಹೈದರಾಬಾದ್
ಮಾ.28 ಬೆಂಗಳೂರು / ಚೆನ್ನೈ	ಸಂಜೆ 7.30	ಚೆನ್ನೈ
ಮಾ.29 ಗುಜರಾತ್/ ಮುಂಬೈ	ಸಂಜೆ 7.30	ಅಹಮದಾಬಾದ್
ಮಾ.30 ಡೆಲ್ಲಿ / ಹೈದರಾಬಾದ್	ಮಧ್ಯಾಹ್ನ 3.30	ವಿಶಾಖಪಟ್ಟಣ
ಮಾ.30 ರಾಜಸ್ಥಾನ್/ ಚೆನ್ನೈ	ಸಂಜೆ 7.30	ಗುವಾಹಟಿ
ಮಾ.31 ಮುಂಬೈ / ಕೋಲ್ಕತ್ತಾ	ಸಂಜೆ 7.30	ಮುಂಬೈ
ಏ.1 ಲಕ್ನೋ / ಪಂಜಾಬ್	ಸಂಜೆ 7.30	ಲಕ್ನೋ
ಏ.2 ಬೆಂಗಳೂರು / ಗುಜರಾತ್	ಸಂಜೆ 7.30	ಬೆಂಗಳೂರು
ಏ.3 ಕೋಲ್ಕತ್ತಾ / ಹೈದರಾಬಾದ್	ಸಂಜೆ 7.30	ಕೋಲ್ಕತ್ತಾ
ಏ.4 ಲಕ್ನೋ / ಮುಂಬೈ	ಸಂಜೆ 7.30	ಲಕ್ನೋ
ಏ.5 ಚೆನ್ನೈ / ಡೆಲ್ಲಿ	ಮಧ್ಯಾಹ್ನ 3.30	ಚೆನ್ನೈ
ಏ.5 ಪಂಜಾಬ್ / ರಾಜಸ್ಥಾನ್	ಸಂಜೆ 7.30	ಚಂಡೀಘಡ
ಏ.6 ಕೋಲ್ಕತ್ತಾ / ಲಕ್ನೋ	ಮಧ್ಯಾಹ್ನ 3.30	ಕೋಲ್ಕತ್ತಾ
ಏ.6 ಹೈದರಾಬಾದ್ / ಗುಜರಾತ್	ಸಂಜೆ 7.30	ಹೈದರಾಬಾದ್
ಏ.7 ಮುಂಬೈ / ಬೆಂಗಳೂರು	ಸಂಜೆ 7.30	ಮುಂಬೈ
ಏ.8 ಪಂಜಾಬ್ / ಚೆನ್ನೈ	ಸಂಜೆ 7.30	ಚಂಡೀಘಡ
ಏ.9 ಗುಜರಾತ್ / ರಾಜಸ್ಥಾನ್	ಸಂಜೆ 7.30	ಅಹಮದಾಬಾದ್
ಏ.10 ಬೆಂಗಳೂರು / ಡೆಲ್ಲಿ	ಸಂಜೆ 7.30	ಬೆಂಗಳೂರು
ಏ.11 ಚೆನ್ನೈ / ಕೋಲ್ಕತ್ತಾ	ಸಂಜೆ 7.30	ಚೆನ್ನೈ
ಏ.12 ಲಕ್ನೋ / ಗುಜರಾತ್	ಮಧ್ಯಾಹ್ನ 3.30	ಲಕ್ನೋ
ಏ.12 ಹೈದರಾಬಾದ್ / ಪಂಜಾಬ್	ಸಂಜೆ 7.30	ಹೈದರಾಬಾದ್
ಏ.13 ರಾಜಸ್ಥಾನ್ /ಬೆಂಗಳೂರು	ಮಧ್ಯಾಹ್ನ 3.30	ಜೈಪುರ
ಏ.13 ಡೆಲ್ಲಿ / ಮುಂಬೈ	ಸಂಜೆ 7.30	ಡೆಲ್ಲಿ
ಏ.14 ಲಕ್ನೋ / ಚೆನ್ನೈ	ಸಂಜೆ 7.30	ಲಕ್ನೋ
ಏ.15 ಪಂಜಾಬ್/ ಕೋಲ್ಕತ್ತಾ	ಸಂಜೆ 7.30	ಚಂಡೀಘಡ
ಏ.16 ಡೆಲ್ಲಿ / ರಾಜಸ್ಥಾನ್	ಸಂಜೆ 7.30	ಡೆಲ್ಲಿ
ಏ.17 ಮುಂಬೈ / ಹೈದರಾಬಾದ್	ಸಂಜೆ 7.30	ಮುಂಬೈ
ಏ.18 ಬೆಂಗಳೂರು/ ಪಂಜಾಬ್	ಸಂಜೆ 7.30	ಬೆಂಗಳೂರು
ಏ.19 ಗುಜರಾತ್ / ಡೆಲ್ಲಿ	ಮಧ್ಯಾಹ್ನ 3.30	ಅಹಮದಾಬಾದ್
ಏ.19 ರಾಜಸ್ಥಾನ್ / ಲಕ್ನೋ	ಸಂಜೆ 7.30	ಜೈಪುರ
ಏ.20 ಪಂಜಾಬ್ / ಬೆಂಗಳೂರು	ಮಧ್ಯಾಹ್ನ 3.30	ಚಂಡೀಗಡ
ಏ.20 ಮುಂಬೈ / ಚೆನ್ನೈ	ಸಂಜೆ 7.30	ಮುಂಬೈ
ಏ.21 ಕೋಲ್ಕತ್ತಾ / ಗುಜರಾತ್	ಸಂಜೆ 7.30	ಕೋಲ್ಕತ್ತಾ
ಏ.22 ಲಕ್ನೋ / ಡೆಲ್ಲಿ	ಸಂಜೆ 7.30	ಲಕ್ನೋ
ಏ.23 ಹೈದರಾಬಾದ್ / ಮುಂಬೈ	ಸಂಜೆ 7.30	ಹೈದರಾಬಾದ್
ಏ.24 ಬೆಂಗಳೂರು/ ರಾಜಸ್ಥಾನ್	ಸಂಜೆ 7.30	ಬೆಂಗಳೂರು
ಏ.25 ಚೆನ್ನೈ / ಹೈದರಾಬಾದ್	ಸಂಜೆ 7.30	ಚೆನ್ನೈ
ಏ.26 ಕೋಲ್ಕತ್ತಾ / ಪಂಜಾಬ್	ಸಂಜೆ 7.30	ಕೋಲ್ಕತ್ತಾ
ಏ.27 ಮುಂಬೈ / ಲಕ್ನೋ	ಮಧ್ಯಾಹ್ನ 3.30	ಮುಂಬೈ
ಏ.27 ಡೆಲ್ಲಿ / ಬೆಂಗಳೂರು	ಸಂಜೆ 7.30	ಡೆಲ್ಲಿ
ಏ.28 ರಾಜಸ್ಥಾನ್ / ಗುಜರಾತ್	ಸಂಜೆ 7.30	ಜೈಪುರ
ಏ.29 ಡೆಲ್ಲಿ / ಕೋಲ್ಕತ್ತಾ	ಸಂಜೆ 7.30	ಡೆಲ್ಲಿ
ಏ.30 ಚೆನ್ನೈ / ಪಂಜಾಬ್ ಕಿಂಗ್ಸ್	ಸಂಜೆ 7.30	ಚೆನ್ನೈ
ಮೇ 1 ರಾಜಸ್ಥಾನ್ / ಮುಂಬೈ	ಸಂಜೆ 7.30	ಜೈಪುರ
ಮೇ 2 ಗುಜರಾತ್ / ಹೈದರಾಬಾದ್	ಸಂಜೆ 7.30	ಅಹಮದಾಬಾದ್
ಮೇ 3 ಬೆಂಗಳೂರು/ ಚೆನ್ನೈ	ಸಂಜೆ 7.30	ಬೆಂಗಳೂರು
ಮೇ 4 ಕೋಲ್ಕತ್ತಾ / ರಾಜಸ್ಥಾನ್	ಮಧ್ಯಾಹ್ನ 3.30	ಕೋಲ್ಕತ್ತಾ
ಮೇ 4 ಪಂಜಾಬ್ / ಲಕ್ನೋ	ಸಂಜೆ 7.30	ಧರ್ಮಶಾಲಾ
ಮೇ 5 ಹೈದರಾಬಾದ್ / ಡೆಲ್ಲಿ	ಸಂಜೆ 7.30	ಹೈದರಾಬಾದ್
ಮೇ 6 ಮುಂಬೈ / ಗುಜರಾತ್	ಸಂಜೆ 7.30	ಮುಂಬೈ
ಮೇ 7 ಕೋಲ್ಕತ್ತಾ / ಚೆನ್ನೈ	ಸಂಜೆ 7.30	ಕೋಲ್ಕತ್ತಾ
ಮೇ 8 ಪಂಜಾಬ್ / ಡೆಲ್ಲಿ	ಸಂಜೆ 7.30	ಧರ್ಮಶಾಲಾ
ಮೇ 9 ಲಕ್ನೋ / ಬೆಂಗಳೂರು	ಸಂಜೆ 7.30	ಲಕ್ನೋ
ಮೇ 10 ಹೈದರಾಬಾದ್ / ಕೋಲ್ಕತ್ತಾ	ಸಂಜೆ 7.30	ಹೈದರಾಬಾದ್
ಮೇ 11 ಪಂಜಾಬ್ ಕಿಂಗ್ಸ್ / ಮುಂಬೈ	ಮಧ್ಯಾಹ್ನ 3.30	ಧರ್ಮಶಾಲಾ
ಮೇ 11 ಡೆಲ್ಲಿ / ಗುಜರಾತ್	ಸಂಜೆ 7.30	ಡೆಲ್ಲಿ
ಮೇ 12 ಚೆನ್ನೈ / ರಾಜಸ್ಥಾನ್	ಸಂಜೆ 7.30	ಚೆನ್ನೈ
ಮೇ 13 ಬೆಂಗಳೂರು / ಹೈದರಾಬಾದ್	ಸಂಜೆ 7.30	ಬೆಂಗಳೂರು
ಮೇ 14 ಗುಜರಾತ್ / ಲಕ್ನೋ	ಸಂಜೆ 7.30	ಅಹಮದಾಬಾದ್
ಮೇ 15 ಮುಂಬೈ / ಡೆಲ್ಲಿ	ಸಂಜೆ 7.30	ಮುಂಬೈ
ಮೇ 16 ರಾಜಸ್ಥಾನ್ / ಪಂಜಾಬ್	ಸಂಜೆ 7.30	ಜೈಪುರ
ಮೇ 17 ಬೆಂಗಳೂರು/ ಕೋಲ್ಕತ್ತಾ	ಸಂಜೆ 7.30	ಬೆಂಗಳೂರು
ಮೇ 18 ಗುಜರಾತ್ / ಚೆನ್ನೈ	ಮಧ್ಯಾಹ್ನ 3.30	ಅಹಮದಾಬಾದ್
ಮೇ 18 ಲಕ್ನೋ / ಹೈದರಾಬಾದ್	ಸಂಜೆ 7.30	ಲಕ್ನೋ
ಮೇ 20 ಮೊದಲ ಕ್ವಾಲಿಫೈಯರ್	ಸಂಜೆ 7.30	ಹೈದರಾಬಾದ್
ಮೇ 21 ಎಲಿಮಿನೇಟರ್	ಸಂಜೆ 7.30	ಹೈದರಾಬಾದ್
ಮೇ 23 2ನೇ ಕ್ವಾಲಿಫೈಯರ್	ಸಂಜೆ 7.30	ಕೋಲ್ಕತ್ತಾ
ಮೇ 25 ಫೈನಲ್	ಸಂಜೆ 7.30	ಕೋಲ್ಕತ್ತಾ

● ಮೋಹನ್‌ರಾಜ್, ಮಂಡ್ಯ

ವಿಶ್ವ ಕ್ರಿಕೆಟ್‌ನ ಅತ್ಯಂತ ಶ್ರೀಮಂತ ಟೂರ್ನಿ ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್)ನ 18ನೇ ಆವೃತ್ತಿಯ ಆರಂಭಕ್ಕೆ ದಿನಗಣನೆ ಆರಂಭವಾಗಿದ್ದು, ದೇಶಾದ್ಯಂತ ಐಪಿಎಲ್ ಫೀವರ್ ಕಾವೇರಿದೆ.

ಮಾ.22ರಿಂದ ಪಂದ್ಯಾವಳಿ ಆರಂಭವಾಗಲಿದ್ದು, ಟ್ರೋಫಿಗಾಗಿ 10 ತಂಡಗಳು ಸೆಣಸಾಟ ನಡೆಸಲಿದ್ದು, ಟೂರ್ನಿಯಲ್ಲಿ ಒಟ್ಟು 74 ಪಂದ್ಯಗಳು ನಡೆಯಲಿವೆ. ಮಾರ್ಚ್ 22ರಿಂದ ಮೇ 25ರವರೆಗೆ 2 ತಿಂಗಳು ಸುದೀರ್ಘವಾಗಿ ಪಂದ್ಯಾವಳಿ ನಡೆಯಲಿದ್ದು, ಕ್ವಾಲಿಫೈಯರ್ ಪ್ರವೇಶಿಸುವ ತಂಡಗಳು ಒಂದು ಎಲಿಮಿನೇಟರ್, ಎರಡು ಕ್ವಾಲಿಫೈಯರ್ ಪಂದ್ಯಗಳನ್ನು ಆಡಲಿದ್ದು, ಕ್ವಾಲಿಫೈಯರ್‌ನಲ್ಲಿ ಗೆದ್ದವರು ಫೈನಲ್ ಪಂದ್ಯದಲ್ಲಿ ಪ್ರಶಸ್ತಿಗಾಗಿ ಕಾದಾಡಲಿದ್ದಾರೆ. ಎಂದಿನಂತೆ ಪಂದ್ಯಗಳು ನಿತ್ಯ ರಾತ್ರಿ 7.30ಕ್ಕೆ ಆರಂಭವಾಗಲಿದ್ದು, ವೀಕೆಂಡ್‌ನಲ್ಲಿ ಮಾತ್ರ ಎರಡು ಪಂದ್ಯಗಳಿರುತ್ತವೆ. ಅಂದು ಮತ್ತೊಂದು ಪಂದ್ಯ ಮಧ್ಯಾಹ್ನ 3.30ಕ್ಕೆ ಆರಂಭವಾಗಲಿದೆ. ಪಂದ್ಯಾವಳಿ ಈ ಬಾರಿ ಭಾರತದಲ್ಲೇ ನಡೆಯಲಿದ್ದು, ಕ್ವಾಲಿಫೈಯರ್ ಪಂದ್ಯಗಳು ಕ್ರಮವಾಗಿ ಹೈದರಾಬಾದ್‌ನಲ್ಲಿ ಹಾಗೂ ಕೋಲ್ಕತ್ತಾ, ಹಾಗೆಯೇ ಎಲಿಮಿನೇಟರ್ ಪಂದ್ಯ ಹೈದರಾಬಾದ್ ಜೊತೆಗೆ ಫೈನಲ್ ಪಂದ್ಯ ಕೋಲ್ಕತ್ತಾದಲ್ಲಿ ನಡೆಯಲಿದೆ.

ಸಕಲ ಸಿದ್ಧತೆ: 2008 ರಿಂದ 2024ರವರೆಗೆ ಐಪಿಎಲ್‌ನ ಒಟ್ಟು 17 ಆವೃತ್ತಿಯನ್ನು ಯಶಸ್ವಿಯಾಗಿ ನಡೆಸಿರುವ ಬಿಸಿಸಿಐ 2025ನೇ ಸಾಲಿನ 18ನೇ ಆವೃತ್ತಿಗಾಗಿ ಈಗಾಗಲೇ ಎಲ್ಲಾ ಸಿದ್ಧತೆ ಕೈಗೊಂಡಿದೆ.



ಪಂದ್ಯ ನಡೆಯುವ ಕ್ರೀಡಾಂಗಣಗಳು: ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಬೆಂಗಳೂರು, ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನ, ಹೈದರಾಬಾದ್‌ನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣ, ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣ, ವಿಶಾಖಪಟ್ಟಣದ ಡಾ.ವೈ.ಎಸ್.ರಾಜಶೇಖರ ರೆಡ್ಡಿ ಕ್ರೀಡಾಂಗಣ, ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ, ಗುವಾಹಟಿಯ ಬರ್ಸಾಪುರ ಕ್ರಿಕೆಟ್ ಕ್ರೀಡಾಂಗಣ, ಮುಂಬೈನ ವಾಂಖೇಡೆ ಕ್ರೀಡಾಂಗಣ, ಲಕ್ನೋದ ಭಾರತ್‌ರತ್ನ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣ, ಚಂಡೀಗಢದ ಮಹಾರಾಜ ಯಾದವೀಂದ್ರ ಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣ, ಜೈಪುರದ ಸವಾಯ್‌ಮಾನ್‌ಸಿಂಗ್ ಕ್ರೀಡಾಂಗಣ, ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣ, ಧರ್ಮಶಾಲಾದ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿವೆ ಉದ್ಘಾಟನಾ ಪಂದ್ಯ ಕೋಲ್ಕತ್ತಾದ ಈಡನ್ ಗಾರ್ಡನ್ ಮೈದಾನದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳ ನಡುವೆ ನಡೆಯಲಿದೆ.


ಟೂರ್ನಿ ನಡೆಯುವ ವಿಧಾನ: ಲೀಗ್ ಹಂತದಲ್ಲಿ ಪಂದ್ಯಾವಳಿಯಲ್ಲಿ ಭಾಗವಹಿಸುವ ಎಲ್ಲಾ ತಂಡಗಳು 14 ಪಂದ್ಯಗಳನ್ನು ಆಡಲಿವೆ. ಅಂಕಪಟ್ಟಿಯಲ್ಲಿ ಉತ್ತಮ ರನ್‌ರೇಟ್‌ನೊಂದಿಗೆ ಹೆಚ್ಚು ಅಂಕ ಪಡೆಯುವ ಮೊದಲ 4 ತಂಡಗಳು ಪ್ಲೇ ಆಫ್‌ಗೆ ಅರ್ಹತೆ ಪಡೆಯಲಿವೆ ಬಳಿಕ ನಡೆಯುವ ಕ್ವಾಲಿಫೈಯರ್–1 ಪಂದ್ಯದಲ್ಲಿ ಅಗ್ರ 2 ತಂಡಗಳು ಕಾದಾಡಲಿದ್ದು, ಪಂದ್ಯ ಜಯಿಸುವ ತಂಡ ನೇರವಾಗಿ ಫೈನಲ್ ತಲುಪಲಿದೆ. ಸೋತ ತಂಡಕ್ಕೆ ಮತ್ತೊಂದು ಅವಕಾಶವಿರುತ್ತದೆ.

ಅಂಕಪಟ್ಟಿಯಲ್ಲಿ 3 ಮತ್ತು 4 ಸ್ಥಾನ ಗಳಿಸುವ ತಂಡಗಳು ಎಲಿಮಿನೇಟರ್ ಪಂದ್ಯವಾಡಲಿದೆ. ಈ ಪಂದ್ಯ ಗೆದ್ದ ತಂಡ ಮೊದಲ ಪಂದ್ಯದಲ್ಲಿ ಸೋತ ತಂಡದ ವಿರುದ್ಧ ಸೆಣಸಾಡಲಿದೆ. ಸೋತ ತಂಡ ಟೂರ್ನಿಯಿಂದ ನಿರ್ಗಮಿಸಲಿದೆ ಕ್ವಾಲಿಫೈಯರ್–2ರಲ್ಲಿ ಎಲಿಮಿನೇಟರ್‌ನಲ್ಲಿ ಗೆದ್ದ ತಂಡ ಹಾಗೂ ಕ್ವಾಲಿಫೈಯರ್–1 ರಲ್ಲಿ ಸೋತ ತಂಡಗಳು ಮುಖಾಮುಖಿಯಾಗಲಿದ್ದು, ಇಲ್ಲಿ ಗೆದ್ದ ತಂಡ ಫೈನಲ್‌ನಲ್ಲಿ ಟ್ರೋಫಿಗಾಗಿ ಫೈಟ್ ನಡೆಸಲಿದೆ.

ಆರೆಂಜ್, ಪರ್ಪಲ್ ಕ್ಯಾಪ್: ಟೂರ್ನಿಯಲ್ಲಿ ಅತೀ ಹೆಚ್ಚು ರನ್ ಹಾಗೂ ವಿಕೆಟ್ ಪಡೆಯುವ ಆಟಗಾರರಿಗೆ ಆರೆಂಜ್ ಹಾಗೂ ಪರ್ಪಲ್ ಕ್ಯಾಪ್‌ಗಳನ್ನು ನೀಡಲಿದ್ದು, ಪಂದ್ಯಾವಳಿಯಲ್ಲಿ ಆಟಗಾರ ಕ್ಯಾಪ್ ಹಾಕಿಕೊಂಡು ಆಟವಾಡುತ್ತಾನೆ. ಟೂರ್ನಿ ಅಂತಿಮ ಹಂತದಲ್ಲಿ ಇದಕ್ಕಾಗಿ ಪಶಸ್ತಿ ಹಾಗೂ ನಗದು ಬಹುಮಾನ ನೀಡಲಾಗುವುದು.

ಮೆಗಾ ಹಾಜು, ಭಾರಿ ಮೊತ್ತಕ್ಕೆ ಆಟಗಾರರ ಖರೀದಿ: ಪ್ರಸಕ್ತ ಸಾಲಿನ ಐಪಿಎಲ್ ಪಂದ್ಯಾವಳಿಗಾಗಿ ಬಲಿಷ್ಠ ತಂಡ ಕಟ್ಟಲು ಎಲ್ಲಾ ತಂಡಗಳಿಗೂ ಅವಕಾಶ ಮಾಡಿಕೊಡಲಾಗಿತ್ತು. ಟೂರ್ನಿಯ ಎಲ್ಲಾ 10 ತಂಡಗಳ ಫ್ರಾಂಚೈಸಿಗಳು ಕೆಲ ಆಟಗಾರರನ್ನು ಉಳಿಸಿಕೊಂಡು, ಉಳಿದವರನ್ನು ಹರಾಜಿಗೆ ಬಿಡುಗಡೆ ಮಾಡಿದ್ದರು. ಬಳಿಕ ದುಬೈನಲ್ಲಿ ನಡೆದ ಮೆಗಾ ಹರಾಜಿನಲ್ಲಿ ತಮಗೆ ಬೇಕಾದ ಆಟಗಾರರನ್ನು ಅಳೆದು ತೂಗಿ ಕೋಟ್ಯಾಂತರ ರೂ. ನೀಡಿ ಖರೀದಿಸುವ ಮೂಲಕ ಬಲಿಷ್ಠ ತಂಡಗಳನ್ನು ಕಟ್ಟಿಕೊಂಡಿದ್ದಾರೆ. ಈ ಪೈಕಿ ಅತೀ ಹೆಚ್ಚು, 27 ಕೋಟಿಗೆ ರಿಷಬ್ ಪಂತ್, 26.75 ಕೋಟಿಗೆ ಶ್ರೇಯಸ್ ಅಯ್ಯರ್, 23.75 ಕೋಟಿಗೆ ವೆಂಕಟೇಶ್ ಅಯ್ಯರ್ ಬಿಡ್ ಆಗಿದ್ದಾರೆ. ಇವರ ಪ್ರದರ್ಶನದ ಮೇಲೆ ಎಲ್ಲರ ಚಿತ್ತವಿದೆ. ಅಲ್ಲದೇ ಈಗಾಗಲೇ ಎಲ್ಲಾ ತಂಡಗಳ ಆಟಗಾರರು ಕಠಿಣ ಅಭ್ಯಾಸದಲ್ಲಿ ತೊಡಗಿ ಪ್ರಶಸ್ತಿ ಗೆಲ್ಲಲು ರಣತಂತ್ರ ರೂಪಿಸಿರುವುದರಿಂದ ಟೂರ್ನಿ ಹಲವು ರೋಚಕ ಕ್ಷಣಗಳಿಗೆ ಸಾಕ್ಷಿಯಾಗಲಿದೆ. ಪಂದ್ಯಾವಳಿಯ ನೇರ ಪ್ರಸಾರ ಸ್ಟಾರ್ ಸ್ಪೋರ್ಟ್ಸ್ ಮತ್ತು ಜಿಯೋ ಹಾಟ್‌ಸ್ಟಾರ್‌ನಲ್ಲಿ ಪ್ರಸಾರವಾಗಲಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು



ರಜತ್ ಪಾಟೀದಾರ್(ನಾಯಕ), ವಿರಾಟ್ ಕೊಹ್ಲಿ, ದೇವದತ್ತ ಪಡಿಕ್ಕಲ್, ಟೀಮ್ ಡೇವಿಡ್, ಜೋಸ್ ಹೆಜಲ್‌ವುಡ್, ಫಿಲ್ ಸಾಲ್ಟ್, ಜಿತೇಶ್ ಶರ್ಮಾ, ಭುವನೇಶ್ವರ್ ಕುಮಾರ್, ಲಿಯಾಮ್ ಲಿವಿಂಗ್‌ಸ್ಟೋನ್, ರಾಸಿಕ್ ಸಲಾಂ, ಕೃನಾಲ್ ಪಾಂಡ್ಯ, ಯಶ್ ದಯಾಳ್, ಸುಯೇಶ್ ಶರ್ಮಾ, ಜಾಕೋಬ್ ಬೆಥೆಲ್, ನುವಾನ್ ತುಷಾರ, ರೋಮಾರಿಯೋ ಶೆಫರ್ಡ್, ಲುಂಗಿ ಎನ್ಗಿಡಿ, ಸ್ವಪ್ನಿಲ್ ಸಿಂಗ್, ಅಭಿನಂದನ್ ಸಿಂಗ್, ಸ್ವಸ್ತಿಕ್ ಚಿಕಾರ, ಮೋಹಿತ್ ರಾಥಿ, ಮನೋಜ್ ಭಾಂಡಗೆ.

ತಾರಾ ಆಟಗಾರರು: ವಿರಾಟ್‌ಕೊಹ್ಲಿ, ಲಿವಿಂಗ್‌ಸ್ಟೋನ್, ಭುವನೇಶ್ವರ್, ರಜತ್ ಪಾಟೀದಾರ್, ಹೆಜಲ್‌ವುಡ್

ಹಿಂದಿನ ಸಾಧನೆ: 2009, 2011, 2016ರಲ್ಲಿ ರನ್ನರ್‌ಅಪ್

ಚೆನ್ನೈ ಸೂಪರ್ ಕಿಂಗ್ಸ್



ಋತುರಾಜ್ ಗಾಯಕ್ವಾಡ್(ನಾಯಕ), ರವೀಂದ್ರ ಜಡೇಜಾ, ಮತೀಶ ಪತಿರಾಣ, ಶಿವಂದುಬೆ, ನೂರ್ ಅಹಮ್ಮದ್, ರವಿಚಂದ್ರನ್ ಅಶ್ವಿನ್, ಡೆವೋನ್ ಕಾನ್ವೆ, ಖಲೀಲ್ ಅಹಮ್ಮದ್, ರಚಿನ್ ರವೀಂದ್ರ, ಮಹೇಂದ್ರ ಸಿಂಗ್ ಧೋನಿ, ಅನ್ಶುಲ್ ಕಾಂಬೋಜ್, ರಾಹುಲ್ ತ್ರಿಪಾಠಿ, ಸ್ಯಾಮ್ ಕರ್ರಾನ್, ಗುರ್ಜಪ್ರೀತ್ ಸಿಂಗ್, ನಾಥನ್ ಎಲ್ಲಿಸ್, ದೀಪಕ್ ಹೂಡಾ, ಜೇಮಿ ಓವರ್‌ಟನ್, ವಿಜಯ್ ಶಂಕರ್, ವಂಶ್ ಬೇಡಿ, ಸಿ ಆಂಡ್ರೆ ಸಿದ್ಧಾರ್ಥ, ರಾಮಕೃಷ್ಣ ಘೋಷ್, ಶೇಕ್ ರಶೀದ್, ಮುಕೇಶ್ ಚೌಧರಿ, ಕಮಲೇಶ್ ನಾಗರಕೋಟಿ, ಶ್ರೇಯಸ್ ಗೋಪಾಲ್.

ತಾರಾ ಆಟಗಾರರು: ಎಂ.ಎಸ್.ಧೋನಿ, ಆರ್.ಅಶ್ವಿನ್, ರವೀಂದ್ರ ಜಡೇಜಾ, ಶಿವಂದುಬೆ, ರಚಿನ್ ರವೀಂದ್ರ

ಸಾಧನೆ 2010, 2011, 2018, 2021, 2023 ಐದು ಬಾರಿ ಚಾಂಪಿಯನ್

ಡೆಲ್ಲಿ ಕ್ಯಾಪಿಟಲ್ಸ್




ಅಕ್ಷರ್ ಪಟೇಲ್(ನಾಯಕ), ಕೆ.ಎಲ್. ರಾಹುಲ್, ಕುಲದೀಪ್ ಯಾದವ್, ಮಿಚೆಲ್ ಸ್ಟಾರ್ಕ್, ಟಿ.ನಟರಾಜನ್, ಟ್ರಿಸ್ಟಾನ್ ಸ್ಟಬ್ಸ್, ಜೇಕ್ ಫ್ರೇಸರ್–ಮೆಕ್‌ಗುರ್ಕ್, ಮುಖೇಶ್ ಕುಮಾರ್, ಹ್ಯಾರಿ ಬ್ರೂಕ್, ಅಭಿಷೇಕ್ ಪೊರೆಲ್, ಅಶುತೋಷ್ ಶರ್ಮಾ, ಮೋಹಿತ್ ಶರ್ಮಾ, ಫಾಫ್ ಡುಪ್ಲೆಸಿಸ್, ಸಮೀರ್ ರಿಜ್ವಿ, ಡೊನೊವನ್ ಫೆರೀರಾ, ದುಷ್ಮಂತ ಚಮಿರಾ, ವಿಪ್ರಜ್ ನಿಗಮ್, ಕರುಣ್ ನಾಯರ್, ಮಾಧವ್ ತಿವಾರಿ, ಮನ್ವಂತ್ ಕುಮಾರ್, ತ್ರಿಪುರಾಣ ವಿಜಯ್, ದರ್ಶನ್ ನಾಲ್ಕಂಡೆ, ಅಜಯ್ ಮಂಡಲ್.

ತಾರಾ ಆಟಗಾರರು: ಕೆ.ಎಲ್.ರಾಹುಲ್, ಅಕ್ಷರ್, ಕರುಣ್ ನಾಯರ್, ಮಿಚೆಲ್ ಸ್ಟಾರ್ಕ್, ಕುಲ್ದೀಪ್ ಯಾದವ್

ಹಿಂದಿನ ಸಾಧನೆ: 2020ರಲ್ಲಿ ರನ್ನರ್ ಅಪ್

ಗುಜರಾತ್ ಟೈಟಾನ್ಸ್



ಶುಭ್‌ಮನ್ ಗಿಲ್ (ನಾಯಕ), ರಶೀದ್ ಖಾನ್, ಜೋಸ್ ಬಟ್ಲರ್, ಮೊಹಮ್ಮದ್ ಸಿರಾಜ್, ಕಗಿಸೋ ರಬಾಡ, ಪ್ರಸಿದ್ಧ ಕೃಷ್ಣ, ಸಾಯಿ ಸುದರ್ಶನ್, ಎಂ.ಶಾರೂಕ್ ಖಾನ್, ರಾಹುಲ್ ತೆವಾಟಿಯಾ, ವಾಷಿಂಗ್‌ಟನ್ ಸುಂದರ್, ಶೆರ್ಫೇನ್ ರುದರ್ಫೋರ್ಡ್, ಜೆರಾಲ್ಡ್ ಕೋಟ್ಜಿ ಸಾಯಿ ಕಿಶೋರ್, ಗ್ಲೆನ್ ಫಿಲಿಫ್, ಮಹಿಪಾಲ್ ಲೋಮ್ರೋರ್, ಗುರ್ನೂರ್ ಬ್ರಾರ್, ಅರ್ಷದ್ ಖಾನ್, ಕರೀಂ ಜನತ್, ಜಯಂತ್ ಯಾದವ್, ಇಶಾಂತ್ ಶರ್ಮಾ, ಕುಮಾರ್ ಕುಶಾಗ್ರ, ನಿಶಾಂತ್ ಸಿಂಧು, ಮಾನವ್ ಸುತಾರ್, ಅನುಜ್ ರಾವತ್, ಕುಲ್ವಂತ್ ಖೇಜ್ರೋಲಿಯಾ.

ತಾರಾ ಆಟಗಾರರು: ಗಿಲ್, ರಶೀದ್, ಬಟ್ಲರ್, ಸಿರಾಜ್, ರಬಾಡ, ಸುದರ್ಶನ್, ಗ್ಲೆನ್ ಫಿಲಿಫ್.

ಹಿಂದಿನ ಸಾಧನೆ: 2022ರಲ್ಲಿ ಚಾಂಪಿಯನ್

ಕೋಲ್ಕತ್ತಾ ನೈಟ್ ರೈಡರ್ಸ್



ಅಜಿಂಕ್ಯಾ ರಹಾನೆ (ನಾಯಕ), ವೆಂಕಟೇಶ್ ಐಯ್ಯರ್, ರಿಂಕು ಸಿಂಗ್, ವರುಣ್ ಚಕ್ರವರ್ತಿ, ಆಂಡ್ರೆ ರಸೆಲ್, ಸುನೀಲ್ ನರೇನ್, ಅನ್ರಿಚ್ ನಾರ್ಟ್ಜೆ, ಹರ್ಷಿತ್ ರಾಣಾ, ರಮಣ್‌ದೀಪ್ ಸಿಂಗ್, ಕ್ವಿಂಟನ್ ಡಿಕಾಕ್, ಅಂಗಿಕ್ರಿಶ್ ರಘುವಂಶಿ, ಸ್ಪೆನ್ಸರ್ ಜಾನ್ಸನ್, ರಹಮಾನುಲ್ಲಾ ಗುರ್ಬಾಜ್, ಮೊಯಿನ್ ಅಲಿ, ವೈಭವ್ ಅರೋರ, ರೋವ್ಮನ್ ಪೊವೆಲ್, ಉಮ್ರಾನ್ ಮಲ್ಲಿಕ್, ಮನೀಶ್ ಪಾಂಡೆ, ಅನುಕುಲ್ ರಾಯ್, ಲುವ್ನಿತ್ ಸಿಸೋಡಿಯಾ, ಮಯಾಂಕ್ ಮರ್ಕಂಡೆ.

ತಾರಾ ಆಟಗಾರರು: ಆಂಡ್ರೆ ರೆಸೆಲ್, ಸುನೀಲ್ ನರೈನ್, ವೆಂಕಟೇಶ್ ಅಯ್ಯರ್, ರಿಂಕುಸಿಂಗ್, ವರುಣ್ ಚಕ್ರವರ್ತಿ

ಹಿಂದಿನ ಸಾಧನೆ: 2012, 2014, 2024 ಸೇರಿ ಮೂರು ಬಾರಿ ಚಾಂಪಿಯನ್.

ಲಕ್ನೋ ಸೂಪರ್ ಜೈಂಟ್ಸ್



ರಿಷಬ್ ಪಂತ್ (ನಾಯಕ), ನಿಕೋಲಸ್ ಪೂರನ್, ಮಯಾಂಕ್ ಯಾದವ್, ರವಿ ಬಿಷ್ಣೋಯಿ, ಆವೇಶ್ ಖಾನ್, ಆಕಾಶ್ ದೀಪ್, ಡೇವಿಡ್ ಮಿಲ್ಲರ್, ಅಬ್ದುಲ್ ಸಮ್ಮದ್, ಆಯುಷ್ ಬದೋನಿ, ಮೊಹಸೀನ್ ಖಾನ್, ಮಿಚೆಲ್ ಸ್ಟಾರ್ಕ್, ಶೆಹಬ್ಬಾಸ್ ಅಹಮ್ಮದ್, ಐಡನ್ ಮಾಕ್ರಂ, ಶಾಮರ್ ಜೋಸೆಫ್, ಮಣಿಮಾರನ್ ಸಿದ್ಧಾರ್ಥ, ಮ್ಯಾಥ್ಯೂ ಬ್ರೀಟ್ಜ್ಕೆ, ದಿಗ್ವೇಶ್ ರಥಿ, ಅರ್ಶಿನ್ ಕುಲಕರ್ಣಿ, ಪ್ರಿನ್ ಯಾದವ್, ಯುವರಾಜ್ ಚೌಧರಿ, ಆಕಾಶ್ ಸಿಂಗ್, ರಾಜವರ್ಧನ್ ಹಂಗರ್ಗೇಕರ್, ಆರ್ಯನ್ ಜುಯಲ್, ಹಿಮ್ಮತ್ ಸಿಂಗ್.

ತಾರಾ ಆಟಗಾರರು: ಪಂತ್, ಮಿಲ್ಲರ್, ಪೂರನ್, ಮಯಾಂಕ್, ಬಿಷ್ಣೋಯ್.

ಹಿಂದಿನ ಸಾಧನೆ: 2022, 2023ರಲ್ಲಿ ಪ್ಲೇಆಫ್ ಪ್ರವೇಶ

ಮುಂಬೈ ಇಂಡಿಯನ್ಸ್



ಹಾರ್ದಿಕ್ ಪಾಂಡ್ಯ (ನಾಯಕ), ರೋಹಿತ್ ಶರ್ಮಾ, ಸೂರ್ಯಕುಮಾರ್ ಯಾದವ್, ಬೆವೊನ್ ಜಾಕಬ್ಸ್, ತಿಲಕ್ ವರ್ಮಾ, ರಾಯನ್ ರಿಕೆಲ್ಟನ್ (ವಿಕೀ), ಕೆ.ಎಲ್.ಶ್ರೀಜಿತ್ (ವಿಕೀ), ರಾಬಿನ್ ಮಿನ್ಸ್ (ವಿಕೀ), ಮಿಚೆಲ್ ಸ್ಯಾಂಟ್ನರ್, ವಿಲ್ ಜಾಕ್ಸ್, ಸತ್ಯನಾರಾಯಣ ರಾಜು, ನಮನ್ ಧೀರ್, ವಿಘ್ನೇಶ್ ಪುತ್ತೂರು, ರಾಜ್ ಅಗಂದ್ ಬಾವಾ, ಟ್ರೆಂಟ್ ಬೌಲ್ಟ್, ದೀಪಕ್ ಚಹರ್, ಲಿಜಾದ್ ವಿಲಿಯಮ್ಸ್, ಜಸ್ಪ್ರೀತ್ ಬೂಮ್ರಾ, ರೀಸ್ಸೆ ಟೊಪ್ಲಿ, ಅರ್ಜುನ್ ತೆಂಡುಲ್ಕರ್, ಅಶ್ವಿನಿ ಕುಮಾರ್, ಕರಣ್ ಶರ್ಮಾ, ಮುಜೀಬ್ ಉರ್ ರೆಹಮಾನ್, ಅಲಿಶ್ ಮಹಮ್ಮದ್.

ತಾರಾ ಆಟಗಾರರು: ರೋಹಿತ್ ಶರ್ಮಾ, ಹಾರ್ದಿಕ್ ಪಾಂಡ್ಯ, ಸೂರ್ಯಕುಮಾರ್ ಯಾದವ್, ಜಸ್ಪ್ರೀತ್ ಬೂಮ್ರಾ, ಟ್ರೆಂಟ್ ಬೌಲ್ಟ್

ಹಿಂದಿನ ಸಾಧನೆ: 2013, 2015, 2017, 2019, 2020 ಸೇರಿ ಐದು ಬಾರಿ ಚಾಂಪಿಯನ್

ಪಂಜಾಬ್ ಕಿಂಗ್ಸ್



ಶ್ರೇಯಸ್ ಅಯ್ಯರ್(ನಾಯಕ), ಅರ್ಶದೀಪ್ ಸಿಂಗ್, ಯಜುವೇಂದ್ರ ಚಹಲ್, ಮಾರ್ಕಸ್ ಸ್ಟೋಯ್ನಿಸ್, ಮಾರ್ಕೋ ಯಾನ್ಸನ್, ಶಶಾಂಕ್ ಸಿಂಗ್, ನಿಹಾಲ್ ವಧೇರಾ, ಗ್ಲೆನ್ ಮ್ಯಾಕ್ಸ್‌ವೆಲ್, ಪ್ರಭ್‌ಸಿಮ್ರಾನ್ ಸಿಂಗ್, ಪ್ರಿಯಾಂಶ್ ಆರ್ಯ, ಜೋಶ್ ಇಂಗ್ಲಿಸ್, ಅಜ್ಮತುಲ್ಲಾ ಒಮರ್ಜೈ, ಲಾಕಿ ಫರ್ಗುಸನ್, ವಿಜಯ್ ಕುಮಾರ್ ವೈಶಾಕ್, ಯಶ್ ಠಾಕೂರ್, ಹರ್‌ಪ್ರೀತ್ ಬ್ರಾರ್, ಆರನ್ ಹಾರ್ಡಿ, ವಿಷ್ಣು ವಿನೋದ್, ಕುಲದಪ್ ಸೇನ್, ಜೇವಿಯರ್ ಬಾರ್ಟ್ಲೆಟ್, ಸೂರ್ಯಾಂಶ್ ಶೆಡ್ಗೆ, ಪೈಲಾ ಅವಿನಾಶ್, ಮುಶೀರ್ ಖಾನ್, ಹರ್ನೂರ್ ಸಿಂಗ್, ಪ್ರವೀಣ್ ದುಬೆ.

ತಾರಾ ಆಟಗಾರರು: ಶ್ರೇಯಸ್ ಅಯ್ಯರ್, ಮ್ಯಾಕ್ಸ್‌ವೆಲ್, ಸ್ಟೋಯ್ನೀಸ್, ಹರ್ಷದೀಪ್‌ಸಿಂಗ್, ಚಹಲ್

ಹಿಂದಿನ ಸಾಧನೆ: 2008ರಲ್ಲಿ ಸೆಮಿಫೈನಲ್.

ರಾಜಸ್ಥಾನ್ ರಾಯಲ್ಸ್




ಸಂಜು ಸ್ಯಾಮ್ಸನ್(ನಾಯಕ), ಯಶಸ್ವಿ ಜೈಸ್ವಾಲ್, ಧ್ರುವ್ ಜುರೇಲ್, ರಿಯಾನ್ ಪರಾಗ್, ಜೋಫ್ರಾ ಆರ್ಚರ್, ಶಿಮ್ರಾನ್ ಹೆಟ್ಮೆಯರ್, ತುಷಾರ್ ದೇಶ್‌ಪಾಂಡೆ, ವನಿಂದು ಹಸರಂಗ, ಮಹೇಶ್ ತೀಕ್ಷಣ, ನಿತೀಶ್ ರಾಣ, ಸಂದೀಪ್ ಶರ್ಮಾ, ಫಜಲ್ಹಕ್ ಫಾರೂಕಿ, ಕ್ವೇನಾ ಮಾಫಕ, ಆಕಾಶ್ ಮಧ್ವಾಲ್, ವೈಭವ್ ಸೂರ್ಯವಂಶಿ, ಶುಭಂ ದುಬೆ, ಯುದ್ಧವೀರ್ ಸಿಂಗ್, ಕುನಾಲ್ ಸಿಂಗ್ ರಾಥೋಡ್, ಅಶೋಕ್ ಶರ್ಮಾ, ಕುಮಾರ್ ಕಾರ್ತಿಕೇಯ.

ತಾರಾ ಆಟಗಾರರು: ಸಂಜು ಸಾಮ್ಸನ್, ರಿಯಾನ್ ಪರಾಗ್, ಶಿಮ್ರೋನ್ ಹೆಟ್ಮೇಯರ್, ಯಶಸ್ವಿ ಜೈಸ್ವಾಲ್, ಜೋಫ್ರಾ ಆರ್ಚರ್.

ಹಿಂದಿನ ಸಾಧನೆ: 2008ರಲ್ಲಿ ಚಾಂಪಿಯನ್

ಸನ್‌ರೈಸರ್ಸ್ ಹೈದರಾಬಾದ್



ಪ್ಯಾಟ್ ಕಮ್ಮಿನ್ಸ್(ನಾಯಕ), ಹೆನ್ರಿಚ್ ಕ್ಲಾಸೆನ್, ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್, ಇಶನ್ ಕಿಶನ್, ಮೊಹಮ್ಮದ್ ಶಮಿ, ಹರ್ಷಲ್ ಪಟೇಲ್, ನಿತೀಶ್ ಕುಮಾರ್ ರೆಡ್ಡಿ, ರಾಹುಲ್ ಚಹರ್, ಅಭಿನವ್ ಮನೋಹರ್, ಆಡಂ ಜಂಪಾ, ಸಮರ್‌ಜಿತ್ ಸಿಂಗ್, ಈಶಾನ್ ಮಲಿಂಗಾ, ಬ್ರೈಡನ್ ಕಾರ್ಸೆ, ಜಯದೇವ್ ಉನಾದ್ಕಟ್, ಕಮಿಂದು ಮೆಂಡೀಸ್, ಜೀಶನ್ ಅನ್ಸಾರಿ, ಅನಿಕೇತ್ ವರ್ಮಾ, ಅಥರ್ವ ಟೈಡೆ, ಸಚಿನ್ ಬೇಬಿ.

ತಾರಾ ಆಟಗಾರರು: ಕಮಿನ್ಸ್, ಕ್ಲಾಸೆನ್, ಅಭಿಷೇಕ್, ಇಶಾನ್ ಕಿಶನ್, ಶಮಿ, ನಿತೀಶ್ ಕುಮಾರ್ ರೆಡ್ಡಿ

ಹಿಂದಿನ ಸಾಧನೆ: 2016ರಲ್ಲಿ ಚಾಂಪಿಯನ್

ಬಹುಮಾನ ಮೊತ್ತ

ಚಾಂಪಿಯನ್ 20 ಕೋಟಿ, ರನ್ನರ್ ಅಪ್ 13 ಕೋಟಿ
3ನೇ ಸ್ಥಾನ 7 ಕೋಟಿ, 4ನೇ ಸ್ಥಾನ 6.5 ಕೋಟಿ
ಆರೆಂಜ್, ಪರ್ಪಲ್ ಕ್ಯಾಪ್ ತಲಾ 15ರಿಂದ 20 ಲಕ್ಷ

ಐಪಿಎಲ್ ವಿಜೇತರ ಪಟ್ಟಿ

2008– ರಾಜಸ್ಥಾನ್ ರಾಯಲ್ಸ್
2009– ಡೆಕ್ಕನ್ ಚಾರ್ಜರ್ಸ್
2010– ಚೆನ್ನೈ ಸೂಪರ್ ಕಿಂಗ್ಸ್
2011– ಚೆನ್ನೈ ಸೂಪರ್ ಕಿಂಗ್ಸ್
2012– ಕೋಲ್ಕತ್ತಾ ನೈಟ್ ರೈಡರ್ಸ್
2013– ಮುಂಬೈ ಇಂಡಿಯನ್ಸ್
2014– ಕೋಲ್ಕತ್ತಾ ನೈಟ್ ರೈಡರ್ಸ್
2015– ಮುಂಬೈ ಇಂಡಿಯನ್ಸ್
2016– ಸನ್‌ರೈಸರ್ಸ್ ಹೈದರಾಬಾದ್
2017– ಮುಂಬೈ ಇಂಡಿಯನ್ಸ್
2018– ಚೆನ್ನೈ ಸೂಪರ್ ಕಿಂಗ್ಸ್
2019– ಮುಂಬೈ ಇಂಡಿಯನ್ಸ್
2020– ಮುಂಬೈ ಇಂಡಿಯನ್ಸ್
2021– ಚೆನ್ನೈ ಸೂಪರ್ ಕಿಂಗ್ಸ್
2022– ಗುಜರಾತ್ ಟೈಟಾನ್ಸ್
2023– ಚೆನ್ನೈ ಸೂಪರ್ ಕಿಂಗ್ಸ್
2024– ಕೋಲ್ಕತ್ತಾ ನೈಟ್ ರೈಡರ್ಸ್
2025– ?



ರಾಯಲ್ ಚಾಲೆಂಜರ್ಸ್ –2025

ಸೋಸಲೆ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ

ಶಿವಕುಮಾರ್ ಬಡ್ಡು ಬಣ ಭರ್ಜರಿ ಜಯಭೇರಿ

11 ಸ್ಥಾನಗಳಲ್ಲಿ ನಿರ್ದೇಶಕರಾಗಿ ಅವಿರೋಧ ಆಯ್ಕೆ



ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಆಯ್ಕೆಯಾದ 11 ಮಂದಿ ನಿರ್ದೇಶಕರನ್ನು ಅಭಿನಂದಿಸಲಾಯಿತು.

ತಿ.ನರಸೀಪುರ, ಮಾ.15– ತಾಲೂಕಿನ ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ಸೋಸಲೆ ಶಿವಕುಮಾರ್ ಬಡ್ಡು ನೇತೃತ್ವದ ಬಣ ಭರ್ಜರಿ ಗೆಲುವು ಸಾಧಿಸಿದ್ದು, ಹಾಲಿ ಅಧ್ಯಕ್ಷ ಎಂ.ಪರಶಿವಮೂರ್ತಿ ತೀವ್ರ ಮುಖಭಂಗ ಅನುಭವಿಸಿದೆ.

ಗ್ರಾಮದ ಸಹಕಾರ ಸಂಘದ ಒಟ್ಟು 12 ನಿರ್ದೇಶಕರ ಪೈಕಿ 12 ಸ್ಥಾನಗಳನ್ನು ಶಿವಕುಮಾರ್ ಬಡ್ಡು ನೇತೃತ್ವದ ಬಣ ತನ್ನ ಮಡಿಲಿಗೆ ಹಾಕಿಕೊಂಡಿದ್ದು, ಗೆದ್ದೇ ತೀರುವೆನೆಂಬ ಅತೀವ ವಿಶ್ವಾಸ ಹೊಂದಿದ್ದ ಹಾಲಿ ಅಧ್ಯಕ್ಷ ಪರಶಿವಮೂರ್ತಿ ಪ್ರಕಟಗೊಂಡ ಫಲಿತಾಂಶದಿಂದ ತೀವ್ರ ನಿರಾಶೆ ಎದುರಿಸುವಂತಾಗಿದೆ.

ಸೋಸಲೆ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಆಯ್ಕೆಗಾಗಿ ಇಂದು ಚುನಾವಣೆ ನಿಗದಿಯಾಗಿತ್ತು. ಚುನಾವಣೆಯಲ್ಲಿ ಶಿವಕುಮಾರ್ ಬಣದಿಂದ ಒಬ್ಬೊಬ್ಬರೇ ನಾಮಪತ್ರ ಸಲ್ಲಿಸಿ 11 ಮಂದಿ ಅವಿರೋಧ ಆಯ್ಕೆಯಾದರೆ, ಹಾಲಿ ಅಧ್ಯಕ್ಷ ಪರಶಿವಮೂರ್ತಿಗೆ ಸೋಲುಣಿಸಬೇಕೆಂಬ ನಿರ್ಧಾರದೊಂದಿಗೆ ಅವರ ವಿರುದ್ಧ ನಂಜುಂಡಯ್ಯರನ್ನು ಕಣಕ್ಕಿಳಿಸಲಾಯಿತು.

ಸಾಲಗಾರ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವಿನ ವಿಶ್ವಾಸದಲ್ಲಿದ್ದ ಪರಶಿವಮೂರ್ತಿ 51 ಮತಗಳ ಅಂತರದಿಂದ ಎಸ್.ನಂಜುಂಡಯ್ಯ ಅವರ ವಿರುದ್ಧ ಸೋಲನುಭವಿಸಿದರು. ಎಸ್.ನಂಜುಂಡಯ್ಯ 205 ಮತ ಪಡೆದರೆ, ಎರಡು ಬಾರಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಎಂ.ಪರಶಿವಮೂರ್ತಿ 154 ಮತ ಪಡೆದು ಸೋಲನುಭವಿಸಿದರು, ಮತ್ತೊಬ್ಬ ಅಭ್ಯರ್ಥಿ ರಾಮಚಂದ್ರ 2 ಮತಗಳನ್ನು ಮಾತ್ರವೇ ಪಡೆದುಕೊಂಡರು.

ಉಳಿದಂತೆ ಸಾಲಗಾರರಲ್ಲದ ಕ್ಷೇತ್ರದಿಂದ ಬಿ.ಎಸ್.ಬಸಪ್ಪ ಎಸ್.ಕುಮಾರ್, ಎಂ.ನಾಗರಾಜು, ಸೋಮಣ್ಣ, ಬಿ.ಶಿವಪ್ರಕಾಶ್, ನೀಲಮ್ಮ ಎಂ.ಭಾಗ್ಯ, ಎನ್.ನಾಗೇಂದ್ರ, ಬಿ.ಎಂ.ಬಸವಣ್ಣ ಹಾಗು ಸಿದ್ದಪ್ಪ ಹಾಗು ಸಾಲಗಾರರಲ್ಲದ ಕ್ಷೇತ್ರದಿಂದ ಎಸ್.ಧರ್ಮ ರತ್ನಕುಮಾರ್ ಅವಿರೋಧವಾಗಿ ಆಯ್ಕೆಯಾದರು.

ಚುನಾವಣಾಧಿಕಾರಿ ಹಸೀನಾ ಇಂದು ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ವಿಜೇತ ಅಭ್ಯರ್ಥಿಗಳ ಹೆಸರು ಘೋಷಣೆ ಮಾಡಿದರು. ಪರಶಿವಮೂರ್ತಿ ವಿರುದ್ಧ ಎಸ್.ನಂಜುಂಡಯ್ಯ ಪ್ರಚಂಡ ಜಯಭೇರಿ ಬಾರಿಸುತ್ತಿದ್ದಂತೆ ಸಹಕಾರ ಸಂಘದ ಆವರಣದಲ್ಲಿ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ,ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ವಿಜೇತ ಅಭ್ಯರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ದಲಿತ ಪ್ರಗತಿ ಪರ ಸಂಘಟನೆಯ ತಾಲೂಕು ಘಟಕದ ಸಂಚಾಲಕ ಸೋಸಲೆ ಶಶಿಕಾಂತ್ ಹಾಲಿ ಅಧ್ಯಕ್ಷ ಪರಶಿವಮೂರ್ತಿ ವಿರುದ್ಧ ಪ್ರಚಂಡ ಜಯಗಳಿಸಿರುವ ನಂಜುಂಡಯ್ಯನವರು ಅಭಿನಂದನೆಗೆ ಅರ್ಹರಾಗಿದ್ದಾರೆ. ಸಹಕಾರ ಮಂಡಳಿಯ ಎಲ್ಲ ಸದಸ್ಯರು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಜೊತೆಗೆ ಈ ಭಾಗದ ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ ದೊರಕಿಸಿಕೊಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು ಎಂದರು.

ಶಿವಕುಮಾರ್ ಬಡ್ಡು ಮಾತನಾಡಿ ವಿಜೇತರನ್ನು ಅಭಿನಂದಿಸಿದರು. ನಿರ್ದೇಶಕ ಎಸ್.ನಂಜುಂಡಯ್ಯ ಮಾತನಾಡಿದರು. ಈ ವೇಳೆ ಬೆನಕನಹಳ್ಳಿ ಗೌಡ್ರ ರಾಜಶೇಖರ ಮೂರ್ತಿ, ಚಿಕ್ಕಬೂವಳ್ಳಿ ನಾಗರಾಜು, ಬಿ.ಎಸ್.ಪರಮೇಶ್, ಗಿರಿಮಲ್ಲೇಶ್, ಸಂತೋಷ, ಪಾಪಣ್ಣಿ, ಎಸ್.ಮಹೇಶ್ ಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ, ಮಧು, ಅಣ್ಣಯ್ಯಸ್ವಾಮಿ, ಬಿ.ಎಸ್.ಪ್ರಭುಸ್ವಾಮಿ, ಪರಶಿವ ಸೇರಿದಂತೆ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಕೋಟೆ ಬಳಿ ಯುವಕನ ಅನುಮಾನಾಸ್ಪದ ಸಾವು

ಗಾಯಗೊಂಡ ಸ್ಥಿತಿಯಲ್ಲಿ ಪೊದೆಯಲ್ಲಿ ಬಿದ್ದಿದ್ದ ಯುವಕ ಮೈಸೂರು ಆಸ್ಪತ್ರೆಯಲ್ಲಿ ಸಾವು

ಕ್ರಿಕೆಟ್ ಆಟದಲ್ಲಿನ ಗೆಲುವು ಸಾವಿಗೆ ಕಾರಣವಾಯ್ತೆ!



ದಿವ್ಯ ಕುಮಾರ್

ಹೆಚ್.ಡಿ.ಕೋಟೆ: ತಾಲೂಕಿನ ವಡ್ಡರ ಗುಡಿ ಗ್ರಾಮದ ಯುವಕ ದಿವ್ಯ ಕುಮಾರ್ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದು, ಮೃತನ ಕುಟುಂಬದವರು ಅಂತರಸಂತೆ ಪೊಲೀಸ್ ಠಾಣೆಗೆ ದೂರು ನೀಡಿ ನ್ಯಾಯ ದೊರಕಿಸಿ ಕೊಡುವಂತೆ ಮನವಿ ಮಾಡಿದ್ದಾರೆ.

ತಾಲೂಕಿನ ವಡ್ಡರಗುಡಿ ಗ್ರಾಮದ ವೆಂಕಟೇಶ್ ಅವರ ಪುತ್ರ ದಿವ್ಯಕುಮಾರ್ ಸಂಶಯಾಸ್ಪದ ರೀತಿಯಲ್ಲಿ ಸಾವನ್ನಪ್ಪಿದವರು.

ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿ ಕಳೆದ 20 ದಿನಗಳ ಹಿಂದೆ ನೇರಳೆ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ ನಡೆದಿದ್ದು, ಕ್ರಿಕೆಟ್ ಪಂದ್ಯಾವಳಿ ಮುಗಿಸಿ, ಬರುವಾಗ ಅಪಘಾತದಿಂದ ಗಾಯಗೊಂಡ ಸ್ಥಿತಿಯಲ್ಲಿ ಪೊದೆಯಲ್ಲಿ ದಿವ್ಯಕುಮಾರ್ ಪತ್ತೆಯಾಗಿದ್ದರು. ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು, ಆದರೆ ಚಿಕಿತ್ಸೆ ಫಲಕಾರಿಯಾಗದೆ ಶನಿವಾರ ಮೃತಪಟ್ಟಿದ್ದಾನೆ.

ಮೃತನ ತಂದೆ, ವಡ್ಡರ ಗುಡಿ ಗ್ರಾಮಸ್ಥರು ಹಾಗೂ ಕುಟುಂಬದವರು ದಿವ್ಯಕುಮಾರ್ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿಲ್ಲ. ಬೈಕಿಗೆ ಹಿಂದಿನಿಂದ ಡಿಕ್ಕಿ ಹೊಡೆದು ಹತ್ಯೆ ಮಾಡಿರುವ ಬಗ್ಗೆ ಅನುಮಾನವಿದೆ. ಕ್ರಿಕೆಟ್ ಪಂದ್ಯದಲ್ಲಿ ತಂಡದ ಗೆಲುವಿಗೆ ಕಾರಣನಾದ ಎಂಬ ಹಿನ್ನೆಲೆಯಲ್ಲಿ ಆತನ ಜೊತೆ ಜಗಳ ತೆಗೆದು ಪಂದ್ಯ ಮುಗಿದು ಮನೆಗೆ ಬರುವ ವೇಳೆ ಹತ್ಯೆ ಮಾಡಲಾಗಿದೆ ಎಂದು ಸಂಶಯ ವ್ಯಕ್ತಪಡಿಸಿದ್ದಾರೆ. ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಿ ನಮಗೆ ನ್ಯಾಯಕೊಡಿಸಿ ಎಂದು ಅಂತರಸಂತೆ ಪೊಲೀಸರನ್ನು ಒತ್ತಾಯಿಸಿದ್ದಾರೆ.

ಪೊಲೀಸರು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಮೃತ ದಿವ್ಯ ಕುಮಾರ್‌ಗೆ ಪತ್ನಿ ಪುಷ್ಪ, ಇಬ್ಬರು ಗಂಡು ಮಕ್ಕಳು, ಸೇರಿದಂತೆ ಅಪಾರ ಬಂಧು ಬಳಗ ಆಗಲಿದ್ದಾರೆ. ಮೃತ ದಿವ್ಯ ಕುಮಾರ್ ಅಂತ್ಯಕ್ರಿಯೆಯನ್ನು ಗ್ರಾಮದಲ್ಲಿ ನೆರವೇರಿಸಲಾಯಿತು.



ಪೊದೆಯಲ್ಲಿ ಬಿದ್ದಿದ್ದ ಯುವಕ

ಕ್ರಿಕೆಟ್ ಆಟ ಮುಗಿಸಿ ಮನೆಗೆ ಬಾರದ ದಿವ್ಯ ಕುಮಾರ್ ಎನ್. ಬೇಗೂರು, ಹ್ಯಾಂಡ್ ಪೋಸ್ಟ್ ಮುಖ್ಯ ರಸ್ತೆಯ ಯಲಮತ್ತೂರು ಗೇಟ್ ಸಮೀಪ, ಪೊದೆಯೊಳಗೆ ಗಾಯ ಗೊಂಡ ಸ್ಥಿತಿಯಲ್ಲಿ ಬಿದ್ದಿದ್ದರು.

ಮೊಬೈಲ್ ಟ್ರ್ಯಾಕ್ ಮಾಡಿ, ಪತ್ತೆ ಮಾಡಿ, ಒಂದು ರಾತ್ರಿ ಪೂರ ನರಳಾಡುತ್ತ ಬಿದ್ದಿದ್ದ ದಿವ್ಯ ಕುಮಾರ್‌ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಹುಣಸೂರಲ್ಲಿ ರಾಜಕಾಲುವೆ ಕಾಮಗಾರಿ ಪುನರಾರಂಭ

ಹುಣಸೂರು,ಮಾ.15(ಕೆಕೆ)– ಪತ್ರಿಕಾ ವರದಿಯಿಂದ ಎಚ್ಚೆತ್ತ ಗುತ್ತಿಗೆದಾರ ರಾಜ ಕಾಲುವೆ ಕಾಮಗಾರಿ ಆರಂಭಿಸಿರುವುದು ಸತ್ಯ ಎಂಎಸ್ ಫೌಂಡೇಶನ್ ಹೋರಾಟದ ಫಲಶೃತಿ.

ಮಂಜುನಾಥ ಬಡಾವಣೆಯಲ್ಲಿರುವ ರಾಜ ಕಾಲುವೆ ಕಾಮಗಾರಿ ಹಾಗೂ ಇನ್ನಿತರೆ ಕಾಮಗಾರಿಗಳ ಟೆಂಡರ್ ಕರೆದು 3 ಕೋಟಿಗಳಿಗೆ ಇದನ್ನು ಗುತ್ತಿಗೆ ಪಡೆದಿದ್ದ ಬೆಂಗಳೂರು ಮೂಲದ ವಾಸುರವರು ಕಾಮಗಾರಿಯನ್ನು ಆರಂಭಿಸಿ ಬಿಲ್ ಪಾಸ್ ಆಗಲಿಲ್ಲ ಎಂಬ ಕಾರಣಕ್ಕೆ ಕಾಮಗಾರಿಯನ್ನು ಅರ್ಧಂಬರ್ಧಕ್ಕೆ ನಿಲ್ಲಿಸಿದ್ದರು. ಇದನ್ನು ಮಾಧ್ಯಮಗಳ ಮೂಲಕ ಬೆಳಕಿಗೆ ತಂದು ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಪುನರಾರಂಭಿಸಲಾಗಿದೆ ಎಂದು ತಿಳಿಸಿದ್ದಾರೆ.



ಏ.1ರಿಂದ ಬ್ಯಾಡ್ಮಿಂಟನ್, ಚೆಸ್, ಟೆನ್ನಿಸ್ ಪಂದ್ಯಗಳಿಗೆ ವಿಶೇಷ ತರಬೇತಿ

ನಂಜನಗೂಡು: ಮಕ್ಕಳಲ್ಲಿ ಕ್ರೀಡಾಸಕ್ತಿ ಬೆಳೆಸಿ, ಕೌಶಲ ವೃದ್ಧಿಸುವ ಸಲುವಾಗಿ ನಗರದ ಟೌನ್ ಟೆನ್ನಿಸ್ ಕ್ಲಬ್ ವತಿಯಿಂದ ಏ.1 ರಿಂದ ಏ.30 ರವರೆಗೆ ಬಾಲ್, ಶಟಲ್ ಬ್ಯಾಡ್ಮಿಂಟನ್, ಚೆಸ್ ಮತ್ತು ಟೆನ್ನಿಸ್ ಪಂದ್ಯಾವಳಿಗೆ ವಿಶೇಷ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಟೌನ್ ಟೆನ್ನಿಸ್ ಕ್ಲಬ್ ಅಧ್ಯಕ್ಷ ನಾಗರಾಜು ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಇಂದಿನ ಯುವ ಪೀಳಿಗೆ ಮೊಬೈಲ್ ಬಳಕೆಯಿಂದಾಗಿ ದೈಹಿಕ ಕಸರತ್ತಿನ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸದೆ, ಕ್ರೀಡೆಯಿಂದ ವಿಮುಖರಾಗುತ್ತಿದ್ದಾರೆ, ಯುವ ಪೀಳಿಗೆಯಲ್ಲಿ ಕ್ರೀಡಾಸಕ್ತಿಯನ್ನು ಬೆಳೆಸಿ, ಕ್ರೀಡಾಪಟುಗಳಲ್ಲಿ ಸಮೃದ್ಧ ಮತ್ತು ಕೌಶಲ್ಯವನ್ನು ವೃದ್ಧಿಸುವ ಮೂಲಕ ಅನುಭವಿ ಆಟಗಾರರನ್ನಾಗಿ ರೂಪಿಸಲು ಈ ವಿಶೇಷ ತರಬೇತಿಯನ್ನು ನಡೆಸಲಾಗುತ್ತಿದೆ. ಏಳನೇ ತರಗತಿಯಿಂದ ಪಿಯುಸಿ ವರೆಗಿನ ವಿದ್ಯಾರ್ಥಿಗಳಿಗಾಗಿ ಶಟಲ್, ಬಾಲ್ ಬ್ಯಾಡ್ಮಿಂಟನ್, ಚೆಸ್ ಪಂದ್ಯಾವಳಿಗೆ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ ಕ್ರೀಡಾ ಪ್ರೇಮಿಗಳು ಮತ್ತು ಪೋಷಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

ಕಾರ್ಯದರ್ಶಿ ಮಂಜು ಮಾತನಾಡಿ ಕ್ರೀಡೆಯನ್ನು ಉತ್ತೇಜಿಸುವ ಸಲುವಾಗಿ ಹಾಗೂ ಕ್ರೀಡಾಪಟುಗಳಿಗೆ ವೇದಿಕೆ ಕಲ್ಪಿಸಿ ಅವಕಾಶ ಮಾಡಿಕೊಡುವ ಸಲುವಾಗಿ ಏ.5 ಮತ್ತು 6 ರಂದು, ರಾಜ್ಯಮಟ್ಟದ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯನ್ನು ಕ್ಲಬ್‌ನ ಆವರಣದಲ್ಲಿ ಆಯೋಜಿಸಲಾಗಿದೆ, ಈ ಪಂದ್ಯಾವಳಿಗೆ ಸುಮಾರು 200 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ, ನಂಜನಗೂಡಿನ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕ್ರೀಡೆಯನ್ನು ಉಳಿಸಲು ನೆರವಾಗಬೇಕು ಎಂದರು.

ಉಪಾಧ್ಯಕ್ಷ ಶ್ಯಾಮ್ ಪಟೇಲ್ ಮಾತನಾಡಿ ಟೌನ್ ಟೆನ್ನಿಸ್ ಕ್ಲಬ್ ಬರಿ ಕ್ರೀಡೆಯಲ್ಲಿ ತೊಡಗಿಸಿಕೊಳ್ಳದೆ ಸಾಮಾಜಿಕ ಚಟುವಟಿಕೆಗಳಲ್ಲೂ ಸಹ ತೊಡಗಿಸಿಕೊಂಡಿದೆ, ಪ್ರತಿ ತಿಂಗಳ ಮೂರನೇ ಶನಿವಾರ ಉಚಿತ ಕಣ್ಣಿನ ತಪಾಸಣೆ ಶಿಬಿರ ಮತ್ತು ಉಚಿತ ಶಸ್ತ್ರಚಿಕಿತ್ಸೆ ಸೇವೆಯನ್ನು ನಡೆಸಿಕೊಂಡು ಬರುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶ್ಯಾಮ್ ಪಟೇಲ್, ಗೋವರ್ಧನ್, ವಿಜಯ್ ಕುಮಾರ್, ರೇಣುಚಂದ್ರ, ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಟೌನ್ ಟೆನ್ನಿಸ್ ಕ್ಲಬ್ ಅಧ್ಯಕ್ಷ ನಾಗರಾಜು.

ಆದಿವಾಸಿಗಳ ಸೌಲಭ್ಯಕ್ಕಾಗಿ ಬಜೆಟ್‌ನಲ್ಲಿ 200 ಕೋಟಿ ಘೋಷಣೆ

ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ಅಧ್ಯಕ್ಷ ಎಂ.ಕೃಷ್ಣಯ್ಯ



ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ಅಧ್ಯಕ್ಷ ಎಂ.ಕೃಷ್ಣಯ್ಯ ಮಾತನಾಡಿದರು.

ಹುಣಸೂರು, ಮಾ.15– ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಬಾರಿಯ ಬಜೆಟ್‌ನಲ್ಲಿ ಅರಣ್ಯದಂಚಿನ ಆದಿವಾಸಿ ಹಾಡಿಗಳಲ್ಲಿ ಸೋಲಿಗರು, ಹಸಲರು, ಜೇನು ಕುರುಬ, ಗೌಡಲು, ಸಿದ್ದಿ, ಕುಡಿಯ, ಮಲೆ ಕುಡಿಯ, ಕಾಡು ಕುರುಬ, ಇರುಳಿಗ, ಕೊರಗ, ಬೆಟ್ಟ ಕುರುಬ, ಯರವ, ಪಣಿಯನ್ ಸಮುದಾಯಗಳ ಮೂಲ ಸೌಕರ್ಯಕ್ಕಾಗಿ 200 ಕೋಟಿ ಘೋಷಿಸಿದ್ದಾರೆ ಎಂದು ಕರ್ನಾ ಟಕ ಆದಿವಾಸಿ ರಕ್ಷಣಾ ಪರಿಷತ್ ಅಧ್ಯಕ್ಷ ಎಂ.ಕೃಷ್ಣಯ್ಯ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 13 ಬುಡಕಟ್ಟುಗಳಿಗೆ ರಾಜ್ಯ ಸಿವಿಲ್ ಸೇವೆಗಳಲ್ಲಿ ಪ್ರಾತಿನಿಧ್ಯ ನೀಡುವ ಸಲುವಾಗಿ ವಿಶೇಷ ನೇರ ನೇಮಕಾತಿ ಮಾಡಲು ಘೋಷಿಸಲಾಗಿದೆ. ರಾಜ್ಯದ ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ತಲಾ 5 ಲಕ್ಷದುಡಿಯುವ ಬಂಡವಾಳವಾಗಿ ಘೋಷಣೆ ಮಾಡಲಾಗಿದೆ. ಶೈಕ್ಷಣಿಕವಾಗಿ 78 ಆಶ್ರಮ ಶಾಲೆಗಳಲ್ಲಿ 7ನೇ ತರಗತಿ ಪ್ರಾರಂಭ ಚಾಮರಾಜನಗರ, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ 5 ವಸತಿ ಶಾಲೆಗಳನ್ನು 12ನೇ ತರಗತಿವರೆಗೆ ಮೇಲ್ದರ್ಜೆಗೇರಿಸು ವಂತೆ ಮುಖ್ಯಮಂತ್ರಿಗಳು ಸೂಚಿಸಿದ್ದಾರೆ. ಇದಕ್ಕಾಗಿ ಅವರಿಗೆ ಅಭಿನಂದನೆ ತಿಳಿಸುತ್ತೇವೆ ಎಂದರು.

ಸಿಎಂ ಕೋಟೆ ತಾಲೂಕಿನ ಕೆರೆ ಹಾಡಿಗೆ ನವೆಂಬರ್‌ನಲ್ಲಿ ಭೇಟಿ ನೀಡಿದ್ದ ವೇಳೆ ಆದಿವಾಸಿಗಳ ಪ್ರಮುಖ ಬೇಡಿಕೆಯಾದ ಆದಿವಾಸಿ ಅಭಿವೃದ್ಧಿ ನಿಗಮ ಸ್ಥಾಪಿಸುವಂತೆ ಮನವಿ ಸಲ್ಲಿಸಲಾಗಿತ್ತು. ಈ ವೇಳೆ ಬಜೆಟ್‌ನಲ್ಲಿ ಘೋಷಣೆ ಮಾಡುವ ಭರವಸೆ ನೀಡಿದ್ದರು. ಜನಸಂಖ್ಯೆ ಕಡಿಮೆ ಇದೆ ಎಂದು ಮುಖ್ಯಮಂತ್ರಿಗಳಿಗೆ ತಪ್ಪು ಮಾಹಿತಿ ನೀಡಿದ್ದರಿಂದ ಘೋಷಣೆ ಮಾಡಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಹುಣಸೂರು ಲ್ಯಾಂಪ್ಸ್ ಸೊಸೈಟಿ ಅಧ್ಯಕ್ಷ ಸುಬ್ರಹ್ಮಣ್ಯ, ಸಂಜಯ್, ಆಶೋಕ್, ಮೂರ್ತಿ ಉಪಸ್ಥಿತರಿದ್ದರು.

ಬೆಟ್ಟದಪುರಕ್ಕೆ ಸಿರ್ವಿ ಸಮಾಜದ ಗುರುಗಳು ಭೇಟಿ

ರಾಜಸ್ಥಾನ ಮೂಲದ ಸಿರ್ವಿ ಸಮಾಜದ ಗುರುಗಳಾದ ಮಾದುವ ಸಿಂಗ್ ದಿವಾನ್ ಸಾಬ್ ಜಿ ಶನಿವಾರ ಬೆಟ್ಟದ ಪುರದ ರಾಜಸ್ಥಾನ ಸಮಾಜ ದವರು ಏರ್ಪಡಿಸಿದ್ದ ಗುರುಗಳ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗ ವಹಿಸಿದ್ದರು. ಸಮಾಜದ ಬಂಧುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನಂತರ ಅನ್ನದಾನ ಕಾರ್ಯಕ್ರಮವನ್ನು ನೆರವೇರಿಸಲಾಯಿತು.



ಕೆ.ಆರ್.ನಗರದಲ್ಲಿ ಭತ್ತ, ರಾಗಿ ಖರೀದಿ ಕೇಂದ್ರಕ್ಕೆ ಚಾಲನೆ



ಕೆ.ಆರ್.ನಗರದಲ್ಲಿ ಭತ್ತ, ರಾಗಿ ಖರೀದಿ ಕೇಂದ್ರಕ್ಕೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಕೆಆರ್.ನಗರ, ಮಾ.15– ರೈತರಿಗೆ ಆರ್ಥಿಕವಾಗಿ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಸರ್ಕಾರ ರಾಗಿ ಮತ್ತು ಭತ್ತ ಸೇರಿದಂತೆ ಇತರೆ ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಿ ಸರ್ಕಾರವೇ ರೈತರಿಂದ ನೇರವಾಗಿ ಖರೀದಿ ಮಾಡುತ್ತಿದ್ದು ಎಲ್ಲಾ ರೈತ ಬಾಂಧವರು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ 2024–25ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಮತ್ತು ರಾಗಿ ಖರೀದಿ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಸಾಲಿಗ್ರಾಮ, ಚುಂಚನಕಟ್ಟೆ ಮತ್ತು ಕೆ.ಆರ್.ನಗರದಲ್ಲಿ ಖರೀದಿ ಕೇಂದ್ರ ತೆರೆಯಲಾಗಿದ್ದು, ರೈತರು ನೇರವಾಗಿ ಖರೀದಿ ಕೇಂದ್ರಕ್ಕೆ ಭತ್ತ ಮತ್ತು ರಾಗಿ ಸರಬರಾಜು ಮಾಡಬೇಕು ಎಂದರು.

ಪ್ರತಿ ಕ್ವಿಂಟಾಲ್ ಭತ್ತಕ್ಕೆ 2300, ಗ್ರೇಡ್–ಎ 2320 ರೂಗಳನ್ನು ನಿಗದಿ ಮಾಡಲಾಗಿದ್ದು, ಪ್ರತಿ ಎಕರೆಗೆ ಕನಿಷ್ಠ 25 ರಿಂದ 50 ಕ್ವಿಂಟಾಲ್‌ವರೆಗೆ ಖರೀದಿ ಮಾಡಲಾಗುತ್ತಿದ್ದು, ಕ್ವಿಂಟಾಲ್ ರಾಗಿಗೆ 4290 ನಂತೆ 10 ಕ್ವಿಂಟಾಲ್‌ನಿಂದ 20ರವರೆಗೆ ಖರೀದಿ ಮಾಡಲು ಸರ್ಕಾರ ನಿರ್ಧರಿಸಿದೆ ಎಂದು ಮಾಹಿತಿ ನೀಡಿದರು.

ಖರೀದಿ ಕೇಂದ್ರದಲ್ಲಿ ಪಡೆದ ರಾಗಿಯನ್ನು ನೇರವಾಗಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರದಾರರಿಗೆ ವಿತರಿಸುವುದರಿಂದ ಗುಣಮಟ್ಟದ ರಾಗಿ ಖರೀದಿ ಮಾಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದ ಶಾಸಕರು ಈ ಬಾರಿ ಬೆಳೆದ ರಾಗಿ ಮಾತ್ರ ಪಡೆಯಬೇಕು. ಹಣದ ಆಸೆಗಾಗಿ ಮಧ್ಯವರ್ತಿಗಳಿಗೆ ಆದ್ಯತೆ ನೀಡಿದ್ದು ಮತ್ತು ಹಳೆ ರಾಗಿ ಖರೀದಿ ಮಾಡಿರುವುದು ಕಂಡು ಬಂದಲ್ಲಿ ಸಂಬಂಧ ಪಟ್ಟ ಅಧಿಕಾರಿಗಳ ತಲೆದಂಡವಾಗಲಿದೆ ಎಂದು ಎಚ್ಚರಿಕೆ ನೀಡಿದರು.

ರೈತರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಸರ್ಕಾರ ಬೆಂಬಲ ಬೆಲೆಯಲ್ಲಿ ಭತ್ತ ಮತ್ತು ರಾಗಿ ಖರೀದಿ ಮಾಡುತ್ತಿದ್ದು, ಖರೀದಿ ಕೇಂದ್ರದ ಅಧಿಕಾರಿಗಳು ಮಧ್ಯವರ್ತಿಗಳು ಹಾಗೂ ಇತರ ಏಜೆಂಟ್‌ಗಳಿಗೆ ಆದ್ಯತೆ ನೀಡಬಾರದೆಂದು ಸೂಚಿಸಿದಲ್ಲದೆ ರೈತರಿಗೆ ಸರ್ಕಾರದ ಸೌಲಭ್ಯ ದೊರೆಯುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಈ ಬಗ್ಗೆ ಸಂಬಂಧಪಟ್ಟ ಆಹಾರ ಇಲಾಖೆ ಅಧಿಕಾರಿಗಳು ನಿಗಾ ವಹಿಸುವಂತೆ ಸೂಚಿಸಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ಪುರಸಭೆ ಅಧ್ಯಕ್ಷ ಶಿವುನಾಯಕ್ ಸದಸ್ಯ ಪ್ರಕಾಶ್, ಸೈಯದ್ ಸಿದ್ದಿಕ್, ಮಾಜಿ ಸದಸ್ಯ ಕೆ.ವಿನಯ್, ಎಪಿಎಂಸಿ ಮಾಜಿ ನಿರ್ದೇಶಕರಾದ ಹೆಚ್.ಪಿ.ಪ್ರಶಾಂತ್, ಹೆಚ್.ಹೆಚ್.ನಾಗೇಂದ್ರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯ ಶಂಕರ್, ವಕ್ತಾರ ಸೈಯದ್ ಜಾಬೀರ್, ರೈತ ಮುಖಂಡರಾದ ಎಂ.ಜೆ.ಕುಮಾರ್, ಜಿಆರ್.ಮಹದೇವ್, ಜಯರಾಮೇಗೌಡ, ಆಹಾರ ಇಲಾಖೆಯ ಶಿರಸ್ತೇದಾರ್ ಮಂಜು ನಾಥ್, ಎಪಿಎಂಸಿ ಕಾರ್ಯದರ್ಶಿ ಮಹೇಶ್ ಇದ್ದರು.

ಹೆಮ್ಮರಗಾಲ ಕೃಷಿ ಪತ್ತಿನ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.

ನಂಜನಗೂಡು: ತಾಲೂಕಿನ ಹೆಮ್ಮರಗಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆರ್.ಸಿದ್ದಶೆಟ್ಟಿ, ಉಪಾಧ್ಯಕ್ಷರಾಗಿ ಶಿವಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

12 ಸದಸ್ಯರ ಬಲವನ್ನು ಹೊಂದಿರುವ ಹೆಮ್ಮರಗಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಶನಿವಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗಾಗಿ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ಆರ್.ಸಿದ್ದಶೆಟ್ಟಿ, ಉಪಾಧ್ಯಕ್ಷ ಸ್ಥಾನಕ್ಕೆ ಶಿವಮ್ಮ ಹೊರತುಪಡಿಸಿ ಯಾರೊಬ್ಬರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾ ಅಧಿಕಾರಿಯಾಗಿದ್ದ ಸಿ.ಪ್ರಸಾದ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ಆರ್.ಸಿದ್ದಶೆಟ್ಟಿ ಮಾತನಾಡಿ ಹೆಮ್ಮರಗಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಪ್ರಸ್ತುತ ನಷ್ಟದಲ್ಲಿದ್ದು ಚುನಾವಣೆಗಾಗಿ ತಗಲುವ ಖರ್ಚನ್ನು ಉಳಿಸುವ ಸಲುವಾಗಿ ಎರಡು ಪಕ್ಷದ ಮುಖಂಡರು ಮಾತನಾಡಿ ನಿರ್ದೇಶಕರು ಸಹ ಅವಿರೋಧವಾಗಿ ಆಯ್ಕೆಯಾಗಿದ್ದೇವೆ. ಅಂತೆಯೇ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನವನ್ನು ಹೊಂದಾಣಿಕೆ ಮೇರೆಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ನನ್ನ ಅವಿರೋಧ ಆಯ್ಕೆಗೆ ಸಹಕಾರ ನೀಡಿದ ಎಲ್ಲಾ ನಿರ್ದೇಶಕರಿಗೂ ಕೃತಜ್ಞತೆ ಸಲ್ಲಿಸುತ್ತೇನೆ.

ಇದೇ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶಿವಮ್ಮ, ಮಾಜಿ ಅಧ್ಯಕ್ಷ ಸಿ.ಸೋಮಣ್ಣ, ನಿರ್ದೇಶಕರಾದ ಕೆ.ನಾಗರಾಜು, ಎಂ.ಮಹದೇವ, ಶಿವಮಾದನಾಯಕ, ನಂಜಪ್ಪ, ಸುಂದ್ರಮ್ಮ, ಮೀನಾಕ್ಷಿ, ಪುಟ್ಟರಾಜನಾಯಕ, ಬಿ.ಆರ್.ವೃಷಬೇಂದ್ರಪ್ಪ, ಪುಟ್ಟಮಾದಶೆಟ್ಟಿ, ಮುಖಂಡರಾದ ಮುದ್ದುಮಾದಶೆಟ್ಟಿ ಕಾರ್ಯದರ್ಶಿ ಮುದ್ದು ಮಾದ ಸ್ವಾಮಿ ಸೇರಿದಂತೆ ಗ್ರಾಮಸ್ಥರು ಮತ್ತು ರೈತರು ಉಪಸ್ಥಿತರಿದ್ದರು.

ಜೆಡಿಎಸ್ ಬೆಂಬಲಿತ ಸದಸ್ಯರಿಗೆ ಅಭಿನಂದನೆ



ಬನ್ನೂರಿನ ಸಮೀಪದ ಚಾಮನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದಿಂದ ಆಯ್ಕೆಯಾದ ಎಲ್ಲಾ ಜೆಡಿಎಸ್ ಬೆಂಬಲಿತ ಸದಸ್ಯರನ್ನು ಟಿ.ನರಸೀಪುರ ಕ್ಷೇತ್ರದ ಜೆಡಿಎಸ್ ಮಾಜಿ ಶಾಸಕರಾದ ಎಂ.ಅಶ್ವಿನ್‌ಕುಮಾರ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ಬನ್ನೂರು ಭಾಗದ ಎಲ್ಲಾ ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.

ಸರಗೂರಲ್ಲಿ ಮೂರು ದಿನಗಳ ಹೈನುಗಾರಿಕೆ, ಕೃಷಿ ಮೇಳಕ್ಕೆ ಚಾಲನೆ

ಮಹಿಳೆಯರ ಸಬಲೀಕರಣ, ರೈತರ ಶ್ರೇಯೋಭಿವೃದ್ಧಿಗೆ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಪಣ



ಹೈನುಗಾರಿಕೆ ಮತ್ತು ಕೃಷಿ ಮೇಳ ಕಾರ್ಯಕ್ರಮವನ್ನು ಪಶುಪಾಲನಾ ಇಲಾಖೆಯ ಉಪ ನಿರ್ದೇಶಕ ಡಾ. ನಾಗರಾಜು ಉದ್ಘಾಟಿಸಿದರು.

ಸರಗೂರು: ಮಹಿಳೆಯರನ್ನು ಆರ್ಥಿಕ ಸಬಲೀಕರಣಕ್ಕಾಗಿ ಮತ್ತು ಮುಖ್ಯವಾಹಿನಿಗೆ ತರಲು ಮತ್ತು ರೈತರ ಶ್ರೇಯೋಭಿವೃದ್ಧಿಗೆ ಪ್ರಮುಖವಾಗಿ ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್ ಪಣ ತೊಟ್ಟಿದೆ ಎಂದು ಪಶುಪಾಲನಾ ಇಲಾಖೆಯ ಉಪ ನಿರ್ದೇಶಕ ಡಾ.ನಾಗರಾಜು ತಿಳಿಸಿದರು.

ಪಟ್ಟಣದ ಜಯಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ಶನಿವಾರ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟಿನ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ ಕಾರ್ಯಕ್ರಮ ವಿಭಾಗ, ಸುತ್ತೂರಿನ ಕೃಷಿ ವಿಜ್ಞಾನ ಕೇಂದ್ರ, ಮೈಸೂರಿನ ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆ, ಮೈಸೂರು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿರುವ ಮೂರು ದಿನಗಳ ಹೈನುಗಾರಿಕೆ ಮತ್ತು ಕೃಷಿ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ಹೈನುಗಾರಿಕೆಯನ್ನು ಉತ್ತೇಜಿಸುವ ಸಲುವಾಗಿ ಹಲಾವಾರು ಯೋಜನೆಗಳನ್ನು ಜಾರಿಗೆ ತಂದಿದೆ, ಕಾಲು ಬಾಯಿ ರೋಗ ತಡೆಗಟ್ಟಲು ಲಸಿಕೆಗಳನ್ನು ಹಾಕಲಾಗುತ್ತಿದೆ, ಜಾನುವಾರುಗಳಿಗೆ ವಿಮೆ ಯೋಜನೆಗಳಿವೆ, ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಸೇರಿದಂತೆ ನೂರಾರು ಯೋಜನೆಗಳಿದ್ದು ಇವುಗಳ ಸದುಪಯೋಗ ಪಡೆದುಕೊಳ್ಳುವಂತೆ ರೈತರಿಗೆ ಮಾಹಿತಿ ನೀಡಿದರು.

ರಾಜ್ಯದಲ್ಲಿ ಪಶು ವೈದ್ಯರ ಕೊರತೆ ನೀಗಿಸಲು ಈಗಿನ ಸರ್ಕಾರ 400 ಮಂದಿ ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲಾಗುತ್ತಿದೆ ಎಂದು ತಿಳಿಸಿದರು.

ವಿವೇಕಾನಂದ ಯೂತ್ ಮೂವ್‌ಮೆಂಟಿನ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ ಕಾರ್ಯಕ್ರಮ ವಿಭಾಗ ನಿರ್ದೇಶಕ ಡಾ.ಡೆನ್ನಿಸ್ ಚೌಹಾಣ್ ಮಾತನಾಡಿ ಇಂದಿನ ದಿನಗಳಲ್ಲಿ ಹಸು ಸಾಕಾಣಿಕೆ ಮಾಡುತ್ತಿದ್ದಾರೆ ಎಂದರೆ ಅವರನ್ನು ಕೀಳಾಗಿ ಕಾಣುವ ಪರಿಸ್ಥಿತಿ ಉದ್ಭವವಾಗಿದೆ, ಆದರೆ ಹೈನುಗಾರಿಕೆಯು ಇಂದಿನ ದಿನಗಳಲ್ಲಿ ಹೆಚ್ಚಿನ ಲಾಭದಾಯಕ ಉದ್ಯಮಗಳಲ್ಲಿ ಒಂದಾಗಿದೆ ಎಂದು ಅವರು ತಿಳಿಸಿದರು.

ವಿವೇಕಾನಂದ ಆಸ್ಪತ್ರೆ ಕೀಲು ಮತ್ತು ಮೂಳೆ ತಜ್ಞ ಡಾ.ಎಂ.ಆರ್.ಸೀತಾರಾಮ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಡಾ.ಡೆನ್ನಿಸ್ ಚೌಹಾಣ್, ಡಾ.ರಶ್ಮಿ ಚೌಹಾಣ್, ಸುತ್ತೂರು ಕೆ.ವಿ.ಕೆ. ಕೇಂದ್ರದ ವಿಜ್ಞಾನಿ ಡಾ.ಬಿ.ಎನ್.ಜ್ಞಾನೇಶ್, ಮೈಮುಲ್ ವ್ಯವಸ್ಥಾಪಕ ಕರಿಬಸವರಾಜು, ಪಶುಪಾಲನೆ ಇಲಾಖೆಯ ಸಹಾಯಕ ನಿರ್ದೇಶಕ ವೈ.ಡಿ.ರಾಜಣ್ಣ, ವಿವೇಕಾನಂದ ಯೂತ್ ಮೂವ್ ಮೆಂಟ್ನ ಹಿರಿಯ ವ್ಯವಸ್ಥಾಪಕ ನಾಯಕ್, ಚಿನ್ನಮಹದೇವ್, ಅಕ್ಷಯ್, ನಾಗೇಂದ್ರ ರಾಜು, ರವಿಕುಮಾರ್, ಶಂಕರ್, ಹಾಗೂ ರೈತರು ಭಾಗವಹಿಸಿದ್ದರು.

ನಾಗಲಾಂಭ ನಿಧನ



ಮೂಗೂರು: ಗ್ರಾಮದ ಅಂಗಡಿ ಬೀದಿಯ ನಿವಾಸಿ (ಮಾಗಡಿ ಅಂಗಡಿ) ಎಂ.ಜಿ. ಶಿವಣ್ಣನವರ ಧರ್ಮಪತ್ನಿ ಟಿ.ವಿ.ನಾಗಲಾಂಭ (85) ಅವರು ವಯೋಸಹಜ ಖಾಯಿಲೆಯಿಂದ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ಮಧ್ಯಾಹ್ನ ನಿಧನ ಹೊಂದಿದರು. ಮೃತರು ಮೂವರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಗ್ರಾಮದ ಜಮೀನಿನಲ್ಲಿ ಭಾನುವಾರ ಮಧ್ಯಾಹ್ನ 1 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಗ್ರೇಟರ್ ಮೈಸೂರು: ಸಮಸ್ಯೆಗಳು ಮತ್ತು ಸವಾಲುಗಳು' ಕಾರ್ಯಾಗಾರ

ಮೈಸೂರಿನ ಭವಿಷ್ಯದ ಸವಾಲುಗಳ ನಿರ್ವಹಣೆಗೆ ಸುದೀರ್ಘಾವಧಿಯ ಯೋಜನೆ ರೂಪಿಸಲು ಕಾರ್ಯಾಗಾರದಲ್ಲಿ ತಜ್ಞರಿಗೆ ಕರೆ

ಮೈಸೂರು, ಮಾ.15(ಆರ್‌ಕೆ)– ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನ ಪ್ರೊ.ಕೆ.ಎಸ್. ರಂಗಪ್ಪ ಸಭಾಂಗಣದಲ್ಲಿ ಇಂದು 'ಗ್ರೇಟರ್ ಮೈಸೂರು: ಸಮಸ್ಯೆಗಳು ಮತ್ತು ಸವಾಲುಗಳು' ವಿಷಯ ಕುರಿತಂತೆ ಕಾರ್ಯಾಗಾರ ನಡೆಯಿತು.

ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಇನ್‌ಸ್ಟಿಟ್ಯೂಟ್ ಆಫ್ ಟೌನ್ ಪ್ಲಾನರ್ಸ್, ಮೈಸೂರು ಪ್ರಾದೇಶಿಕ ಕೇಂದ್ರ ಹಾಗೂ ಬೆಂಗಳೂರಿನ ಪ್ರಾದೇಶಿಕ ಚಾಪ್ಟರ್ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಕಾರ್ಯಾಗಾರವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ ಉದ್ಘಾಟಿಸಿದರು. ಈ ಸಂದರ್ಭ ಟೌನ್ ಪ್ಲಾನರ್ಸ್, ಆರ್ಕಿಟೆಕ್ಚರ್‌ಗಳನ್ನುದ್ದೇಶಿಸಿ ಮಾತನಾಡಿದ ಅವರು, ಅಂದಿನ ಆಡಳಿತಗಾರರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ.ವಿಶ್ವೇಶ್ವರಯ್ಯ, ದಿವಾನ್ ರಂಗಾಚಾರ್ಲು ಮತ್ತು ದಿವಾನ್ ಪೂರ್ಣಯ್ಯ ಅವರು ದೂರ ದೃಷ್ಟಿಯಿಂದ ಮೈಸೂರು ನಗರವನ್ನು ಯೋಜನಾಬದ್ಧವಾಗಿ ರೂಪಿಸಿದ್ದರು. ವಿಪತ್ತು ನಿರೋಧಕ ನಗರಗಳನ್ನು ಯೋಜಿಸುವ ಅಗತ್ಯತೆ ಬಗ್ಗೆ ಈ ಹಿಂದಿನ ಆಡಳಿತಗಾರರು ದೂರದೃಷ್ಟಿಯನ್ನು ಹೊಂದಿದ್ದರು ಎಂದು ತಿಳಿಸಿದರು.

ವಿಶೇಷವಾಗಿ ಮುಂಬೈನಂತಹ ಮಹಾನಗರಗಳಲ್ಲಿ ಆಗಾಗ್ಗೆ ಪ್ರವಾಹ ಸಂಭವಿಸುತ್ತವೆ. ಐತಿಹಾಸಿಕ ಸ್ಥಳಗಳಾದ ಸೋಮನಾಥಪುರದ ಚನ್ನಕೇಶವ ದೇವಸ್ಥಾನ ಮತ್ತು ಮೈಸೂರಿನ ಜಯಲಕ್ಷ್ಮಿ ವಿಲಾಸ ಅರಮನೆಯಲ್ಲಿರುವ ವಾಸ್ತುಶಿಲ್ಪ ಮತ್ತು ನಿರ್ಮಾಣ ತಂತ್ರಗಳು ಇಂದಿಗೂ ವಿಶೇಷ ಆಸಕ್ತಿಗಳಾಗಿವೆ. ಆಧುನಿಕ ತಂತ್ರಜ್ಞಾನ ಮತ್ತು ಸಲಕರಣೆಗಳ ಸಹಾಯವಿಲ್ಲದೆ ಕುಶಲಕರ್ಮಿಗಳು ಸಾಧಿಸುವ ನೈಪುಣ್ಯತೆಯನ್ನು ಈ ಹಿಂದೆಯೇ ತೋರಿಸಿ ಅಸಾಧಾರಣ ಸಾಧನೆ ಮಾಡಿದ್ದರು. ಪ್ರಾಚೀನ ಯೋಜಕರು ನಗರದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿದ್ದರಲ್ಲದೆ, ಮೈಸೂರಿನ ವಿಸ್ತರಣೆ, ಪರಿಣಾಮಕಾರಿ ಬೆಳವಣಿಗೆ ಹಾಗೂ ಸುಸ್ಥಿರ ಯೋಜನಾಬದ್ಧ ನಗರ ರೂಪಿಸುವಲ್ಲಿ ಶ್ರಮಿಸಿದ್ದರು ಎಂದು ಅವರು ಇದೇ ಸಂದರ್ಭ ಸ್ಮರಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮುಡಾ ಆಯುಕ್ತ ಎ.ಎನ್.ರಘುನಂದನ್ ಮಾತನಾಡಿ, ಮೈಸೂರು ಯೋಜನಾಬದ್ಧವಾಗಿ ಬದಲಾವಣೆಗೆ ಒಳಪಡುತ್ತಿದೆ. ಮುಂದಿನ 50 ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ನಗರವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನಿರ್ವಹಣೆ ಮಾಡಬೇಕಾಗಿದೆ. ಮೈಸೂರನ್ನು ಮತ್ತೊಂದು ಬೆಂಗಳೂರು ನಗರವನ್ನಾಗಿ ಮಾಡಲು ಬಿಡಬಾರದು. ಇಲ್ಲಿನ ಸುಸ್ಥಿರ ಬೆಳವಣಿಗೆಗೆ ನೀತಿ ರೂಪಕರು, ಆಡಳಿತಗಾರರು, ಶಿಕ್ಷಣ ತಜ್ಞರು, ನಗರ ಯೋಜಕರು ಹೆಚ್ಚಾಗಿ ಒಗ್ಗೂಡಬೇಕಾಗಿದೆ ಎಂದರು.

ಭಾರತ ದೇಶದಲ್ಲಿ ಅತೀ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಸ್ಥಳಗಳಲ್ಲಿ ಮೈಸೂರು ನಗರವೂ ಒಂದಾಗಿರುವುದರಿಂದ ಕೇವಲ ದೇಶಕ್ಕಷ್ಟೇ ಅಲ್ಲದೆ ವಿಶ್ವವೇ ಎದುರು ನೋಡುವಂತಹ ಹೆಚ್ಚಿನ ಪ್ರವಾಸಿಗರು ಭೇಟಿ ನೀಡುವ ಹಾಗೆ ಮೈಸೂರು ನಗರವನ್ನು ವಿಸ್ತರಿಸಿ, ಮೂಲ ಸೌಲಭ್ಯ ಕಲ್ಪಿಸಲು ಎಲ್ಲರೂ ಮುಂದಾಗಬೇಕು ಎಂದು ರಘುನಂದನ್ ಇದೇ ಸಂದರ್ಭ ನುಡಿದರು.

ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಐಟಿಪಿಐ ಮೈಸೂರು ಕೇಂದ್ರದ ಸಂಚಾಲಕ ಮತ್ತು ಯೋಜನಾ ಮತ್ತು ವಾಸ್ತುಶಿಲ್ಪ ಶಾಲೆಯ ಮಾಜಿ ನಿರ್ದೇಶಕ ಪ್ರೊ.ಬಿ.ಶಂಕರ್ ಮಾತನಾಡಿ, ಭಾರತ ಮತ್ತು ಜಾಗತಿಕವಾಗಿ ನಗರ ಯೋಜನಾ ಮಾದರಿಗಳಂತೆ ಮೈಸೂರು ನಗರವನ್ನು ಅಭಿವೃದ್ಧಿಪಡಿಸಿ ಸುಸ್ಥಿರ ಭೂ ಬಳಕೆ ಯೋಜನೆ ಮತ್ತು ತಂತ್ರಜ್ಞಾನ ಚಾಲಿತ ಸಾರಿಗೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕಿದೆ. ನಗರವನ್ನು ವಿಸ್ತರಿಸುವ ಸಮಯದಲ್ಲಿ ಇಲ್ಲಿನ ಪರಂಪರೆ, ಪುರಾತತ್ವ ಮತ್ತು ಸಂಸ್ಕೃತಿಯನ್ನು ರಚಿಸುವುದನ್ನು ಪ್ರಧಾನವಾಗಿರಿಸಿಕೊಂಡು ಈಗಿನ ಪರಿಸರಕ್ಕೆ ಹಾನಿಯಾಗದಂತೆ ಗಮನಹರಿಸುವುದು ಅತ್ಯಗತ್ಯ ಎಂದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಟೌನ್ ಪ್ಲಾನರ್ ಮೆಂಬರ್ (ಟಿಪಿಎಂ) ಆದ ಡಾ.ಶಶಿಕುಮಾರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಾಗಾರದಲ್ಲಿ ನವದೆಹಲಿಯ ಇನ್‌ಸ್ಟಿಟ್ಯೂಟ್ ಆಫ್ ಟೌನ್ ಪ್ಲಾನರ್ಸ್ ಇಂಡಿಯಾದ ಕೌನ್ಸಿಲ್ ಸದಸ್ಯ ಎಸ್.ಬಿ. ಹೊನ್ನೂರ್, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನ ಮುಖ್ಯಸ್ಥ ಡಾ.ಹೆಚ್.ಎಸ್.ಕುಮಾರ, ನಿರ್ದೇಶಕ ಪ್ರೊ.ಪ್ರಮೋದ್ ಎಂ.ಗವರಿ, ಮೈಸೂರು ಪ್ರಾದೇಶಿಕ ಸೆಂಟರ್‌ನ ಕಾರ್ಯದರ್ಶಿ ಡಾ.ಎಸ್.ಯಶಸ್ವಿನಿ, ಕರ್ನಾಟಕ ವಲಯ ವಿಭಾಗದ ವಿದ್ಯಾಧರ್ ಒಡೆಯರ್ ಇತರರು ಭಾಗವಹಿಸಿದ್ದರು. ಪ್ಲಾನಿಂಗ್ ಮತ್ತು ಆರ್ಕಿಟೆಕ್ಚರ್ ಕ್ಷೇತ್ರದ ತಜ್ಞರು ನಂತರದ ಗೋಷ್ಠಿಗಳಲ್ಲಿ ಗ್ರೇಟರ್ ಮೈಸೂರು ಕುರಿತಂತೆ ವಿಷಯ ಮಂಡಿಸಿದರು.



ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನ ಪ್ರೊ.ಕೆ.ಎಸ್. ರಂಗಪ್ಪ ಸಭಾಂಗಣದಲ್ಲಿ ಶನಿವಾರ 'ಗ್ರೇಟರ್ ಮೈಸೂರು: ಸಮಸ್ಯೆಗಳು ಮತ್ತು ಸವಾಲುಗಳು' ವಿಷಯ ಕುರಿತಂತೆ ಕಾರ್ಯಾಗಾರವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಉದ್ಘಾಟಿಸಿದರು. (ಎಡದಿಂದ) ಡಾ.ಹೆಚ್.ಎಸ್.ಕುಮಾರ, ಮುಡಾ ಆಯುಕ್ತ ಎ.ಎನ್.ರಘುನಂದನ್, ಡಾ.ಎಲ್.ಶಶಿಕುಮಾರ್, ಡಾ.ಬಿ.ಶಂಕರ್, ಪ್ರೊ.ಪ್ರಮೋದ್ ಎಂ.ಗವರಿ ಹಾಗೂ ಡಾ.ಎಸ್.ಯಶಸ್ವಿನಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಗನ ಕುಸುಮ(ಕ) + ರಾಬರ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೀಮ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಂಕ್ರಾಂತಿಕು ವಸ್ತುನಾರು (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಸ್ವೀಟ್ ಹಾರ್ಟ್(ತ)	4 ಪ್ರದರ್ಶನಗಳು
ಸಂಗಂ	
ಕೋರ್ಟ್(ತೆ)	4 ಪ್ರದರ್ಶನಗಳು
ಲಿಡೋ	
ಡಾಕೂ ಮಹಾರಾಜ್(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಸ್ಟರ್ (ತ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಡಿಪ್ಲೊಮೆಟ್ (ಹಿಂ): ಬೆ.10ಕ್ಕೆ, ಮ.12.50ಕ್ಕೆ, ರಾ.7ಕ್ಕೆ, ಇಂಟರ್‌ಸ್ಟೆಲ್ಲರ್ (ಇಂ): ಮ.3.40ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ನೊವೊಕೇನ್ (ಇಂ): ಬೆ.10.30ಕ್ಕೆ, ರಾ.10.20ಕ್ಕೆ, ಡ್ರ್ಯಾಗನ್ (ತ): ಮ.1ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಸಂ.4.10ಕ್ಕೆ, ದಿಲ್‌ರೂಬ (ತೆ): ರಾ.7.15ಕ್ಕೆ.
ಸ್ಕ್ರೀನ್ 3	ಡ್ರ್ಯಾಗನ್ (ತ): ಬೆ.10ಕ್ಕೆ, ಸ್ವೀಟ್‌ಹಾರ್ಟ್ (ತ): ಮ.1.05ಕ್ಕೆ, ಅ (ಕ): ಸಂ.4.10ಕ್ಕೆ, ಛಾವಾ (ಹಿಂ): ರಾ.7.10ಕ್ಕೆ, ದಿ ಡಿಪ್ಲೊಮೆಟ್ (ಹಿಂ): ಬೆ.10
ಸ್ಕ್ರೀನ್ 4	ಅಪ್ಪು (ಕ): ಬೆ.10.40ಕ್ಕೆ, ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.30ಕ್ಕೆ, ಪೆರುಸು (ತ): ಸಂ.6.30ಕ್ಕೆ, ಸ್ವೀಟ್ ಹಾರ್ಟ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅಪ್ಪು (ಕ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ದಿಲ್‌ರೂಬಾ (ತೆ): ರಾ.9.25ಕ್ಕೆ.
ಸ್ಕ್ರೀನ್ 3	ಛಾವಾ (ಹಿಂ): ಸಂ.6.10ಕ್ಕೆ, ಅಪ್ಪು (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿಜಯ ವಿಠಲ ಕಾಲೇಜಲ್ಲಿ 'ಪೈ' ದಿನಾಚರಣೆ



ಮೈಸೂರಿನ ವಿಜಯ ವಿಠ್ಠಲ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ 'ಪೈ ದಿನ' ಹಾಗೂ ಆಲ್ಬರ್ಟ್ ಐನ್‌ಸ್ಟೀನ್ ಜನ್ಮದಿನಾಚರಣೆಯನ್ನು ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್ ಉದ್ಘಾಟಿಸಿದರು.

ಮೈಸೂರು, ಮಾ.15(ಎಸ್‌ಬಿಡಿ)– ಮೈಸೂರಿನ ವಿಜಯ ವಿಠ್ಠಲ ಪದವಿ ಪೂರ್ವ ಕಾಲೇಜಿನಲ್ಲಿ 'ಪೈ ದಿನಾಚರಣೆ' ಹಾಗೂ ಭೌತಶಾಸ್ತ್ರಜ್ಞ ಆಲ್ಬರ್ಟ್ ಐನ್‌ಸ್ಟೀನ್ ಜನ್ಮದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್ ಮಾತನಾಡಿ, 'ಪೈ' ಗಣಿತ ಲೋಕದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದ್ದು, ಅದಿಲ್ಲದೆ ಹಲವಾರು ಸಮಸ್ಯೆಗಳಿಗೆ ಪರಿಹಾರ ಅಸಾಧ್ಯ. ಇದನ್ನು ಭೌತಶಾಸ್ತ್ರ ಮತ್ತು ಇಂಜಿನಿಯರಿಂಗ್‌ನ ಎಲ್ಲಾ ವಿಭಾಗದ ವಿಷಯಗಳಿಗೂ ಉಪಯೋಗಿಸಲಾಗುತ್ತದೆ ಎಂದರು.

ಪ್ರಾಚೀನ ಈಜಿಪ್ಟ್‌ನಲ್ಲಿ ವೃತ್ತದ ವಿಸ್ತೀರ್ಣವನ್ನು ಲೆಕ್ಕ ಹಾಕಲು ಸರಳ ಅಂದಾಜು ಅಂದರೆ ತ್ರಿಜ್ಯದ ವರ್ಗಕ್ಕೆ ಮೂರು ಪಟ್ಟು ಅಳತೆಯನ್ನು ಬಳಸಲಾಗುತ್ತಿತ್ತು ಎಂದು ಹೇಳಲಾಗಿದೆ. ಪ್ರಸಿದ್ಧ ಗ್ರೀಕ್ ಗಣಿತಜ್ಞ ಆರ್ಕಿಮಿಡಿಸ್ ಪೈ ಅವರು ಹೆಚ್ಚು ನಿಖರವಾದ ಮೌಲ್ಯವನ್ನು ನಿರ್ಧರಿಸಲು ಗಮನಾರ್ಹ ಕೊಡುಗೆಗಳನ್ನು ನೀಡಿದರು. ಭಾರತೀಯ ವಿಜ್ಞಾನ ಸಂಸ್ಥೆಯ ಭೌತಶಾಸ್ತ್ರಜ್ಞರ ಇತ್ತೀಚಿನ ಸಂಶೋಧನೆಯು ಹೊಸ ಸರಣಿ ಪ್ರಾತಿನಿಧ್ಯವನ್ನು ಪರಿಚಯಿಸಿದೆ. ಸೂಪರ್ ಕಂಡಕ್ಟರ್ಸ್ ಮತ್ತು ಸೂಪರ್ ನೋವಾಗಳ ಆಳವಾದ ಅಧ್ಯಯನಕ್ಕೆ 'ಪೈ'ನ ಜ್ಞಾನ ಅತ್ಯಂತ ಸಹಕಾರಿ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಆಲ್ಬರ್ಟ್ ಐನ್‌ಸ್ಟೀನ್ 20ನೇ ಶತಮಾನದ ಜರ್ಮನಿ ಮೂಲದ ಭೌತವಿಜ್ಞಾನಿ. ಕಷ್ಟಜೀವಿ, ಚತುರಮತಿಯಾಗಿದ್ದ ಈ ಶ್ರೇಷ್ಠ ಗಣಿತಜ್ಞ, ವಿಜ್ಞಾನ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಸಾಪೇಕ್ಷತಾ ಸಿದ್ಧಾಂತವನ್ನು ಜಗತ್ತಿನ ಮುಂದಿಟ್ಟವರು. ದ್ಯುತಿ ವಿದ್ಯುತ್ ಪರಿಣಾಮ ಕುರಿತು ಇವರು ಮಂಡಿಸಿದ ವಾದ ಹಾಗೂ ಸೈದ್ಧಾಂತಿಕ ಭೌತಶಾಸ್ತ್ರಕ್ಕೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಇವರಿಗೆ 1921ರಲ್ಲಿ ನೊಬೆಲ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಮೂಲವಿಜ್ಞಾನ ಮತ್ತು ಮೂಲ ಗಣಿತದ ಅಧ್ಯಯನಕ್ಕೆ ವಿಶೇಷವಾದ ಒತ್ತು ನೀಡಿದರೆ, ಅಧ್ಯಯನ ಹಾಗೂ ಸಾಧನೆಗೆ ಸಾಕಷ್ಟು ಅವಕಾಶಗಳು ಸೃಷ್ಟಿಯಾಗುತ್ತವೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕಿಯರಾದ ಬಿ.ಆರ್.ಸೌಮ್ಯಾ ಹಾಗೂ ಆರ್.ಎಸ್. ಶೀಲಾ, ಹೆಚ್.ಎ.ಸುನೀತಾ, ಬಿ.ಎಸ್. ಸ್ವರೂಪ ಮತ್ತಿತರರು ಉಪಸ್ಥಿತರಿದ್ದರು.

'ಮಿತ್ರ'ನ ವರದಿಗೆ ಅಧಿಕಾರಿಗಳ ಕ್ಷಿಪ್ರ ಸ್ಪಂದನೆ

ಮೃತ್ಯು ಕಂದಕಕ್ಕೆ ಎಚ್ಚರಿಕೆ ಪಟ್ಟಿ; ಸೈಕಲ್ ಟ್ರ್ಯಾಕ್‌ನಲ್ಲಿ ವಾಹನ ನಿಲುಗಡೆ ನಿಷಿದ್ಧ


ಮೈಸೂರು–ಮಾನಂದವಾಡಿ ರಸ್ತೆಯ ರಾಜಕಾಲುವೆ ಸೇತುವೆ ಬಳಿ ಕೃಷ್ಣರಾಜ ಸಂಚಾರ ಠಾಣೆ ಪೊಲೀಸರು, ಬ್ಯಾರಿಕೇಡ್ ಅಳವಡಿಸಿದರು. ಮತ್ತೊಂದು ಚಿತ್ರದಲ್ಲಿ ವಿಶ್ವಮಾನವ ಜೋಡಿ ರಸ್ತೆಯ ಸೈಕಲ್ ಟ್ರ್ಯಾಕ್‌ನಲ್ಲಿ ಮುರಿದಿದ್ದ ಬ್ಯಾರಿಕೇಡ್ ಪೋಲ್‌ಗಳನ್ನು ಮರು ಅಳವಡಿಸಿ, ಪರಿಶೀಲಿಸುತ್ತಿರುವ ಪೊಲೀಸರನ್ನು ಕಾಣಬಹುದು.

ಮೈಸೂರು ಮಿತ್ರ ಫಲಶ್ರುತಿ

ಮೈಸೂರು, ಮಾ.15(ಎಸ್‌ಬಿಡಿ)– ಸಾರ್ವಜನಿಕ ಸಮಸ್ಯೆಗಳ ಬಗ್ಗೆ 'ಮೈಸೂರು ಮಿತ್ರ' ಪ್ರಕಟಿಸಿದ ವರದಿಗಳಿಗೆ ಸಂಚಾರ ವಿಭಾಗದ ಪೊಲೀಸರು ತಕ್ಷಣ ಸ್ಪಂದಿಸಿದ್ದಾರೆ.

ಮೈಸೂರು–ಮಾನಂದವಾಡಿ ರಸ್ತೆ, ರೇಷ್ಮೆ ಬೀಜೋತ್ಪಾದನಾ ಕೇಂದ್ರದ ಬಳಿಯ ರಾಜಕಾಲುವೆ ದುಸ್ಥಿತಿ ಹಾಗೂ ಅದರಿಂದ ಸಂಭವಿಸಬಹುದಾದ ಅನಾಹುತಗಳ ಬಗ್ಗೆ 'ಮೈಸೂರು ಮಿತ್ರ'ನ ಶನಿವಾರ (ಮಾ.15)ದ ಸಂಚಿಕೆಯಲ್ಲಿ 'ಮೈಸೂರು–ಮಾನಂದವಾಡಿ ರಸ್ತೆಯಲ್ಲಿ ಮೃತ್ಯು ಕಂದಕ' ಶೀರ್ಷಿಕೆಯಡಿ ಸಚಿತ್ರ ವರದಿ ಪ್ರಕಟವಾಗಿತ್ತು. ಇದನ್ನು ಗಮನಿಸಿದ ಕೂಡಲೇ ಸಂಚಾರ ವಿಭಾಗದ ಪೊಲೀಸರು ಸ್ಥಳಕ್ಕೆ ತೆರಳಿ, ಸೇತುವೆ ಬಳಿ ಕುಸಿದಿರುವ ಭಾಗಕ್ಕೆ ಬ್ಯಾರಿಕೇಡ್ ಹಾಗೂ ಟೇಪ್‌ಗಳನ್ನು ಅಳವಡಿಸಿದ್ದಾರೆ. ಈ ಮೂಲಕ ವಾಹನ ಸವಾರರಿಗೆ ಅಪಾಯದ ಸೂಚನೆ ನೀಡಿದ್ದಾರೆ.

ಸಂಚಾರ ವಿಭಾಗದ ಎಸಿಪಿ ಎಂ.ಶಿವಶಂಕರ್ ಸೂಚನೆ ಮೇರೆಗೆ ಕೃಷ್ಣರಾಜ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ, ಸಬ್‌ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ ತ್ವರಿತ ಕ್ರಮ ಕೈಗೊಂಡಿದ್ದಾರೆ. ಪೊಲೀಸರ ಸ್ಪಂದನೆಗೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹೀಗೆಯೇ ಸಂಬಂಧಪಟ್ಟ ಅಧಿಕಾರಿಗಳು ಸೇತುವೆ ದುರಸ್ತಿಗೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಸೈಕಲ್ ಟ್ರ್ಯಾಕ್ ಮೇಲೆ ನಿಗಾ: ವಿಶ್ವಮಾನವ ಜೋಡಿ ರಸ್ತೆಯಲ್ಲಿನ ಸೈಕಲ್ ಟ್ರ್ಯಾಕ್‌ನಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಿದ್ದರ ಬಗ್ಗೆಯೂ 'ಮೈಸೂರು ಮಿತ್ರ'ನ ಮಾ.12ರ ಸಂಚಿಕೆಯಲ್ಲಿ ಗಮನ ಸೆಳೆಯಲಾಗಿತ್ತು. ವಾಹನದ ಬಳಿ ಬಾಲಕಿಯೊಬ್ಬಳು ಸೈಕಲ್ ನಿಲ್ಲಿಸಿಕೊಂಡು ಈ ಅವ್ಯವಸ್ಥೆಯ ಬಗ್ಗೆ ಯೋಚಿಸುತ್ತಿರುವ ಚಿತ್ರ ಸಹಿತ 'ಸೈಕಲ್ ಟ್ರ್ಯಾಕ್‌ನ ದುಸ್ಥಿತಿಗೆ ಬಾಲೆಯ ಬೇಸರ!' ಶೀರ್ಷಿಕೆಯಲ್ಲಿ ವರದಿ ಪ್ರಕಟಿಸಲಾಗಿತ್ತು. ಇದಕ್ಕೂ ಕೂಡಲೇ ಸ್ಪಂದಿಸಿದ ಸಂಚಾರ ವಿಭಾಗದ ಎಸಿಪಿ ಶಿವಶಂಕರ್, ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು. ಅದರಂತೆ ಕೃಷ್ಣರಾಜ ಸಂಚಾರ ಠಾಣೆ ಪೊಲೀಸರು, ಸೈಕಲ್ ಟ್ರ್ಯಾಕ್‌ನಲ್ಲಿ ಯಾರೂ ವಾಹನ ನಿಲುಗಡೆ ಮಾಡದಂತೆ ಪ್ರಕಟಿಸಿದ್ದಲ್ಲದೆ, ಗಸ್ತಿನ ವೇಳೆ ನಿಗಾ ವಹಿಸುತ್ತಿದ್ದಾರೆ.

ಬಂಡಿಪಾಳ್ಯ ಎಪಿಎಂಸಿಯಲ್ಲಿ ಜೂಜು; ನಾಲ್ವರು ವಶಕ್ಕೆ

ಮೈಸೂರು, ಮಾ.15(ಎಸ್‌ಬಿಡಿ)– ಬಂಡಿಪಾಳ್ಯ ಎಪಿಎಂಸಿ ಆವರಣದಲ್ಲಿ ಜೂಜಾಡುತ್ತಿದ್ದ ನಾಲ್ವರನ್ನು ಮೈಸೂರು ದಕ್ಷಿಣ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಎಪಿಎಂಸಿ 'ಎ' ಬ್ಲಾಕ್‌ನ ದಿನಸಿ ಅಂಗಡಿಯೊಂದರ ಬಳಿ ಜೂಜಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಮೈಸೂರು ದಕ್ಷಿಣ ಠಾಣೆಯ ಎಸ್‌ಐ ಬಸಪ್ಪ ಕೊರವಿ, ಸಿಬ್ಬಂದಿ ಸುನೀಲ್ ಕುಮಾರ್ ಹಾಗೂ ಪವನ್‌ಕುಮಾರ್ ದಾಳಿ ನಡೆಸಿದ್ದಾರೆ. ಪಣಕ್ಕಿಟ್ಟಿದ್ದ 6870 ರೂ. ಹಾಗೂ ಜೂಜಾಡುತ್ತಿದ್ದ ನಾಲ್ವರನ್ನು ವಶಕ್ಕೆ ಪಡೆದಿದ್ದಾರೆ. ಅವರೆಲ್ಲಾ ಕೂಲಿ ಕಾರ್ಮಿಕರು ಎಂದು ತಿಳಿದು ಬಂದಿದೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕಿಡ್ನಿ ರೋಗಗಳಿಗೆ ಸಂಬಂಧಿಸಿದಂತೆ ಉಚಿತ ಸಲಹೆ



ಮೈಸೂರಿನ ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆಯಲ್ಲಿ ವಿಶ್ವ ಕಿಡ್ನಿ ದಿನಾಚರಣೆ ಅಂಗವಾಗಿ ಒಂದು ವಾರಗಳ ಕಾಲ ಕಿಡ್ನಿ ರೋಗಗಳಿಗೆ ಸಂಬಂಧಿಸಿದಂತೆ ಉಚಿತ ಸಲಹೆಯನ್ನು ನೆಫ್ರಾಲಜಿಸ್ಟ್ ಹಾಗೂ ಕಸಿ ತಜ್ಞ ವೈದ್ಯರಾದ ಡಾ. ಎಂ ಎಸ್ ಶಶಾಂಕ್ ಅವರ ನೇತೃತ್ವದಲ್ಲಿ ಏರ್ಪಡಿಸಲಾಗಿದೆ

ಅವಹೇಳನಕಾರಿ ಪೋಸ್ಟರ್ ಪ್ರಕರಣ

ಸತೀಶ್‌ಗೆ ಪೊಲೀಸರು ನೀಡಿದ್ದ ಗಡಿಪಾರು ನೋಟಿಸ್ ರದ್ದು

ಮೈಸೂರು, ಮಾ. 15(ಆರ್‌ಕೆ)– ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಪೋಸ್ಟರ್ ಹಾಕಿದ್ದ ಆರೋಪದ ಹಿನ್ನೆಲೆಯಲ್ಲಿ ಬಂಧಿತರಾಗಿ ಬಿಡುಗಡೆಯಾಗಿರುವ ಉದ್ಯಮಿ ಸತೀಶ್ (ಪಾಂಡುರಂಗ) ಅವರ ಗಡಿಪಾರು ಸಂಬಂಧ ಪೊಲೀಸರು ನೀಡಿದ್ದ ನೋಟಿಸ್ ಅನ್ನು ಮೈಸೂರು ನ್ಯಾಯಾಲಯ ಇಂದು ರದ್ದುಗೊಳಿಸಿದೆ.

ಪ್ರಕರಣದ ಹಿನ್ನೆಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿ ಹಾಗೂ ಸತೀಶ್ ಅವರಿಗೆ ರಕ್ಷಣೆ ಕಷ್ಟಸಾಧ್ಯವಾದ್ದರಿಂದ ಅವರನ್ನು ಗಡಿಪಾರು ಮಾಡಲು ಅವಕಾಶ ನೀಡಬೇಕೆಂದು ಕೋರಿ ಪೊಲೀಸರು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದರಲ್ಲದೇ, ಗಡಿಪಾರು ಸಂಬಂಧ ಸತೀಶ್ ಅವರಿಗೂ ನೋಟಿಸ್ ನೀಡಿದ್ದರು.

ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡಿದ್ದ ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಉಷಾರಾಣಿ ಅವರು, ವಾದ–ಪ್ರತಿವಾದಗಳನ್ನು ಆಲಿಸಿ ಗಡಿಪಾರು ನೋಟಿಸ್ ಪ್ರಕ್ರಿಯೆ ನಿಯಮ ಉಲ್ಲಂಘನೆಯಾದ ಕಾರಣ ಪೊಲೀಸರು ನೀಡಿದ್ದ ನೋಟಿಸ್ ಅನ್ನು ಇಂದು ಮಧ್ಯಾಹ್ನ ವಜಾಗೊಳಿಸಿದ್ದಾರೆ.

ಈ ಪ್ರಕರಣದಲ್ಲಿ ನಿರ್ದಿಷ್ಟ ವ್ಯಕ್ತಿ ದೂರು ನೀಡದಿದ್ದರೂ ಸುಮೋಟೋ ಎಫ್‌ಐಆರ್ ದಾಖಲಿಸಿದ ಪೊಲೀಸರು, ಸತೀಶ್ ಅವರನ್ನು ಬಂಧಿಸಿದರು. ಅವರ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಳ್ಳದೇ ತನಿಖೆ ನಡೆಸುತ್ತಿರುವುದು ಸರಿಯಲ್ಲ ಎಂದು ವಾದ ಮಂಡಿಸಿದ ಸತೀಶ್ ಪರ ವಕೀಲ ಅದು ಭಾಸ್ಕರ್, ಯಾವುದೇ ಅಪರಾಧ ಪ್ರಕರಣದ ಹಿನ್ನೆಲೆ ಇಲ್ಲದ, ರೌಡಿಶೀಟರ್ ಅಲ್ಲದ, ಒಮ್ಮೆಯೂ ಜೈಲಿಗೆ ಹೋಗಿ ಬಂದವರೂ ಅಲ್ಲದ ಅಮಾಯಕ ಸತೀಶ್‌ರನ್ನು ಗಡಿಪಾರು ಮಾಡುವುದಾಗಿ ನೋಟಿಸ್ ನೀಡಿರುವುದು ಕಾನೂನು ಬಾಹಿರ ಎಂದು ವಾದಿಸಿದ್ದರು.

ಉದ್ದೇಶಿತ ಕ್ಷೇತ್ರ ಪುನರ್ವಿಂಗಡಣೆ ವಿಚಾರ ಒಕ್ಕೂಟ ವ್ಯವಸ್ಥೆಗೆ ಧಕ್ಕೆ

ಎಐಸಿಸಿ ರಾಷ್ಟ್ರೀಯ ವಕ್ತಾರರೂ ಆದ ಖ್ಯಾತ ನ್ಯಾಯವಾದಿ ಅಭಿಷೇಕ್ ಮನು ಸಿಂಘ್ವಿ ಅಭಿಮತ

ಮೈಸೂರು, ಮಾ.15(ಎಂಕೆ)– ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ವಿಚಾರದಲ್ಲಿ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ನೀತಿಯು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರಲಿದ್ದು, ಅರ್ಧ ಸತ್ಯ ಮಾತ್ರ ಹೇಳಲಾಗಿದೆ ಎಂದು ಎಐಸಿಸಿ ರಾಷ್ಟ್ರೀಯ ವಕ್ತಾರ, ರಾಜ್ಯ ಸಭಾ ಸದಸ್ಯರೂ ಆದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ದೂರಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರ ಪುನರ್ ವಿಂಗಡಣೆ ಮಾಡುತ್ತೇವೆ. ಆದರೆ ಸಂಖ್ಯೆ ಹೆಚ್ಚಳವಾಗುವುದಿಲ್ಲ ಎನ್ನುತ್ತಿದ್ದಾರೆ. ಸಂಖ್ಯೆ ಹೆಚ್ಚಳವಾಗುವುದಿಲ್ಲ ಎಂದರೆ ಒಬ್ಬರಿಂದ ಕಿತ್ತು ಮತ್ತೊಬ್ಬರಿಗೆ ನೀಡಬೇಕು. ಅಲ್ಲದೆ ಕ್ಷೇತ್ರ ಪುನರ್ ವಿಂಗಡಣೆ ಸಂಬಂಧ ಯಾವ ಪಕ್ಷಗಳ ಸಭೆಯನ್ನು ಕರೆದಿಲ್ಲ ಎಂದರು.

ತಾವೇ ಮೂವರು ಕುಳಿತುಕೊಂಡು ನಿರ್ಣಯ ಮಾಡಿಕೊಂಡು ವಿಂಗಡಣೆ ಕಾರ್ಯಕ್ಕೆ ಮುಂದಾಗಿದ್ದು, ಅರ್ಧ ಸತ್ಯ ಮಾತ್ರ ಹೇಳಲಾಗಿದೆ. ಅಲ್ಲದೆ ಉತ್ತರ ಭಾರತದ ರಾಜ್ಯಗಳಲ್ಲಿ ಕ್ಷೇತ್ರಗಳು ಹೆಚ್ಚಳವಾಗುವ ಬಗ್ಗೆ ಕೇಂದ್ರದ ಗೃಹ ಸಚಿವ ಅಮಿತ್ ಶಾ ಮೌನವಾಗಿದ್ದಾರೆ. ಕರ್ನಾಟದಲ್ಲಿ ಮುಖ್ಯಮಂತ್ರಿಯಾಗಿದ್ದ ಎಸ್.ಆರ್. ಬೊಮ್ಮಾಯಿ ಪ್ರಕರಣದಲ್ಲಿ ಒಕ್ಕೂಟ ವ್ಯವಸ್ಥೆ ಬಗ್ಗೆ ಸುಪ್ರೀಂಕೋರ್ಟ್ ನೀಡಿದ ತೀರ್ಪಿಗೆ ವ್ಯತಿರಿಕ್ತವಾಗಿ ಕ್ಷೇತ್ರ ಪುನರ್ ವಿಂಗಡಣೆ ನಡೆಯುತ್ತಿದೆ ಎಂದು ಕಿಡಿಕಾರಿದರು.

ಮೀಸಲಾತಿ ಸಂವಿಧಾನಬದ್ಧ: ಟೆಂಡರ್ ಮೀಸಲಾತಿ ಕುರಿತು ಪ್ರತಿಕ್ರಿಯಿಸಿ, ರಾಜ್ಯ ಸರ್ಕಾರ ಎಸ್‌ಸಿ–ಎಸ್‌ಟಿ, ಓಬಿಸಿಯೊಂದಿಗೆ ಮುಸ್ಲಿಂ ಸಮುದಾಯದ ಗುತ್ತಿಗೆದಾರರಿಗೆ ಟೆಂಡರ್‌ನಲ್ಲಿ ಮೀಸಲಾತಿ ಕಲ್ಪಿಸಿರುವುದು ಸಂವಿಧಾನ ಬದ್ಧವಾಗಿದೆ. ಹಿಂದುಳಿದ ವರ್ಗದಲ್ಲಿರುವ ಕಾರಣಕ್ಕೆ ನೀಡಲಾಗಿದೆಯೇ ಹೊರತು ಧರ್ಮದ ಆಧಾರದಲ್ಲಿ ಅಲ್ಲ ಎಂದು ಸಮರ್ಥಿಸಿಕೊಂಡರು.

ರಾಜ್ಯದಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಬಸವಣ್ಣನವರ ಕಾಯಕ ತತ್ವದ ಆಶಯದಂತೆ, ಪಕ್ಷದ ತತ್ವ–ಸಿದ್ಧಾಂತಗಳಿಗೆ ಅನುಸಾರವಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಅಧಿಕಾರ ಹಂಚಿಕೆಯಲ್ಲಿ ಕಿತ್ತಾಟ ಎಂಬುದು ಮಾಧ್ಯಮಗಳ ಸೃಷ್ಟಿ. ರಾಜ್ಯದಲ್ಲಿ ಅಂತಹ ಯಾವುದೇ ಕಿತ್ತಾಟವಿಲ್ಲ. ಅದು ಅಲ್ಲದೇ ಈ ವಿಚಾರ ನಮ್ಮ ವ್ಯಾಪ್ತಿಯನ್ನು ಮೀರಿದ್ದು, ಇದನ್ನೆಲ್ಲ ದೊಡ್ಡವರು ನೋಡಿಕೊಳ್ಳುತ್ತಾರೆ ಎಂದರು.

ಇವಿಎಂ ಬಳಕೆ ಬಗ್ಗೆ ತಕರಾರಿದೆ: ವಿದ್ಯುನ್ಮಾನ ಮತ ಯಂತ್ರಗಳ(ಇವಿಎಂ) ಬಗ್ಗೆ ಕಾಂಗ್ರೆಸ್ ನಾಯಕರ ಅಪಸ್ವರ ಕುರಿತು ಮಾತನಾಡಿದ ಅವರು, ವಿದ್ಯುನ್ಮಾನ ಮತ ಯಂತ್ರಗಳ (ಇವಿಎಂ) ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಆದರೆ ಚುನಾವಣೆ ಪ್ರಕ್ರಿಯೆಯಲ್ಲಿ ಅವುಗಳು ಬಳಕೆಯಾಗುತ್ತಿರುವ ಬಗ್ಗೆ ಮಾತ್ರ ತಕರಾರು ಇದೆ. ಲಕ್ಷಾಂತರ ಯಂತ್ರಗಳಲ್ಲಿ ಕೇವಲ ಶೇ.15ರಷ್ಟು ಶೇ.23ರಷ್ಟು ಮಾತ್ರ ಪರಿಶೀಲನೆ ಮಾಡುತ್ತೇವೆ ಎನ್ನುತ್ತಾರೆ. ಆದರೆ ಉಳಿದ ಯಂತ್ರಗಳನ್ನು ಏಕೆ ಪರಿಶೀಲನೆ ಮಾಡಬಾರದು ಎನ್ನುವುದು ನಮ್ಮ ಪ್ರಶ್ನೆಯಾಗಿದೆ ಎಂದು ಹೇಳಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಲೀಗಲ್ ಸೆಲ್ ರಾಜ್ಯಾಧ್ಯಕ್ಷ ಧನಂಜಯ್ಯ, ಮುಖಂಡರಾದ ಎಂ.ಶಿವಣ್ಣ ಎನ್.ಭಾಸ್ಕರ್, ವಕೀಲರಾದ ಚಂದ್ರಮೌಳಿ ಮತ್ತಿತರರಿದ್ದರು.


ಕಾಂಗ್ರೆಸ್ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎಐಸಿಸಿ ರಾಷ್ಟ್ರೀಯ ವಕ್ತಾರರೂ ಆದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಮಾತನಾಡಿದರು.

ಸಿಎಂ ವ್ಯಕ್ತಿತ್ವಕ್ಕೆ ಧಕ್ಕೆ ಉಂಟುಮಾಡುವ ಪ್ರಯತ್ನ...

ರಾಜ್ಯದಲ್ಲಿ ಆಡಳಿತ ಪಕ್ಷವನ್ನು ವಿರೋಧಿಸಲು ಪ್ರತಿಪಕ್ಷಗಳಿಗೆ ಬೇರೆ ಯಾವುದೇ ವಿಚಾರವಿರಲಿಲ್ಲ. ಅದಕ್ಕಾಗಿಯೇ ಮುಡಾ ಪ್ರಕರಣ ತರಲಾಯಿತು. ಪ್ರತಿಪಕ್ಷಗಳು ಸಿಎಂ ವ್ಯಕ್ತಿತ್ವಕ್ಕೆ ಧಕ್ಕೆ ಉಂಟುಮಾಡಲು ಈ ಪ್ರಕರಣ ತಂದರು. ಆದರೆ ಲೋಕಾಯುಕ್ತ ಕ್ಲೀನ್‌ಚಿಟ್ ನೀಡಿದೆ. ನನ್ನ ವಕೀಲ ವೃತ್ತಿ ಜೀವನದಲ್ಲಿ ವಕೀಲಗಾರಿಕೆ ಹಾಗೂ ರಾಜಕೀಯ ಎರಡನ್ನು ಒಟ್ಟಿಗೆ ಬೆರೆಸಿಲ್ಲ. ನ್ಯಾಯಾಲಯದಲ್ಲಿ ನನ್ನ ಕಕ್ಷಿದಾರರ ಪರವಾಗಿ ಮಾಡಿದ ವಾದ ಹಾಗೂ ತೀರ್ಪಿನ ಕುರಿತು ನಾನೂ ಮಾತನಾಡಬಹುದೇ ಹೊರತು, ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ನಿವೇಶನಗಳನ್ನು ಹಿಂದಿರುಗಿಸಿರುವ ಬಗ್ಗೆ ನಾನೇನೂ ಹೇಳಲು ಸಾಧ್ಯವಿಲ್ಲ.

– ಅಭಿಷೇಕ್ ಮನು ಸಿಂಘ್ವಿ, ಎಐಸಿಸಿ ರಾಷ್ಟ್ರೀಯ ವಕ್ತಾರ

ಇಂದು, ನಾಳೆ ಒಂಟಿಕೊಪ್ಪಲು ಗ್ರಾಮದೇವತೆ ಹಬ್ಬ

ಮೈಸೂರು, ಮಾ.15(ಎಂಕೆ)– ಮೈಸೂರು ಒಂಟಿಕೊಪ್ಪಲಿನ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಮಾರಮ್ಮ ದೇವಸ್ಥಾನದಲ್ಲಿ ನಾಳೆ(ಮಾ.16)ಯಿಂದ ಎರಡು ದಿನಗಳ ಕಾಲ ಗ್ರಾಮದೇವತೆಯ ಹಬ್ಬದ ನಡೆಯಲಿದೆ.

ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನ ಧರ್ಮದರ್ಶಿ ಸಮಿತಿ ವತಿಯಿಂದ ನಡೆಯುವ ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸವುಳ್ಳ ಶ್ರೀ ಮಾರಮ್ಮನ ಹಬ್ಬದ ಮೊದಲ ದಿನ ಸಂಜೆ 4 ಗಂಟೆಗೆ ತಂಪು, ಮಾ.17ರ ಸೋಮವಾರ ಸಂಜೆ 4 ಗಂಟೆಗೆ ಶ್ರೀ ಮಾರಮ್ಮನ ಮಡೆ ಹಬ್ಬದ ಆಚರಣೆ ಬಳಿಕ ಶ್ರೀ ಮಹದೇಶ್ವರ ಸ್ವಾಮಿ ಕರಗ ಉತ್ಸವ ನಡೆಯಲಿದೆ.

ದೇವಸ್ಥಾನದಿಂದ ಹೊರಡುವ ಕರಗ ಉತ್ಸವವು ವಾಲ್ಮೀಕಿ ರಸ್ತೆ, 3ನೇ ಮುಖ್ಯ ರಸ್ತೆ 4ನೇ ಮುಖ್ಯ ರಸ್ತೆ ಹಾಗೂ ಕಾಳಿದಾಸ ರಸ್ತೆ ಮೂಲಕ ದೇವಸ್ಥಾನದವರೆಗೆ ನಡೆಯಲಿದೆ ಎಂದು ಧರ್ಮದರ್ಶಿ ಸಮಿತಿ ತಿಳಿಸಿದೆ. ಅತ್ಯಂತ ವಿಜೃಂಭಣೆಯಿಂದ ಮಾರಮ್ಮ ತಾಯಿಯ ಹಬ್ಬ ಜರುಗಲಿದ್ದು, ಅಪಾರ ಭಕ್ತ ಸಮೂಹ ಸೇರಲಿದೆ. ಹರಕೆ ಕಟ್ಟಿಕೊಂಡಿರುವ ಭಕ್ತಾದಿಗಳು ಬಾಯಿಬೀಗ ಹರಕೆ ಸಲ್ಲಿಸಲಿದ್ದಾರೆ ಎಂದು ಮುಖಂಡ ಒಂಟಿಕೊಪ್ಪಲು ಗುರುರಾಜ್ ತಿಳಿಸಿದರು.

